# ಪೋಲಿಂಗ್ ಏಜೆಂಟರ ಕೈಪಿಡಿ

**ಫೆಬ್ರವರಿ 2019**

## ಭಾರತ ಚುನಾವಣಾ ಆಯೋಗ

| | ವಿಷಯ ಸೂಚಿ | |
|---|---|---|
| 1. | ಪೀಠಿಕೆ | |
| 2. | ಪೋಲಿಂಗ್ ಏಜೆಂಟರ ಪಾತ್ರ | |
| 3. | ಚುನಾವಣೆಗಳಲ್ಲಿ ಇವಿಎಂ ಮತ್ತು ವಿವಿಪ್ಯಾಟ್ | |
| 4. | ಬ್ಯಾಲೆಟ್ ಯೂನಿಟ್‌ಗಳು ಮತ್ತು ಕಂಟ್ರೋಲ್ ಯೂನಿಟ್‌ಗಳು | |
| 5. | ಪೋಲಿಂಗ್ ಏಜೆಂಟರುಗಳ ಮುಖ್ಯ ಕರ್ತವ್ಯಗಳು | |
| 6. | ಪೋಲಿಂಗ್ ಏಜೆಂಟರುಗಳ ಸಂಖ್ಯೆ | |
| 7. | ಪೋಲಿಂಗ್ ಏಜೆಂಟರುಗಳ ನೇಮಕಾತಿ | |
| 8. | ಪೋಲಿಂಗ್ ಏಜೆಂಟ್‌ರುಗಳ ನೇಮಕವನ್ನು ರದ್ದು ಮಾಡುವುದು | |
| 9. | ಪೋಲಿಂಗ್ ಏಜೆಂಟನಾಗಿ ನೇಮಕವಾಗಲು ಇರಬೇಕಾದ ಅರ್ಹತೆಗಳು | |
| 10. | ಮತದಾನದ ಪ್ರಕ್ರಿಯೆಗಳ ಬಗ್ಗೆ ಪೂರ್ವಾಭ್ಯಾಸ | |
| 11. | ಮತಗಟ್ಟೆಯನ್ನು ತಲುಪುವುದು | |
| 12. | ಪೋಲಿಂಗ್ ಏಜೆಂಟ್‌ರಿಗೆ ಒದಗಿಸಬೇಕಾದ ಸಾಮಗ್ರಿಗಳು | |
| 13. | ಪೋಲಿಂಗ್ ಏಜೆಂಟರ್‌ರುಗಳು ನೇಮಕಾತಿ ಪತ್ರವನ್ನು ಹಾಜರುಪಡಿಸುವುದು | |
| 14. | ಪೋಲಿಂಗ್ ಏಜೆಂಟ್‌ರುಗಳಿಗೆ ಪಾಸುಗಳು | |
| 15. | ಪೋಲಿಂಗ್ ಏಜೆಂಟರು ಬ್ಯಾಡ್ಜ್‌ಗಳನ್ನು ತೊಡುವಿಕೆ | |
| 16. | ಪೋಲಿಂಗ್ ಏಜೆಂಟರಿಗೆ ಆಸನ ವ್ಯವಸ್ಥೆ | |
| 17. | ಮುಕ್ತ ಮತ್ತು ನ್ಯಾಯೋಚಿತ ಚುನಾವಣೆಗೆ ಸಿದ್ಧತೆಗಳು | |
| 18. | ಮತದಾನ ಪ್ರಾರಂಭವಾಗುವುದಕ್ಕೆ ಮೊದಲು ಮಾಡಬೇಕಾದ ಪೂರ್ವ ಸಿದ್ಧತೆಗಳು | |
| 19. | ಮತದಾನ ಪ್ರಾರಂಭವಾಗುವುದಕ್ಕೆ ಮುಂಚಿತವಾಗಿ ಪ್ರಿಸೈಡಿಂಗ್ ಅಧಿಕಾರಿಯವರು ಮತಯಂತ್ರದ ಸಿದ್ಧತೆಗಳನ್ನು ಮಾಡುವುದು. | |
| | ಬ್ಯಾಲೆಟಿಂಗ್ ಯೂನಿಟ್ ಸಿದ್ಧತೆಗಳು<br>ಕಂಟ್ರೋಲ್ ಯೂನಿಟ್ ಸಿದ್ಧತೆಗಳು<br>ವಿವಿಪ್ಯಾಟ್ ಸಿದ್ಧತೆಗಳು | |
| 20. | ಅಣಕು ಮತದಾನ ನಡೆಸುವುದು | |
| 21. | ಕಂಟ್ರೋಲ್ ಯೂನಿಟ್ಟಿನಲ್ಲಿ ಗ್ರೀನ್ ಪೇಪರ್ ಸೀಲನ್ನು ಅಳವಡಿಸುವುದು | |
| 22. | ಕಂಟ್ರೋಲ್ ಯೂನಿಟ್ಟಿನ ರಿಸಲ್ಟ್ ಸೆಕ್ಷನ್ನನ್ನು ಮುಚ್ಚುವುದು ಮತ್ತು ಮೊಹರು ಮಾಡುವುದು | |
| | ರಿಸಲ್ಟ್ ಸೆಕ್ಷನ್ನ ಹೊರಕವಚವನ್ನು ಮುಚ್ಚುವುದು ಮತ್ತು ಮೊಹರು ಮಾಡುವುದು | |
| 23. | ಸ್ಟ್ರಿಪ್ ಸೀಲ್ | |
| 24. | ಸ್ಟ್ರಿಪ್ ಸೀಲ್‌ನಿಂದ ಕಂಟ್ರೋಲ್ ಯೂನಿಟ್ಟನ್ನು ಮೊಹರು ಮಾಡುವ ವಿಧಾನ | |
| | ಸ್ಟ್ರಿಪ್ ಸೀಲ್‌ನ್ನು ಅಳವಡಿಸಿದ ನಂತರ<br>ಸ್ಟ್ರಿಪ್ ಸೀಲ್‌ನ್ನು ಮೊಹರು ಮಾಡುವಾಗ ಪ್ರಮುಖ ಮುನ್ನೆಚ್ಚರಿಕೆ ಕ್ರಮಗಳು | |
| 25. | ವಾಸ್ತವಿಕ ಮತದಾನಕ್ಕೆ ಸಿದ್ಧವಾದ ಮತಯಂತ್ರ | |
| 26. | ಪೇಪರ್‌ಸೀಲ್‌ಗಳ ಲೆಕ್ಕ | |
| 27. | ಮತದಾನದ ಗೌಪ್ಯತೆಯನ್ನು ಕಾಪಾಡುವುದು | |
| 28. | ಮತದಾನದ ಪ್ರಾರಂಭ | |
| 29. | ಮತಗಟ್ಟೆಗೆ ಮತದಾರರ ಪ್ರವೇಶ | |
| 30. | ಮತದಾರರನ್ನು ಗುರುತಿಸುವುದು ಹಾಗೂ ಅಳಿಸಲಾಗದ ಶಾಯಿಯನ್ನು ಹಾಕುವುದು | |
| 31. | ಮತಯಂತ್ರಗಳಿಂದ ಮತಗಳನ್ನು ದಾಖಲು ಮಾಡುವ ವಿಧಾನ | |

| | | |
|---|---|---|
| 32. | ಮತಗಟ್ಟೆಯಲ್ಲಿ ಮತದಾನದ ಪ್ರಕ್ರಿಯೆ | |
| 33. | ಮತದಾರರ ಗುರುತನ್ನು ಪ್ರಶ್ನಿಸುವುದು | |
| 34. | ಮೃತ, ಮತದಾರರ ಪಟ್ಟಿಯಲ್ಲಿ ಹೆಸರಿಲ್ಲದ ಮತ್ತು ನಕಲಿ ಮತದಾರನೆಂದು ಆಪಾದಿಸಲಾದ ಮತದಾರರ ಪಟ್ಟಿ | |
| 35. | ಮತದಾರರ ಗುರುತಿನ ಬಗ್ಗೆ ಔಪಚಾರಿಕವಾಗಿ ಪ್ರಶ್ನಿಸುವುದು | |
| 36. | ಚಾಲೆಂಜ್ ಫೀಜು (ಆಕ್ಷೇಪಣಾ ಶುಲ್ಕ) | |
| 37. | ಪ್ರಶ್ನಿಸುವ ಬಗ್ಗೆ ಸಂಕ್ಷಿಪ್ತ ವಿಚಾರಣೆ | |
| 38. | ಆಕ್ಷೇಪಣೆಗೆ ಸಲ್ಲಿಸಿದ ಶುಲ್ಕವನ್ನು ಹಿಂದಿರುಗಿಸುವುದು ಅಥವಾ ಮುಟ್ಟುಗೋಲು ಹಾಕಿಕೊಳ್ಳುವುದು | |
| 39. | ಮತದಾರರ ಪಟ್ಟಿಯಲ್ಲಿ ಲಿಪಿಕ ದೋಷ ಹಾಗೂ ಮುದ್ರಣ ದೋಷಗಳಿಗೆ ಪ್ರಾಮುಖ್ಯತೆ ಕೊಡಬಾರದು | |
| 40. | ಮತದಾರನ ಅರ್ಹತೆಯನ್ನು ಪ್ರಶ್ನಿಸಬಾರದು | |
| 41. | ಕಡಿಮೆ ವಯಸ್ಸಿನ ಮತದಾರರು ಮತದಾನ ಮಾಡದಂತೆ ಮುನ್ನೆಚ್ಚರಿಕೆಗಳು | |
| 42. | ಪ್ರಾತಿನಿಧ್ಯದ ಮೂಲಕ ಮತದಾನ (ಒಬ್ಬರ ಪರವಾಗಿ ಬೇರೊಬ್ಬ ಮತ ಚಲಾಯಿಸುವುದು): ವರ್ಗೀಕೃತ ಸೇವಾ ಮತದಾರರು | |
| 43. | ಅಂಧ ಅಥವಾ ಅಶಕ್ತ ಮತದಾರರಿಂದ ಮತದಾನ | |
| 44. | ಟೆಂಡರ್ಡ್ ಮತಗಳು | |
| 45. | ಮತದಾರರು ಮತ ಚಲಾಯಿಸದಿರಲು ನಿರ್ಧರಿಸುವುದು | |
| 46. | ಪೇಪರ್ ಟ್ರೇಲ್‌ನ ಮೇಲೆ ಮುದ್ರಿತವಾದ ವಿವರಗಳ ಬಗ್ಗೆ ದೂರುಗಳಿದ್ದ ಸಂದರ್ಭದಲ್ಲಿ ಪ್ರಕ್ರಿಯೆ | |
| 47. | ಮತದಾನದ ಗೌಪ್ಯತೆಯ ಉಲ್ಲಂಘನೆ | |
| 48. | ಮತದಾನ ನಡೆಯುತ್ತಿರುವಾಗ ಮತದಾನ ಕಂಪಾರ್ಟ್‌ಮೆಂಟಿನೊಳಗೆ ಪ್ರಿಸೈಡಿಂಗ್ ಆಫೀಸರ್‌ನು ಪ್ರವೇಶಿಸುವುದು | |
| 49. | ಮತದಾನದ ಮುಕ್ತಾಯದ ಸಮಯದಲ್ಲಿ ಹಾಜರಿರುವ ವ್ಯಕ್ತಿಗಳಿಂದ ಮತದಾನ | |
| 50. | ಮತದಾನದ ಮುಕ್ತಾಯ | |
| | ಪ್ರಿಸೈಡಿಂಗ್ ಆಫೀಸರ್ ಅವರು ದಾಖಲಾದ ಮತಗಳ ಸಂಖ್ಯೆಯ ಪ್ರತಿಯನ್ನು (ನಮೂನೆ 17ಸಿ) ಒದಗಿಸುವುದು | |
| | ಮತದಾನ ಮುಕ್ತಾಯವಾದ ತರುವಾಯ ಮತಯಂತ್ರವನ್ನು ಸೀಲು ಮಾಡುವುದು | |
| | ಚುನಾವಣಾ ಕಾಗದಪತ್ರಗಳನ್ನು ಮೊಹರು ಮಾಡುವುದು–ಪೋಲಿಂಗ್ ಏಜೆಂಟರು ಅವುಗಳಿಗೆ ತಮ್ಮ ಮೊಹರುಗಳನ್ನು ಹಾಕುವುದು | |
| 51. | ಸಂಗ್ರಹಣೆ ಮತ್ತು ದಾಸ್ತಾನು ಕೇಂದ್ರಕ್ಕೆ ಮತಯಂತ್ರ ಮತ್ತು ಚುನಾವಣಾ ಕಾಗದಗಳನ್ನು ಸಾಗಿಸುವುದು | |
| 52. | ಪೋಲೀಂಗ್ ಏಜೆಂಟರು ಮತಯಂತ್ರಗಳನ್ನು ಕೊಂಡೊಯ್ಯುವ ವಾಹನಗಳ ಜೊತೆಯಲ್ಲಿ ಹೋಗುವುದು | |
| 53. | ದೊಂಬಿ, ಮತಗಟ್ಟೆಯನ್ನು ಬಲವಂತವಾಗಿ ವಶಪಡಿಸಿಕೊಳ್ಳುವುದು, ಮುಂತಾದ ಕಾರಣಗಳಿಗಾಗಿ ಮತದಾನದ ಮುಂದೂಡುವಿಕೆ | |
| 54. | ಮತಗಟ್ಟೆಯ ಒಳಗಡೆ ಅಥವಾ ಅದರ ಸಮೀಪದಲ್ಲಿ ಅಶಿಸ್ತಿನ ನಡತೆ | |

| | | |
|---|---|---|
| **55.** | **ಮತಗಟ್ಟೆಗಳಿಂದ ಮತಯಂತ್ರವನ್ನು ತೆಗೆದುಕೊಂಡು ಹೋಗುವುದು ಅಥವಾ ಅದನ್ನು ಹಾಳು ಮಾಡುವುದು ಅಪರಾಧ** | |
| **56.** | **ಪ್ರಚಾರ ಮಾಡುವುದಕ್ಕೆ ನಿಷೇಧ** | |
| | **ಪರಿಶಿಷ್ಟ – I**<br>ನಮೂನೆ 10 | |
| | **ಪರಿಶಿಷ್ಟ – I(ಎ)**<br>ಅಭ್ಯರ್ಥಿಗಳ ಮತ್ತು ಅವರ ಚುನಾವಣಾ ಏಜೆಂಟರ ಮಾದರಿ ಸಹಿಗಳ ಸಂಬಂಧದ ನಮೂನೆ | |
| | **ಪರಿಶಿಷ್ಟ – II**<br>ಪೋಲಿಂಗ್ ಏಜೆಂಟರ ನೇಮಕವನ್ನು ರದ್ದುಮಾಡುವುದು | |
| | **ಪರಿಶಿಷ್ಟ – III**<br>ಪ್ರಿಸೈಡಿಂಗ್ ಅಧಿಕಾರಿಯವರ ಘೋಷಣೆ<br>ಹೆಚ್ಚಿನ ಮತಯಂತ್ರವನ್ನೇನಾದರೂ ಉಪಯೋಗಿಸುವ ಸಮಯದಲ್ಲಿ ಪ್ರಿಸೈಡಿಂಗ್ ಅಧಿಕಾರಿಯು ಮಾಡಬೇಕಾದ ಘೋಷಣೆ, ಯಾವುದಾದರೂ ಇದ್ದರೆ<br>ಮತದಾನದ ಕೊನೆಯಲ್ಲಿ ಮಾಡುವ ಘೋಷಣೆ<br>ಮತಯಂತ್ರವನ್ನು ಮೊಹರು ಮಾಡಿದ ತರುವಾಯ ಘೋಷಣೆ | |
| | **ಪರಿಶಿಷ್ಟ – IV**<br>ಆಕ್ಷೇಪಿತ ಮತಗಳ ಪಟ್ಟಿ | |
| | **ಪರಿಶಿಷ್ಟ – V**<br>ಮತದಾರನು ಮಾಡುವ ಘೋಷಣೆಯ ನಮೂನೆ | |
| | **ಪರಿಶಿಷ್ಟ – VI**<br>ವರ್ಗೀಕರಿಸಲಾದ ಸೇವಾ ಮತದಾರರು ಮತ್ತು ಪ್ರತಿನಿಧಿಗಳ ಮತಗಟ್ಟೆವಾರು ಉಪ–ಪಟ್ಟಿ (ಚುನಾವಣೆ ನಡೆಸುವ ನಿಯಮಗಳು, 1961ರ ನಿಯಮ 27ಪಿ (3)ನ್ನು ನೋಡಿ) | |
| | **ಪರಿಶಿಷ್ಟ– VII**<br>ಅಂಧ ಅಥವಾ ಅಶಕ್ತ ಮತದಾರರ ಸಂಗಡಿಗರಿಂದ ಘೋಷಣೆ | |
| | **ಪರಿಶಿಷ್ಟ –VIII**<br>ನಮೂನೆ –17ಸಿ | |
| | **ಅನುಬಂಧ –IX**<br>ಅಣಕು ಮತದಾನ ಪ್ರಮಾಣಪತ್ರ | |

**1. ಪೀಠಿಕೆ:**

ವಿಧಾನಸಭೆ ಅಥವಾ ಸಂಸದೀಯ ಕ್ಷೇತ್ರದಲ್ಲಿ ಮತದಾನದ ದಿನದಂದು ಪ್ರತಿ ಮತಗಟ್ಟೆಯಲ್ಲೂ ಅಭ್ಯರ್ಥಿಯು ಇರುವುದಕ್ಕೆ ಆಗುವುದಿಲ್ಲ. ಆದ್ದರಿಂದ, ಪ್ರತಿಯೊಂದು ಮತಗಟ್ಟೆಯಲ್ಲಿ ಆತನ ಹಿತಾಸಕ್ತಿಗಳನ್ನು ಗಮನಿಸಲು, ಆತನ ಪ್ರತಿನಿಧಿಯಾಗಿ ಕಾರ್ಯನಿರ್ವಹಿಸಲು ಪೋಲಿಂಗ್ ಏಜೆಂಟರುಗಳನ್ನು ನೇಮಿಸಲು ಕಾನೂನು ಅಭ್ಯರ್ಥಿಗೆ ಅವಕಾಶ ನೀಡಿದೆ. ಪ್ರತಿಯೊಂದು ಮತಗಟ್ಟೆಯಲ್ಲಿ ಮುಕ್ತವಾಗಿ ಮತ್ತು ನ್ಯಾಯೋಚಿತ ರೀತಿಯಲ್ಲಿ ಚುನಾವಣೆ ನಡೆಯಬೇಕೆಂದು ಮತ್ತು ಆ ಬಗ್ಗೆ ಪ್ರತಿಯೊಬ್ಬ ಅಭ್ಯರ್ಥಿ ತೃಪ್ತನಾಗಿರಬೇಕೆಂಬುದೇ ಪ್ರಜಾಸತ್ತಾತ್ಮಕ ಚುನಾವಣೆಯ ಮೂಲ ತತ್ವವಾಗಿದೆ. ಮತಗಟ್ಟೆಗಳಲ್ಲಿ ಅಭ್ಯರ್ಥಿಯ ಪ್ರತಿನಿಧಿಯಾಗಿರುವ ಪೋಲಿಂಗ್ ಏಜೆಂಟರುಗಳು ತಮ್ಮ ಕರ್ತವ್ಯಗಳನ್ನು ಚೆನ್ನಾಗಿ ಮತ್ತು ಮನಃಪೂರ್ವಕವಾಗಿ ನಿರ್ವಹಿಸಿದಲ್ಲಿ, ಅವರು ಪ್ರತಿನಿಧಿಸುವ ಅಭ್ಯರ್ಥಿಗೆ ಸಹಾಯವಾಗುವುದಲ್ಲದೆ ಆ ಏಜೆಂಟರುಗಳ ಪೂರ್ಣ ಸಹಾಯ ದೊರೆತಲ್ಲಿ ಮತದಾನವು ಸುಗಮವಾಗಿ ನಡೆಯಲು ಚುನಾವಣಾ ಅಧಿಕಾರಿಗಳಿಗೂ ಸಹ ಸಹಾಯವಾಗುತ್ತದೆ.

**2. ಪೋಲಿಂಗ್ ಏಜೆಂಟರ ಪಾತ್ರ**

2.1 ಸಮಗ್ರ ಚುನಾವಣಾ ಪ್ರಕ್ರಿಯೆಯಲ್ಲಿ ನೈಜ ಮತದಾನದ ಅವಧಿಯು ಬಹಳ ಪ್ರಮುಖ ಭಾಗವಾಗಿದ್ದು, ಇದರಲ್ಲಿ ಪೋಲಿಂಗ್ ಏಜೆಂಟರುಗಳು ಬಹಳ ಪ್ರಮುಖ ಪಾತ್ರ ವಹಿಸುತ್ತಾರೆ. ಪೋಲಿಂಗ್ ಏಜೆಂಟರುಗಳು ಸಹಕಾರ ಮನೋಭಾವದಿಂದ ತಮ್ಮ ಕರ್ತವ್ಯಗಳನ್ನು ನಿರ್ವಹಿಸಿದರೆ, ಮತಗಟ್ಟೆಯಲ್ಲಿ ಪ್ರಿಸೈಡಿಂಗ್ ಆಫೀಸರ್ ಮತ್ತು ಪೋಲಿಂಗ್ ಆಫೀಸರ್‌ಗಳ ಕೆಲಸವು ಬಹಳ ಸುಗಮವಾಗುತ್ತದೆ. ಈ ಉದ್ದೇಶಕ್ಕಾಗಿ ಅವರು ತಮ್ಮ ಕರ್ತವ್ಯಗಳನ್ನು ಸ್ಪಷ್ಟವಾಗಿ ತಿಳಿದುಕೊಂಡಿರಬೇಕು ಮತ್ತು ಕಾನೂನಿನ ವ್ಯಾಪ್ತಿಯಲ್ಲಿ ಬುದ್ಧಿವಂತಿಕೆಯಿಂದ ಅವುಗಳನ್ನು ನಿರ್ವಹಿಸಬೇಕು.

2.2 ವಿವಿಪ್ಯಾಟ್‌ಗಳೊಂದಿಗೆ ಇವಿಎಂಗಳನ್ನು ಬಳಸಿ ಚುನಾವಣೆಗಳನ್ನು ನಡೆಸುವುದಕ್ಕಾಗಿ ನಿಗದಿಪಡಿಸಿದ ಇತ್ತೀಚಿನ ನಿಯಮಗಳು ಮತ್ತು ಕಾರ್ಯವಿಧಾನಗಳ ಕುರಿತು ಸ್ವತಃ ಮತಗಟ್ಟೆ ಏಜೆಂಟನು ತಿಳಿದುಕೊಂಡಿರಬೇಕು. ಇವಿಎಂಗಳು ಮತ್ತು ವಿವಿಪ್ಯಾಟ್‌ಗಳ ಕಾರ್ಯಾಚರಣೆಯ ಬಗ್ಗೆಯೂ ಸಹ ಅವರು ಸ್ವತಃ ತಿಳಿದುಕೊಂಡಿರಬೇಕು. ಈ ಉದ್ದೇಶಕ್ಕಾಗಿ, ರಿಟರ್ನಿಂಗ್ ಅಧಿಕಾರಿಯು ಏರ್ಪಡಿಸಿದ ವಿವಿಪ್ಯಾಟ್‌ಗಳೊಂದಿಗೆ ಇವಿಎಂಗಳ ಪ್ರಾತ್ಯಕ್ಷಿಕೆಗೆ ಮತಗಟ್ಟೆ ಏಜೆಂಟ್‌ನು ಹಾಜರಾಗಬೇಕು ಅಲ್ಲಿ ಅವುಗಳ ಕಾರ್ಯಾಚರಣೆಯ ಬಗ್ಗೆ ವಿವರಿಸಲಾಗುವುದು.

## 3. ಚುನಾವಣೆಗಳಲ್ಲಿ ಇವಿಎಂ ಮತ್ತು ವಿವಿಪ್ಯಾಟ್

3.1 ಭಾರತದಲ್ಲಿ ಚುನಾವಣೆಗಳನ್ನು ವಿವಿಪ್ಯಾಟ್‌ಗಳೊಂದಿಗೆ ವಿದ್ಯುನ್ಮಾನ ಮತಯಂತ್ರಗಳನ್ನು ಬಳಸಿ ನಡೆಸಲಾಗುತ್ತದೆ. ಈ ಇವಿಎಂಗಳು ಮತ್ತು ವಿವಿಪ್ಯಾಟ್‌ಗಳನ್ನು ಕೇಂದ್ರ ಸರ್ಕಾರದ ಎರಡು ಸಂಸ್ಥೆಗಳು ತಯಾರಿಸಿವೆ. ಅವುಗಳೆಂದರೆ, ಎಲೆಕ್ಟ್ರಾನಿಕ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ ಲಿಮಿಟೆಡ್, ಹೈದರಾಬಾದ್ ಮತ್ತು ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್, ಬೆಂಗಳೂರು. ಮತಪತ್ರಗಳು ಮತ್ತು ಮತಪೆಟ್ಟಿಗೆಗಳನ್ನು ಬಳಸಲಾಗುತ್ತಿದ್ದ ಸಾಂಪ್ರದಾಯಿಕ ವ್ಯವಸ್ಥೆಯಲ್ಲಿನ ಎಲ್ಲಾ ಪ್ರಮುಖ ಲಕ್ಷಣಗಳನ್ನು ಹಾಗೆಯೇ ಇರಿಸಿಕೊಂಡು ಇವಿಎಂಗಳನ್ನು, ವಿನ್ಯಾಸಗೊಳಿಸಲಾಗಿದೆ.

3.2 ಇವಿಎಂಗಳಲ್ಲಿ, ಎಂ2 ಮಾದರಿ ಮತ್ತು ಎಂ3 ಮಾದರಿಗಳೆಂಬ ಎರಡು ಮಾದರಿಗಳಿವೆ. ವಿವಿಪ್ಯಾಟ್‌ಗಳಲ್ಲಿ ವಿವಿಪ್ಯಾಟ್ ಸ್ಟೇಟಸ್ ಡಿಸ್‌ಪ್ಲೇ ಯೂನಿಟ್‌ನೊಂದಿಗೆ ಒಂದು (ವಿಎಸ್‌ಡಿಯು) ಮತ್ತು ಮತ್ತೊಂದು ವಿಎಸ್‌ಡಿಯು ಇಲ್ಲದ ವಿವಿಪ್ಯಾಟ್‌ಗಳೆಂಬ ಎರಡು ಮಾದರಿಗಳಿವೆ. ವಿಎಸ್‌ಡಿಯು ಇಲ್ಲದ ವಿವಿಪ್ಯಾಟ್ ಅನ್ನು ಎಂ3 ಮಾದರಿಯ ಇವಿಎಂಗಳೊಂದಿಗೆ ಬಳಸಲಾಗುತ್ತದೆ.

3.3. ಈ ಯಂತ್ರವು 7.5 ವೋಲ್ಟ್ ಆಲ್ಕೈನ್ ಬ್ಯಾಟರಿ ಚಾಲಿತವಾಗಿದ್ದು, ಎಲ್ಲಿಯಾದರೂ ಮತ್ತು ಯಾವುದೇ ಸಂದರ್ಭದಲ್ಲಿಯೂ ಇದನ್ನು ಬಳಸಬಹುದು. ಇದು ವಿರೂಪರಹಿತ, ದೋಷರಹಿತವಾಗಿದ್ದು ಉಪಯೋಗಿಸಲು ಸುಲಭವಾಗಿದೆ. ಈ ವಿದ್ಯುನ್ಮಾನ ಮತಯಂತ್ರವು ಎರಡು ಘಟಕಗಳನ್ನು ಹೊಂದಿದೆ. ಅವುಗಳೆಂದರೆ, ಕಂಟ್ರೋಲ್ ಯೂನಿಟ್ ಮತ್ತು ಬ್ಯಾಲೆಟ್ ಯೂನಿಟ್. ಈ ಯಂತ್ರದ ಎರಡೂ ಯೂನಿಟ್‌ಗಳನ್ನು ಎರಡು ಪ್ರತ್ಯೇಕ ಕ್ಯಾರಿಂಗ್ ಕೇಸ್‌ಗಳಲ್ಲಿ ಪೂರೈಸಲಾಗುತ್ತದೆ. ಈ ಯಂತ್ರದಲ್ಲಿ ಒಂದು ಸಾರಿ ದಾಖಲಾದ ಮತದಾನದ ಮಾಹಿತಿಯು ಬ್ಯಾಟರಿ ತೆಗೆದರೂ ಕೂಡ ಆ ಮಾಹಿತಿ ಹಾಗೇ ಉಳಿದಿರುತ್ತದೆ.

3.4 ಈ ಮತಯಂತ್ರವು ಅದರಲ್ಲೂ ವಿಶೇಷವಾಗಿ 'ಬ್ಯಾಲೆಟ್ ಯೂನಿಟ್' ಅನ್ನು ಸಾಂಪ್ರದಾಯಿಕ ಮತದಾನ ವ್ಯವಸ್ಥೆಯ ಎಲ್ಲಾ ಮುಖ್ಯ ಅಂಶಗಳು ಅಡಕವಾಗಿರುವಂತೆ ವಿನ್ಯಾಸಗೊಳಿಸಲಾಗಿದೆ. ಆದರೆ ಒಂದೇ ಒಂದು ಬದಲಾವಣೆಯೆಂದರೆ ಮತದಾರನು, ಸಾಂಪ್ರದಾಯಿಕ ಮತ ವ್ಯವಸ್ಥೆಯ ಮೇರೆಗೆ ತನ್ನ ಆಯ್ಕೆಯ ಚಿಹ್ನೆಯ ಮೇಲೆ ಅಥವಾ ಸಮೀಪ, ಮತಪತ್ರದ ಮೇಲೆ ಇರುವ ಬಾಣದ ಗುರುತಿನ ರಬ್ಬರ್ ಸ್ಟಾಂಪ್ ಬಳಕೆಗೆ ಬದಲು ತನ್ನ ಆಯ್ಕೆಯ ಅಭ್ಯರ್ಥಿಯ ಹೆಸರು, ಭಾವಚಿತ್ರ ಮತ್ತು ಚಿಹ್ನೆಯ ಮುಂದೆ ಇರುವ ನೀಲಿ ಬಟನ್ ಅನ್ನು ಒತ್ತಬೇಕು. ಈ ಮತಯಂತ್ರದ ಮೂಲಕ ಮಾಡುವ ಮತದಾನ ಪ್ರಕ್ರಿಯೆಯು ಸರಳ ಮತ್ತು ತುಂಬಾ

ವೇಗವಾಗಿದ್ದು, ದುರ್ಬಳಕೆಗೆ ಅವಕಾಶ ಇಲ್ಲದ್ದಾಗಿರುತ್ತದೆ. ಪ್ರತಿಯೊಂದು ಮತವು ಸರಿಯಾದ ರೀತಿಯಲ್ಲಿ ಚಲಾವಣೆಗೊಳ್ಳುವುದರಿಂದ ಮತ ಅಸಿಂಧುವಾಗುವುದಕ್ಕೆ ಅವಕಾಶವಿರುವುದಿಲ್ಲ.

3.5 ಚುನಾವಣೆ ನಡೆಸುವ (ತಿದ್ದುಪಡಿ) ನಿಯಮಗಳು, 2013ರ 49ಎ ನಿಯಮದ ಪರಂತುಕಕ್ಕನುಸಾರವಾಗಿ, ಚುನಾವಣಾ ಆಯೋಗವು ನಿರ್ದೇಶಿಸಬಹುದಾದಂಥ ಚುನಾವಣಾ ಕ್ಷೇತ್ರ ಅಥವಾ ಕ್ಷೇತ್ರಗಳು ಅಥವಾ ಅದರ ಭಾಗಗಳಲ್ಲಿ ಹಾಕಿರುವ ಮತವನ್ನು ವೀಕ್ಷಿಸುವ ಕಾಗದದ ದರ್ಶಕದ ಮುದ್ರಣಕ್ಕಾಗಿ ಚುನಾವಣಾ ಆಯೋಗವು ಅನುಮೋದಿಸಬಹುದಾದಂಥ ವಿನ್ಯಾಸದ ಡ್ರಾಪ್ ಬಾಕ್ಸ್ ಜೊತೆಗಿನ ಪ್ರಿಂಟರನ್ನು, ಮತಯಂತ್ರಕ್ಕೆ ಜೋಡಿಸಬಹುದು. ಇದನ್ನು ಮತದಾರರು ಪರಿಶೀಲಿಸಿಕೊಳ್ಳಬಹುದಾದ ಕಾಗದದ ತಾಳೆ ದರ್ಶಕವೆಂದು [ವೋಟರ್ ವೆರಿಫೈಯಬಲ್ ಪೇಪರ್ ಟ್ರೈಲ್ (VVPAT)] ಎಂದು ಕರೆಯಲಾಗುತ್ತದೆ. ಎಲ್ಲಾ ಚುನಾವಣೆಗಳಲ್ಲಿ ಪ್ರತಿಯೊಂದು ಮತಕೇಂದ್ರದಲ್ಲಿ ವಿವಿಪ್ಯಾಟ್ ಅನ್ನು ಬಳಸಲು ಚುನಾವಣಾ ಆಯೋಗವು ನಿರ್ದೇಶಿಸಿದೆ. ಪ್ರಿಸೈಡಿಂಗ್ ಅಧಿಕಾರಿಯು, ವೋಟಿಂಗ್ ಕಂಪಾರ್ಟ್‌ಮೆಂಟ್‌ನಲ್ಲಿ ಬ್ಯಾಲೆಟ್ ಯೂನಿಟ್‌ನ ಜೊತೆಗೆ ವಿವಿಪ್ಯಾಟ್ ಅನ್ನು ಇಡತಕ್ಕದ್ದು; ಚುನಾವಣಾ ಆಯೋಗ ನಿರ್ದೇಶಿಸಿದ ರೀತಿಯಲ್ಲಿ ವಿವಿಪ್ಯಾಟ್ ಅನ್ನು ಇವಿಎಂ (EVM)ಗೆ ಜೋಡಿಸತಕ್ಕದ್ದು. ಈ ಉದ್ದೇಶಕ್ಕಾಗಿ, ವೋಟಿಂಗ್ ಕಂಪಾರ್ಟ್‌ಮೆಂಟನ್ನು ಪ್ರಮಾಣಾನುಸಾರವಾಗಿ ಹೆಚ್ಚಿಸಬೇಕು. ಬ್ಯಾಲೆಟ್ ಯೂನಿಟ್‌ನ ಬ್ಯಾಲೆಟಿಂಗ್ ಬಟನ್ ಒತ್ತುವ ಮೂಲಕ, ಮತದಾರರು, ತಾವು ಮತಹಾಕಿದ ಅಭ್ಯರ್ಥಿಯ ಕ್ರಮಸಂಖ್ಯೆ, ಹೆಸರು ಮತ್ತು ಚಿಹ್ನೆಯನ್ನು ತೋರಿಸುವ ಮುದ್ರಿತ ಕಾಗದದ ಸ್ಲಿಪ್ ಅನ್ನು ವೀಕ್ಷಿಸಲು ಶಕ್ತರಾಗಿರುತ್ತಾರೆ. ಅಂಥ ಪೇಪರ್ ಸ್ಲಿಪ್ ಕಟ್ ಆಗಿ ವಿವಿಪ್ಯಾಟ್‌ಗೆ ಜೋಡಣೆಯಾಗಿರುವ ಡ್ರಾಪ್ ಬಾಕ್ಸ್‌ನೊಳಗೆ ಬೀಳುವ ಮುನ್ನ ಏಳು ಸೆಕೆಂಡುಗಳವರೆಗೆ ವಿವಿಪ್ಯಾಟ್‌ನ ಪಾರದರ್ಶಕ ಕಿಟಕಿಯ ಮೂಲಕ ಪ್ರದರ್ಶಿತವಾಗುತ್ತದೆ.

3.6 ವಿವಿಪ್ಯಾಟ್ 22.5 ವೋಲ್ಟ್ ಬ್ಯಾಟರಿ ಮೂಲಕ ಕಾರ್ಯನಿರ್ವಹಿಸುತ್ತದೆ. ಮತದಾನದ ದಿನ ಮತಕೇಂದ್ರದಲ್ಲಿ, ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳ ಮುದ್ರಣಕ್ಕಾಗಿ ವಿವಿಪ್ಯಾಟ್‌ನಲ್ಲಿ ಅಳವಡಿಸಿದ ಥರ್ಮಲ್ ಪೇಪರ್‌ನಿಂದ ಸುಮಾರು 1500 ಪೇಪರ್ ಸ್ಲಿಪ್‌ಗಳನ್ನು ಮುದ್ರಿಸಬಹುದು, ಅವುಗಳ ಪೈಕಿ, ಸುಮಾರು 100 ಪೇಪರ್ ಸ್ಲಿಪ್‌ಗಳನ್ನು ವಿವಿಪ್ಯಾಟ್‌ಗಳ ಸಿದ್ಧತೆಯ ಮತ್ತು ಅಣಕು ಮತದಾನದ ಸಮಯದಲ್ಲಿ ಮುದ್ರಿಸಲಾಗುತ್ತದೆ. ಆದ್ದರಿಂದ, ಯಾವುದೇ ಮತಕೇಂದ್ರಕ್ಕೆ ನಿಯೋಜಿಸಲಾದ ಗರಿಷ್ಠ ಮತದಾರರ ಸಂಖ್ಯೆಯು 1400 ಆಗಿರುತ್ತದೆ.

**4. ಬ್ಯಾಲೆಟ್ ಯೂನಿಟ್‌ಗಳು ಮತ್ತು ಕಂಟ್ರೋಲ್ ಯೂನಿಟ್‌ಗಳು**

4.1 ಒಂದು ಬ್ಯಾಲೆಟ್ ಯೂನಿಟ್ ಗರಿಷ್ಠ 16 ಅಭ್ಯರ್ಥಿಗಳಿಗೆ ಅವಕಾಶ ಕಲ್ಪಿಸುತ್ತದೆ. ಒಂದು ವೇಳೆ ಅಭ್ಯರ್ಥಿಗಳ ಸಂಖ್ಯೆ 15 ಆಗಿದ್ದಲ್ಲಿ ಕೊನೆಯ ಪ್ಯಾನಲ್ "None of the above (NOTA)" ಆಗಿರುತ್ತದೆ. ಒಂದು ವೇಳೆ ಅಭ್ಯರ್ಥಿಗಳ ಸಂಖ್ಯೆ 16 ಆಗಿದ್ದಲ್ಲಿ "NOTA''ಗಾಗಿ ಹೆಚ್ಚುವರಿ ಬ್ಯಾಲೆಟ್ ಯೂನಿಟ್ ಇರಿಸಬೇಕಾಗುತ್ತದೆ. ಸ್ಪರ್ಧಿಸುತ್ತಿರುವ ಅಭ್ಯರ್ಥಿಗಳಿಗೆ ಯಾರಿಗೂ ಮತದಾರನು ತನ್ನ ಮತ ಚಲಾಯಿಸದಿರುವ ನಿರ್ಧಾರವನ್ನು ಅಭಿವ್ಯಕ್ತಿಪಡಿಸುವುದಕ್ಕಾಗಿ 'ಮೇಲಿನ ಯಾರಿಗೂ ಅಲ್ಲ' (ನೋಟಾ) ಆಯ್ಕೆಯ ಅವಕಾಶ ಕಲ್ಪಿಸಲಾಗಿದೆ. ಬ್ಯಾಲೆಟ್ ಯೂನಿಟ್ ಮೇಲೆ ಚುನಾವಣೆಯ ವಿವರಗಳು, ಸ್ಪರ್ಧಿಸುತ್ತಿರುವ ಅಭ್ಯರ್ಥಿಗಳ ಕ್ರಮಸಂಖ್ಯೆ, ಹೆಸರು ಮತ್ತು ಭಾವಚಿತ್ರ ಮತ್ತು ಅವರಿಗೆ ಹಂಚಿಕೆ ಮಾಡಿದ ಚಿಹ್ನೆ ಇವುಗಳನ್ನು ಹೊಂದಿರುವ ಬ್ಯಾಲೆಟ್ ಪೇಪರ್‌ಗಳನ್ನು ಪ್ರದರ್ಶಿಸುವುದಕ್ಕೆ ಅವಕಾಶವಿರುತ್ತದೆ. ಪ್ರತಿಯೊಬ್ಬ ಅಭ್ಯರ್ಥಿಯ ಹೆಸರಿನ ಮುಂದೆ ಮತ್ತು 'ನೋಟಾ' ಪ್ಯಾನಲ್ ಮುಂದೆ ಒಂದು ನೀಲಿ ಬಟನ್ ಕೊಟ್ಟಿದ್ದು ಅದನ್ನು ಒತ್ತುವ ಮೂಲಕ ಮತದಾರನು ತನ್ನ ಮತ ಚಲಾಯಿಸಬಹುದು. ಪ್ರತಿಯೊಂದು ಬಟನ್‌ನ ಪಕ್ಕದಲ್ಲಿ ಒಂದು ದೀಪವನ್ನು ಸಹ ಕೊಟ್ಟಿದ್ದು, ಸದರಿ ಬಟನ್ ಒತ್ತುವ ಮೂಲಕ ಮತ ದಾಖಲಾದಾಗ ಕೆಂಪು ದೀಪವು ಹೊತ್ತಿಕೊಳ್ಳುವುದು.

4.3 ಒಂದು ಕಂಟ್ರೋಲ್ ಯುನಿಟ್ ಎಂ2 ಇವಿಎಂನಲ್ಲಿ ಗರಿಷ್ಠ 63 ಅಭ್ಯರ್ಥಿಗಳಿಗೆ ಮತ್ತು ಎಂ3 ಇವಿಎಂನಲ್ಲಿ ಗರಿಷ್ಠ 383 ಅಭ್ಯರ್ಥಿಗಳಿಗೆ ಚಲಾಯಿಸಿದ ಮತಗಳನ್ನು ದಾಖಲಿಸಿಕೊಳ್ಳಬಹುದು. ಈ ಉದ್ದೇಶಕ್ಕಾಗಿ, ಎಂ2 ಇವಿಎಂನಲ್ಲಿ ಒಂದು ಕಂಟ್ರೋಲ್ ಯುನಿಟ್‌ನೊಂದಿಗೆ ನಾಲ್ಕು ಬ್ಯಾಲೆಟ್ ಯೂನಿಟ್‌ಗಳನ್ನು ಒಟ್ಟಾಗಿ ಜೋಡಿಸಿ ಸಂಪರ್ಕಿಸಲಾಗುತ್ತದೆ ಮತ್ತು ಎಂ3 ಇವಿಎಂನಲ್ಲಿ ಒಂದು ಕಂಟ್ರೋಲ್ ಯುನಿಟ್‌ನೊಂದಿಗೆ ಒಟ್ಟಾಗಿ ಇಪ್ಪತ್ತನಾಲ್ಕು ಬ್ಯಾಲೆಟ್ ಯೂನಿಟ್‌ಗಳನ್ನು ಜೋಡಿಸಿ ಸಂಪರ್ಕಿಸಲಾಗುತ್ತದೆ. ಕಂಟ್ರೋಲ್ ಯೂನಿಟ್ ಮೇಲ್ಭಾಗದಲ್ಲಿ ಯಂತ್ರದಲ್ಲಿ ದಾಖಲಾದ ಸ್ಪರ್ಧಿಸಿರುವ ಅಭ್ಯರ್ಥಿಗಳ ಸಂಖ್ಯೆ, ಚಲಾವಣೆಯಾದ ಒಟ್ಟು ಮತಗಳ ಸಂಖ್ಯೆ, ಪ್ರತಿಯೊಬ್ಬ ಅಭ್ಯರ್ಥಿಗೆ ಚಲಾವಣೆಯಾದ ಮತಗಳ ಸಂಖ್ಯೆ ಇತ್ಯಾದಿಗಳಂಥ ಮಾಹಿತಿ ಮತ್ತು ಡೇಟಾವನ್ನು ಪ್ರದರ್ಶಿಸಲು ಅವಕಾಶವಿದೆ. ಸುಲಭವಾಗಿ ಗುರುತಿಸುವುದಕ್ಕಾಗಿ ಈ ಭಾಗವನ್ನು ಕಂಟ್ರೋಲ್ ಯೂನಿಟ್‌ನ 'ಪ್ರದರ್ಶನ ಭಾಗ'ವೆಂದು ಕರೆಯುತ್ತಾರೆ. ಪ್ರದರ್ಶನ ಭಾಗದ ಕೆಳಗೆ, ಯಂತ್ರದ ಬ್ಯಾಟರಿಯನ್ನು ಅಳವಡಿಸಲು ಜಾಗವಿದ್ದು ಆ ಬ್ಯಾಟರಿ ಮೂಲಕ ಯಂತ್ರ ಕಾರ್ಯನಿರ್ವಹಿಸುತ್ತದೆ. ಆ ವಿಭಾಗದ ಪಕ್ಕದಲ್ಲಿ ಮತ್ತೊಂದು ವಿಭಾಗವಿದ್ದು ಅದರಲ್ಲಿ, ನಿರ್ದಿಷ್ಟ ಚುನಾವಣೆಯಲ್ಲಿ ಸ್ಪರ್ಧಿಸಿರುವ ಅನೇಕ ಸಂಖ್ಯೆಯ ಅಭ್ಯರ್ಥಿಗಳ ಮತ್ತು 'NOTA'

ಪ್ಯಾನಲ್‌ನ್ನು ನಮೂದಿಸಲು ಯಂತ್ರದ ಸೆಟ್‌ಗಾಗಿ ಬಟನ್ ಕೊಟ್ಟಿರುತ್ತದೆ. ಆ ಬಟನ್‌ನನ್ನು 'ಕ್ಯಾಂಡ್ ಸೆಟ್' ಬಟನ್ ಎಂದು ಕರೆಯುತ್ತಾರೆ ಮತ್ತು ಈ ಎರಡು ವಿಭಾಗಗಳನ್ನು ಒಳಗೊಂಡ ಕಂಟ್ರೋಲ್ ಯೂನಿಟ್‌ನ ಒಟ್ಟು ವಿಭಾಗವನ್ನು ಕ್ಯಾಂಡಿಡೇಟ್ ಸೆಟ್ ಸೆಕ್ಷನ್ ಎಂದು ಕರೆಯುವರು. ಈ ಕ್ಯಾಂಡಿಡೇಟ್ ಸೆಟ್ ಸೆಕ್ಷನ್‌ನ ಕೆಳಗಡೆ ಕಂಟ್ರೋಲ್ ಯೂನಿಟ್‌ನ 'ಫಲಿತಾಂಶ ವಿಭಾಗ' ಇರುತ್ತದೆ. ಈ ವಿಭಾಗವು, (i) ಎಡಭಾಗದಲ್ಲಿ ಮತದಾನವನ್ನು ಮುಕ್ತಾಯಗೊಳಿಸಲು ಉಪಯೋಗಿಸುವ 'ಕ್ಲೋಸ್' ಬಟನ್, (ii) ಮಧ್ಯದಲ್ಲಿ 'ಫಲಿತಾಂಶ' ಮತ್ತು 'ಮುದ್ರಣ'ವೆಂಬ ಎರಡು ಬಟನ್‌ಗಳನ್ನು ಒಳಗೊಂಡಿದೆ. ಫಲಿತಾಂಶವನ್ನು ಖಚಿತವಾಗಿ ತಿಳಿದುಕೊಳ್ಳುವುದಕ್ಕಾಗಿ 'ಫಲಿತಾಂಶ' ಬಟನ್ ಇರುತ್ತದೆ. ವಿವರವಾದ ಫಲಿತಾಂಶದ ಪ್ರಿಂಟೌಟ್‌ಗಾಗಿ ಪ್ರಿಂಟ್ ಬಟನ್ ಇರುತ್ತದೆ (ಈ ಉದ್ದೇಶಕ್ಕಾಗಿ, ಕಂಟ್ರೋಲ್ ಯೂನಿಟ್‌ಗೆ ಸಂಪರ್ಕ ಕಲ್ಪಿಸಲಾದ ವಿಶೇಷ ಗ್ಯಾಡ್ಜೆಟ್ ಇರುತ್ತದೆ). ಹಾಗೂ (iii) ಯಾವುದೇ ಡೇಟಾದ ಅಗತ್ಯವಿಲ್ಲವೆಂದಾಗ ಯಂತ್ರದಲ್ಲಿ ದಾಖಲಾದ ಡೇಟಾವನ್ನು ಅಳಿಸುವುದಕ್ಕಾಗಿ ಯಂತ್ರದ ಬಲಭಾಗದ ಮೇಲೆ 'ಕ್ಲಿಯರ್' ಬಟನ್ ಇದೆ. ಕಂಟ್ರೋಲ್ ಯೂನಿಟ್‌ನ ಕೆಳಭಾಗದಲ್ಲಿ ಎರಡು ಬಟನ್‌ಗಳಿರುತ್ತವೆ. ಅವು ಯಾವುವೆಂದರೆ, 'ಬ್ಯಾಲೆಟ್' ಮತ್ತು 'ಟೋಟಲ್' ಬಟನ್ ಎಂದು ಗುರುತು ಮಾಡಲಾಗಿದೆ. ಬ್ಯಾಲೆಟ್ ಬಟನ್ ಒತ್ತಿದರೆ, ಬ್ಯಾಲೆಟ್ ಯುನಿಟ್ ಮತವನ್ನು ದಾಖಲಿಸಲು ಸಜ್ಜಾಗುತ್ತದೆ. ಟೋಟಲ್ ಬಟನ್ ಒತ್ತಿದರೆ ಆ ಹಂತದವರೆಗೆ ಚಲಾವಣೆಗೊಂಡ ಒಟ್ಟು ಮತಗಳ ಸಂಖ್ಯೆಯನ್ನು (ಆದರೆ ಅಭ್ಯರ್ಥಿವಾರು ಮತಗಳನ್ನು ಹೊರತುಪಡಿಸಿ) ಖಚಿತಪಡಿಸಿಕೊಳ್ಳಬಹುದು. ಈ ವಿಭಾಗವನ್ನು ಕಂಟ್ರೋಲ್ ಯೂನಿಟ್‌ನ "ಬ್ಯಾಲೆಟ್ ವಿಭಾಗ" ಎಂದು ಕರೆಯಲಾಗುತ್ತದೆ.

**5. ಪೋಲಿಂಗ್ ಏಜೆಂಟರುಗಳ ಮುಖ್ಯ ಕರ್ತವ್ಯಗಳು**

ಅವರನ್ನು ನೇಮಿಸಿರುವಂಥ ಅಭ್ಯರ್ಥಿಗಳ ಹಿತಾಸಕ್ತಿಯನ್ನು ಮತಗಟ್ಟೆಯಲ್ಲಿ ಸಂರಕ್ಷಿಸುವುದು ಪೋಲಿಂಗ್ ಏಜೆಂಟರ ಮುಖ್ಯ ಕರ್ತವ್ಯವಾಗಿದೆ. ಅವರ ಇತರೆ ಕರ್ತವ್ಯಗಳು ಹೀಗಿವೆ:

(ಎ) ಅಣುಕು ಮತದಾನದಲ್ಲಿ ಭಾಗವಹಿಸುವುದು ಮತ್ತು ಇವಿಎಂ ಮತ್ತು ವಿವಿಪ್ಯಾಟ್‌ಗಳು ಸೂಕ್ತವಾಗಿ ಕಾರ್ಯನಿರ್ವಹಿಸುವ ಸ್ಥಿತಿಯಲ್ಲಿವೆ ಎಂಬುದನ್ನು ಮನವರಿಕೆ ಮಾಡಿಕೊಳ್ಳುವುದು;

(ಬಿ) ನಿಜವಾದ ಮತದಾರನಲ್ಲವೆಂದು ಅನುಮಾನ ಬಂದ ವ್ಯಕ್ತಿಗಳನ್ನು ಪ್ರಶ್ನಿಸುವುದರ ಮೂಲಕ, ನಕಲಿ ಮತದಾರರನ್ನು ಗುರುತಿಸುವುದು ಮತ್ತು ಅಂಥವರಿಂದ ಮತದಾನ ಆಗದಂತೆ ಮಾಡುವಲ್ಲಿ ಪ್ರಿಸೈಡಿಂಗ್ ಅಧಿಕಾರಿಗೆ ಸಹಾಯ ಮಾಡುವುದು.

(ಸಿ) ಮತದಾನಕ್ಕೆ ಮೊದಲು, ಮತದಾನ ನಡೆಯುವಾಗ ಮತ್ತು ಮತದಾನದ ನಂತರ ನಿಯಮಗಳ ಪ್ರಕಾರ ಇವಿಎಂ ಮತ್ತು ವಿವಿಪ್ಯಾಟ್‌ಅನ್ನು ಸರಿಯಾಗಿ ಭದ್ರಪಡಿಸಲು ಮತ್ತು ಸೀಲ್ ಮಾಡಲು ಸಹಾಯ ಮಾಡುವುದು.

(ಡಿ) ಕಾನೂನಿನ ಪ್ರಕಾರ, ಮತದಾನವು ಮುಗಿದ ನಂತರ ಮತದಾನಕ್ಕೆ ಸಂಬಂಧಪಟ್ಟ ಎಲ್ಲಾ ಚುನಾವಣೆ ದಾಖಲೆಗಳನ್ನು ಭದ್ರಪಡಿಸುವಂತೆ ಮತ್ತು ಸರಿಯಾಗಿ ಸೀಲ್ ಮಾಡುವಂತೆ ನೋಡಿಕೊಳ್ಳುವುದು.

(ಇ) ಮತಗಟ್ಟೆಯಲ್ಲಿ ಬಳಸುತ್ತಿರುವ ಕಂಟ್ರೋಲ್ ಯೂನಿಟ್, ಬ್ಯಾಲೆಟ್ ಯೂನಿಟ್ ಹಾಗೂ ವಿವಿಪ್ಯಾಟ್‌ನ ಕ್ರಮಸಂಖ್ಯೆಗಳು ರಿಟರ್ನಿಂಗ್ ಅಧಿಕಾರಿಯು ಒದಗಿಸಿರುವ ವಿವರಗಳಿಗೆ ಅನುರೂಪವಾಗಿವೆಯೇ ಎಂಬುದನ್ನು ನೋಡಿಕೊಳ್ಳುವುದು.

## 6. ಪೋಲಿಂಗ್ ಏಜೆಂಟರುಗಳ ಸಂಖ್ಯೆ

ಸ್ಪರ್ಧಿಸುತ್ತಿರುವ ಪ್ರತಿಯೊಬ್ಬ ಅಭ್ಯರ್ಥಿಯು, ಪ್ರತಿಯೊಂದು ಮತಗಟ್ಟೆಗೆ ಪೋಲಿಂಗ್ ಏಜೆಂಟರಾಗಿ ಕಾರ್ಯನಿರ್ವಹಿಸಲು ಒಬ್ಬ ಪೋಲಿಂಗ್ ಏಜೆಂಟರನ್ನು ಮತ್ತು ಇಬ್ಬರು ಬದಲಿ ಪೋಲಿಂಗ್ ಏಜೆಂಟರನ್ನು ನೇಮಿಸಲು ಹಕ್ಕುಳ್ಳವರಾಗಿರುತ್ತಾರೆ. ಆದಾಗ್ಯೂ ಆ ಸಮಯದಲ್ಲಿ, ಅವರ ಪೈಕಿ ಒಬ್ಬನು ಮಾತ್ರ ಮತಗಟ್ಟೆ ಒಳಗೆ ಹಾಜರಿರಬಹುದಾಗಿದೆ. ಅವರು ಕಾಲಕಾಲಕ್ಕೆ ಪರಸ್ಪರ ಬದಲಾಗಬಹುದು. ಮತಗಟ್ಟೆಯೊಳಗೆ ಇರುವ ಏಜೆಂಟನು ಹೊರಗೆ ಹೋದಾಗ ಯಾರೇ ಬದಲಿ ಏಜೆಂಟನು ಆ ಪೋಲಿಂಗ್ ಏಜೆಂಟ್‌ನ ಸ್ಥಾನವನ್ನು ತುಂಬಬಹುದು. ಆ ಮೂರು ವ್ಯಕ್ತಿಗಳ ಪೈಕಿ ಮತಗಟ್ಟೆಯೊಳಗೆ ಇರುವಂತಹ ವ್ಯಕ್ತಿಯನ್ನು ಸಧ್ಯಕ್ಕೆ ಅಭ್ಯರ್ಥಿಯ ಪೋಲಿಂಗ್ ಏಜೆಂಟ್‌ರನ್ನಾಗಿ ಪರಿಗಣಿಸುವುದು; ಕಾನೂನಿನ ಪ್ರಕಾರ ಮತಗಟ್ಟೆ ಏಜೆಂಟನಿಗೆ ನೀಡಿರುವಂತಹ ಅದೇ ಹಕ್ಕುಗಳು ಮತ್ತು ಜವಾಬ್ದಾರಿಗಳನ್ನು ಇತನು ಸಹ ಹೊಂದಿರುತ್ತಾನೆ. ಅಲ್ಲದೆ, ಪೋಲಿಂಗ್ ಏಜೆಂಟರನ್ನು ಮಧ್ಯಾಹ್ನ 3:00ಗಂಟೆಯ ನಂತರ ಶೌಚಾಲಯ ಮತ್ತು ಇತ್ಯಾದಿಗಳ ಸಲುವಾಗಿ ಮತಗಟ್ಟೆಯ ಹೊರಗೆ ಹೋಗಲು ಮತ್ತು ಮತಗಟ್ಟೆಯೊಳಗೆ ಹಿಂದಿರುಗಲು ಅನುಮತಿಸಬಹುದು. ಆದಾಗ್ಯೂ, ಪೋಲಿಂಗ್ ಏಜೆಂಟ್ ಅಥವಾ ಆತನ ಬದಲಿ ಏಜೆಂಟನು ಮಾತ್ರ ಸಕಾಲದಲ್ಲಿ ಮತಗಟ್ಟೆಯೊಳಗೆ ಹಾಜರಾಗಿದ್ದಾರೆಯೇ ಎಂಬುದನ್ನು

ಖಚಿತಪಡಿಸಿಕೊಳ್ಳಬೇಕು. ಪ್ರಿಸೈಡಿಂಗ್ ಅಧಿಕಾರಿಯು, ಎಲ್ಲಾ ಪೋಲಿಂಗ್ ಏಜೆಂಟರು ಇವಿಎಂಗಳು ಮತ್ತು ವಿವಿಪ್ಯಾಟ್‌ಗಳನ್ನು ಮೊಹರು ಮಾಡುವ ಪ್ರಕ್ರಿಯೆಯನ್ನು ನೋಡಿಕೊಳ್ಳಲು ಹಾಗೂ ಘೋಷಣಾ ಪತ್ರ ಇತ್ಯಾದಿಗಳಿಗೆ ಸಹಿ ಹಾಕಲು ಮತದಾನ ಮುಕ್ತಾಯಗೊಳ್ಳುವವರೆಗೂ ಮತಗಟ್ಟೆಯೊಳಗೆ ಇರಬೇಕೆಂಬುದನ್ನು ಸಂಕ್ಷಿಪ್ತವಾಗಿ ವಿವರಿಸತಕ್ಕದ್ದು. ಪ್ರತಿಯೊಂದು ಮತಗಟ್ಟೆಯಲ್ಲಿ ಪೋಲಿಂಗ್ ಏಜೆಂಟರುಗಳು/ ಬದಲಿ ಏಜೆಂಟರುಗಳ ಚಲನವಲನ ಶೀಟ್ ಅನ್ನು ನಿರ್ವಹಿಸತಕ್ಕದ್ದು. ಪ್ರತಿಯೊಂದರಲ್ಲಿ, ಪ್ರತಿಯೊಬ್ಬ ಪೋಲಿಂಗ್ ಏಜೆಂಟನು ಮತಗಟ್ಟೆಗೆ ಪ್ರವೇಶಿಸಿದಂತಹ ಸಮಯ ಹಾಗೂ ತಾವು ಮತಗಟ್ಟೆಯಿಂದ ತೆರಳಿದಂತಹ ಸಮಯವನ್ನು ನಮೂದಿಸಿ ಸಹಿ ಮಾಡುವುದು ಅಗತ್ಯವಾಗಿರುತ್ತದೆ. ಪೋಲಿಂಗ್ ಏಜೆಂಟ್‌ಗಳ/ ಬದಲಿ ಏಜೆಂಟ್‌ಗಳ ಚಲನವಲನ ಶೀಟ್ ನಮೂನೆಯು ಈ ಕೆಳಕಂಡಂತಿದೆ:

| ಕ್ರ.ಸಂ. | ಸಂಸದೀಯ ಕ್ಷೇತ್ರದ ಸಂಖ್ಯೆ ಮತ್ತು ಹೆಸರು | ವಿಧಾನಸಭಾ ವಿಭಾಗದ ಸಂಖ್ಯೆ ಮತ್ತು ಹೆಸರು | ಅಭ್ಯರ್ಥಿಯ ಹೆಸರು | ರಾಜಕೀಯ ಪಕ್ಷದ ಹೆಸರು | ಪೋಲಿಂಗ್ ಏಜೆಂಟ್‌ಗಳು/ ಬದಲಿ ಏಜೆಂಟ್‌ಗಳ ಹೆಸರು | ಪ್ರವೇಶ ಸಮಯ | ಸಹಿ | ನಿರ್ಗಮನದ ಸಮಯ | ಸಹಿ |
|---|---|---|---|---|---|---|---|---|---|
| | | | | | | | | | |

ಪ್ರಿಸೈಡಿಂಗ್ ಅಧಿಕಾರಿಯ ಸಹಿ

## 7. ಪೋಲಿಂಗ್ ಏಜೆಂಟರುಗಳ ನೇಮಕಾತಿ

7.1 ಅಭ್ಯರ್ಥಿಯು, ಪೋಲಿಂಗ್ ಏಜೆಂಟರ ನೇಮಕವನ್ನು, ಸ್ವತಃ ತಾನಾಗಲೀ ಅಥವಾ ತನ್ನ ಚುನಾವಣಾ ಏಜೆಂಟರ ಮುಖಾಂತರವಾಗಲಿ ಮಾಡಬಹುದು. ಆದರೆ, ಬೇರೆ ಯಾರ ಮೂಲಕವೂ ಮಾಡುವಂತಿಲ್ಲ. ಈ ನೇಮಕವನ್ನು ನಿಗದಿತ ನಮೂನೆ–10ರಲ್ಲಿ (ಪರಿಶಿಷ್ಟ –1) ನೇಮಕಾತಿ ಪತ್ರದ ಮುಖಾಂತರ ಮಾಡಬೇಕು. ನೇಮಕಾತಿ ಮಾಡುವ ವ್ಯಕ್ತಿಯು, ಅಂದರೆ, ಅಭ್ಯರ್ಥಿ ಅಥವಾ ಆತನ ಚುನಾವಣಾ ಏಜೆಂಟರು ಅದಕ್ಕೆ ಸಹಿ ಮಾಡಿರಬೇಕು. ಪೋಲಿಂಗ್ ಏಜೆಂಟರುಗಳು, ನೇಮಕಾತಿ ಪತ್ರಕ್ಕೆ ಸಹಿ ಹಾಕುವುದರ ಮೂಲಕ, ವಿದ್ಯುಕ್ತವಾಗಿ ತನ್ನ ನೇಮಕವನ್ನು ಒಪ್ಪಿಕೊಂಡಂತಾಗುತ್ತದೆ. ಸಾಧ್ಯವಾದರೆ, ಪೋಲಿಂಗ್ ಏಜೆಂಟರು ಅಭ್ಯರ್ಥಿ ಅಥವಾ ಆತನ ಚುನಾವಣಾ ಏಜೆಂಟ್‌ನ ಸಮ್ಮುಖದಲ್ಲಿ ತನ್ನ ನೇಮಕಾತಿ ಪತ್ರಕ್ಕೆ ಸಹಿ ಮಾಡತಕ್ಕದ್ದು. ಪ್ರಿಸೈಡಿಂಗ್ ಅಧಿಕಾರಿಯವರು ಮತಗಟ್ಟೆಯೊಳಗೆ ಆತನಿಗೆ ಪ್ರವೇಶ ನೀಡುವುದಕ್ಕೆ ಅನುವು ಮಾಡಿಕೊಡಲು ಸಾಧ್ಯವಾಗುವಂತೆ ಅಂತಹ ನೇಮಕಾತಿ ಪತ್ರದ ಮೂಲ ಪ್ರತಿಯನ್ನು ಮತಗಟ್ಟೆಯಲ್ಲಿ ಹಾಜರುಪಡಿಸುವುದಕ್ಕಾಗಿ ಪೋಲಿಂಗ್ ಏಜೆಂಟ್‌ನಿಗೆ ಕೊಡತಕ್ಕದ್ದು. ಪೋಲಿಂಗ್

ಏಜೆಂಟನು ಮತಗಟ್ಟೆಯಲ್ಲಿ ಪ್ರಿಸೈಡಿಂಗ್ ಆಫೀಸರ್ ಸಮ್ಮುಖದಲ್ಲಿ ಮತ್ತೊಮ್ಮೆ ಸಹಿ ಮಾಡತಕ್ಕದ್ದು.

7.2 ಯಾರೆ ಅಭ್ಯರ್ಥಿ ಮತ್ತು/ ಅಥವಾ ಆತನ ಚುನಾವಣಾ ಏಜೆಂಟನು, ನಮೂನೆ (ಪರಿಶಿಷ್ಟ–1ಎ)ರಲ್ಲಿ ಮಾದರಿ ಸಹಿಗಳನ್ನು ಮಾಡಲು ನಿರಾಕರಿಸಿದರೆ, ಪ್ರಿಸೈಡಿಂಗ್ ಅಧಿಕಾರಿಯವರು ಯಾವ ಅಭ್ಯರ್ಥಿಯ ಅಥವಾ ಆತನ ಚುನಾವಣಾ ಏಜೆಂಟ್‌ನ ಮಾದರಿ ಸಹಿಗಳು ಗೊತ್ತುಪಡಿಸಿದ ನಮೂನೆಯಲ್ಲಿ (ಪರಿಶಿಷ್ಟ–1ಎ) ಇರುವುದಿಲ್ಲವೋ ಅಂತಹ ಅಭ್ಯರ್ಥಿ ಅಥವಾ ಆತನ ಏಜೆಂಟನ ಸಹಿಯ ನೈಜತೆಯ ಬಗ್ಗೆ ಸಕಾರಣ ಸಂಶಯವಿದ್ದಲ್ಲಿ, ಆತನು ನೇಮಕ ಮಾಡಿದ ಪೋಲಿಂಗ್ ಏಜೆಂಟ್‌ರುಗಳಿಂದ ನಮೂನೆ–10ರಲ್ಲಿ ಯಾವುದೇ ನೇಮಕಾತಿ ಪತ್ರವನ್ನು ಮಾನ್ಯ ಮಾಡದಿರಬಹುದು.

7.3 ಸ್ಪರ್ಧಿಸುತ್ತಿರುವ ಅಭ್ಯರ್ಥಿಯು (ಪರಿಶಿಷ್ಟ–1ಎ) ಮೂಲತಃ ಒದಗಿಸಿರುವ ಮಾದರಿ ಸಹಿಗಳಿರುವ ನಮೂನೆಯ ಪ್ರತಿಯನ್ನು ಈಗಾಗಲೇ ಪ್ರಿಸೈಡಿಂಗ್ ಅಧಿಕಾರಿಗೆ ಒದಗಿಸಿದ್ದು, ಕೊನೆ ಗಳಿಗೆಯಲ್ಲಿ ಯಾರೇ ಚುನಾವಣಾ ಏಜೆಂಟ್‌ನ ನೇಮಕಾತಿಯಲ್ಲಿ ಬದಲಾವಣೆ ಮಾಡಿದ್ದಲ್ಲಿ, ಆಗ ಆ ಚುನಾವಣಾ ಏಜೆಂಟ್‌ನ ನೇಮಕಾತಿಯನ್ನು ರದ್ದುಗೊಳಿಸಿ ನಮೂನೆ–9ರ ಒಂದು ಪ್ರತಿಯನ್ನು ಮತ್ತು ಹೊಸ ಚುನಾವಣಾ ಏಜೆಂಟನನ್ನು ನೇಮಕ ಮಾಡಿದ ನಮೂನೆ–8ರ ಒಂದು ಪ್ರತಿಯನ್ನು ಪ್ರತಿಯೊಬ್ಬ ಪ್ರಿಸೈಡಿಂಗ್ ಅಧಿಕಾರಿಗೆ ಒದಗಿಸುವುದು ಸಂಬಂಧಪಟ್ಟ ಅಭ್ಯರ್ಥಿಯ ಜವಾಬ್ದಾರಿಯಾಗಿರತಕ್ಕದ್ದು.

7.4 ಪೋಲಿಂಗ್ ಏಜೆಂಟ್‌ರುಗಳನ್ನು ನೇಮಕ ಮಾಡುವುದಕ್ಕೆ ಯಾವುದೇ ಕಾಲಮಿತಿ ಇರುವುದಿಲ್ಲ. ಆದಾಗ್ಯೂ, ಅವರು ಚುನಾವಣೆಯಲ್ಲಿ ಅಂಚೆ ಮತಪತ್ರಗಳ ಮೂಲಕ ಮತ ಚಲಾಯಿಸುವ ಹಕ್ಕುಳ್ಳವರಾಗಿದ್ದಲ್ಲಿ, ಅಂಚೆ ಮತಪತ್ರಗಳಿಗಾಗಿ ಅರ್ಜಿ ಸಲ್ಲಿಸುವುದಕ್ಕೆ ಅನುಕೂಲವಾಗುವಂತೆ, ಮತದಾನದ ದಿನಾಂಕಕ್ಕೆ ಸುಮಾರು 10 ದಿನಗಳಿಗೆ ಮುಂಚಿತವಾಗಿ ನೇಮಕ ಮಾಡುವುದು ಸೂಕ್ತ.

## 8. ಪೋಲಿಂಗ್ ಏಜೆಂಟ್‌ರುಗಳ ನೇಮಕವನ್ನು ರದ್ದು ಮಾಡುವುದು

8.1 ಅಭ್ಯರ್ಥಿ ಅಥವಾ ಆತನ ಚುನಾವಣಾ ಏಜೆಂಟನು ಸಹ ಪೋಲಿಂಗ್ ಏಜೆಂಟ್‌ನ ನೇಮಕವನ್ನು ರದ್ದುಗೊಳಿಸಬಹುದು. ಪೋಲಿಂಗ್ ಏಜೆಂಟ್‌ನ ನೇಮಕಾತಿಯನ್ನು ರದ್ದುಮಾಡುವುದನ್ನು ಅಭ್ಯರ್ಥಿ ಅಥವಾ ಆತನ ಚುನಾವಣಾ ಏಜೆಂಟ್‌ನು ನಿಗದಿತ ನಮೂನೆ–11ರಲ್ಲಿ (ಪರಿಶಿಷ್ಟ–II) ಮಾಡಬೇಕು.

8.2 ಯಾರೇ ಪೋಲಿಂಗ್ ಏಜೆಂಟ್‌ನ ನೇಮಕವನ್ನು ರದ್ದುಗೊಳಿಸಿದ್ದರೆ ಅಥವಾ ಮತದಾನ ಮುಗಿಯುವುದಕ್ಕೆ ಮುಂಚಿತವಾಗಿ ಯಾರೇ ಪೋಲಿಂಗ್ ಏಜೆಂಟ್‌ನು ನಿಧನ ಹೊಂದಿದರೆ, ಅಭ್ಯರ್ಥಿಯು ಅಥವಾ ಆತನ ಚುನಾವಣಾ ಏಜೆಂಟ್‌ನು ಮತದಾನದ ಮುಕ್ತಾಯಕ್ಕೆ ಮುಂಚಿತವಾಗಿ ಯಾವುದೇ ಸಮಯದಲ್ಲಿ ಬೇರೆ ಪೋಲಿಂಗ್ ಏಜೆಂಟ್‌ರನ್ನು ನೇಮಕ ಮಾಡಬಹುದು.

**9. ಪೋಲಿಂಗ್ ಏಜೆಂಟನಾಗಿ ನೇಮಕವಾಗಲು ಇರಬೇಕಾದ ಅರ್ಹತೆಗಳು**

9.1 ಪೋಲಿಂಗ್ ಏಜೆಂಟ್ ಆಗಿ ನೇಮಕವಾಗಬೇಕಾದ ವ್ಯಕ್ತಿಗೆ ಕಾನೂನು ಯಾವುದೇ ಅರ್ಹತೆಯನ್ನು ನಿಗದಿ ಮಾಡಿಲ್ಲ. ಆದಾಗ್ಯೂ ಸಹ ಅಭ್ಯರ್ಥಿಯ ಹಿತದೃಷ್ಟಿಯಿಂದ ಪೋಲಿಂಗ್ ಏಜೆಂಟ್ ಆಗಿ ತಾನು ನೇಮಕ ಮಾಡುವ ವ್ಯಕ್ತಿಯು ಅಭ್ಯರ್ಥಿಯ ಹಿತಾಸಕ್ತಿಗಳನ್ನು ಸರಿಯಾಗಿ ಸಂರಕ್ಷಿಸಲು ಸಾಧ್ಯವಾಗುವಂತಾಗಬೇಕಾದರೆ ಅವನು ಪ್ರಾಪ್ತ ವಯಸ್ಕನಾಗಿರಬೇಕು ಮತ್ತು ಅವನಿಗೆ ಪೋಲಿಂಗ್ ಏಜೆಂಟ್ ಆಗಿ ವ್ಯವಹರಿಸಲು ಸಾಕಷ್ಟು ತಿಳುವಳಿಕೆ ಇರಬೇಕು. ಅದೇ ಸ್ಥಳದ ಒಬ್ಬ ವ್ಯಕ್ತಿಯನ್ನು ಪೋಲಿಂಗ್ ಏಜೆಂಟಾಗಿ ನೇಮಕ ಮಾಡುವುದು ಒಳ್ಳೆಯದು. ಏಕೆಂದರೆ ಅಂತಹ ಏಜೆಂಟನಿಗೆ ಅನೇಕ ಮತದಾರರ ಪರಿಚಯವಿರುತ್ತದೆ ಮತ್ತು ಚುನಾವಣೆಯಲ್ಲಿ ನಕಲು ಮತ ಚಲಾವಣೆಯನ್ನು ತಪ್ಪಿಸಲು ಸಹಾಯಕವಾಗುತ್ತದೆ. ಆದ್ದರಿಂದ ಪೋಲಿಂಗ್ ಏಜೆಂಟ್‌ರು, ಸಂಬಂಧಪಟ್ಟ ಮತದಾನ ಪ್ರದೇಶದ ಸಾಮಾನ್ಯ ನಿವಾಸಿ ಮತ್ತು ಮತದಾರರೇ ಆಗಿರಬೇಕು. ಪೋಲಿಂಗ್ ಏಜೆಂಟ್ ಮತದಾರರ ಭಾವಚಿತ್ರವಿರುವ ಗುರುತಿನ ಚೀಟಿ (ಇಪಿಐಸಿ) ಹೊಂದಿರಬೇಕು ಅಥವಾ ಇಆರ್‌ಓ/ಬಿಎಲ್‌ಓ ನೀಡಿದ ಭಾವಚಿತ್ರವಿರುವ ಸ್ಲಿಪ್ ಅಥವಾ ಆಯೋಗವು ಗೊತ್ತುಪಡಿಸಿದ ಪರ್ಯಾಯ ಗುರುತಿನ ಚೀಟಿ ಹೊಂದಿರಬೇಕು. ಯಾರೇ ಸೆಕ್ಟರ್ ಮ್ಯಾಜಿಸ್ಟ್ರೇಟ್ ನಿಮ್ಮ ಗುರುತು ತೋರಿಸುವಂತೆ ಕೋರಿದಾಗ ನೀವು ಮತದಾರರ ಭಾವಚಿತ್ರವಿರುವ ಗುರುತಿನ ಚೀಟಿಯನ್ನು ಇಪಿಐಸಿ ಅಥವಾ ಭಾವಚಿತ್ರವಿರುವ ಸ್ಲಿಪ್ ಅಥವಾ ಆಯೋಗವು ಗೊತ್ತುಪಡಿಸಿದ ಯಾವುದೇ ಒಂದು ಪರ್ಯಾಯ ಗುರುತಿನ ಚೀಟಿಯನ್ನು ತೋರಿಸಬೇಕು.

9.2 ಸರ್ಕಾರಿ ಸೇವೆಯಲ್ಲಿರುವ ಯಾರೇ ವ್ಯಕ್ತಿಯು, ಅಭ್ಯರ್ಥಿಯ ಪೋಲಿಂಗ್ ಏಜೆಂಟಾಗಿ ಕೆಲಸ ಮಾಡುವಂತಿಲ್ಲ. (1951ರ ಜನತಾ ಪ್ರಾತಿನಿಧ್ಯ ಅಧಿನಿಯಮದ ಪ್ರಕರಣ 134ಎ) ಅವನು ಹಾಗೆ ಮಾಡಿದರೆ, 3 ತಿಂಗಳವರೆಗೆ ವಿಸ್ತರಿಸಬಹುದಾಂತಹ ಒಂದು ಅವಧಿಗೆ ಸೆರೆಮನೆ ವಾಸದ ಶಿಕ್ಷೆ ಅಥವಾ ದಂಡನೆ ಅಥವಾ ಅವೆರಡರಿಂದಲೂ ದಂಡಿತನಾಗುತ್ತಾನೆ.

9.3 ಸರ್ಕಾರದ ಸಚಿವರು ಅಥವಾ ರಾಜ್ಯ ವೆಚ್ಚದಲ್ಲಿ ಭದ್ರತಾ ಸಿಬ್ಬಂದಿಯನ್ನು ಒದಗಿಸಲಾಗಿರುವ ಯಾರೇ ಇತರ ವ್ಯಕ್ತಿಗೆ ಪೋಲಿಂಗ್ ಏಜೆಂಟ್ ಆಗಿ ಕಾರ್ಯನಿರ್ವಹಿಸಲು ಅನುಮತಿ ನೀಡುವಂತಿಲ್ಲ. ಏಕೆಂದರೆ ಭದ್ರತಾ ಸಿಬ್ಬಂದಿ ಸಹಿತ ಮತಗಟ್ಟೆಯೊಳಗೆ ಪ್ರವೇಶಿಸಲು ಅವರಿಗೆ ಅವಕಾಶ ನೀಡುವಂತಿಲ್ಲ ಅಥವಾ ಅವರಿಗೆ ಭದ್ರತಾ ವ್ಯವಸ್ಥೆ ಇಲ್ಲದೆ ಮತಗಟ್ಟೆಯೊಳಗೆ ಪ್ರವೇಶಿಸಲು ಅವಕಾಶ ನೀಡುವ ಮೂಲಕ ರಾಜೀ ಆಗುವಂತಿಲ್ಲ. ಸಚಿವರು ಅಥವಾ ರಾಜಕೀಯ ಕಾರ್ಯಕರ್ತರೊಂದಿಗೆ ಬರುವ ಭದ್ರತಾ ಸಿಬ್ಬಂದಿಯನ್ನು ಮತಗಟ್ಟೆಯೊಳಗೆ ಹೋಗುವುದಕ್ಕೆ ಅವಕಾಶ ನೀಡಬಾರದು. ಅವರು ಮತಗಟ್ಟೆಯ ಬಾಗಿಲ ಬಳಿ ನಿಂತು ಕಾಯುತ್ತಿರಬೇಕು. ಆದರೆ, ಆ ಸಮಯದಲ್ಲಿ ಅವರು ಮತದಾರರನ್ನು ಗುರುತಿಸಬಾರದು ಅಥವಾ ಮತದಾರರ ಭಾವಚಿತ್ರವಿರುವ ಗುರುತಿನ ಚೀಟಿಗಳು (ಇಪಿಐಸಿ) ಅಥವಾ ಗುರುತಿನ ಯಾವುದೇ ಇತರ ಪರ್ಯಾಯ ದಾಖಲೆಗಳನ್ನು ಪರಿಶೀಲನೆ ಮಾಡಬಾರದು.

## 10. ಮತದಾನದ ಪ್ರಕ್ರಿಯೆಗಳ ಬಗ್ಗೆ ಪೂರ್ವಾಭ್ಯಾಸ

10.1 ಪೋಲಿಂಗ್ ಏಜೆಂಟ್‌ನು, ಆತನ/ಆಕೆಯ ಸ್ಥಳದಲ್ಲಿ ಚುನಾವಣಾ ಅಧಿಕಾರಿಗಳು ಮತದಾನದ ಪ್ರಕ್ರಿಯೆಗಳ ಬಗ್ಗೆ ಎಷ್ಟು ಪೂರ್ವಾಭ್ಯಾಸಗಳನ್ನು ನಡೆಸುತ್ತಾರೋ, ಅಷ್ಟಕ್ಕೂ ಸಾಧ್ಯವಾದಷ್ಟು ಮಟ್ಟಿಗೆ ಆತ/ಆಕೆ ಹಾಜರಾಗಬೇಕು. ಇದರಿಂದಾಗಿ, ಮತಗಟ್ಟೆಯಲ್ಲಿ ಅನುಸರಿಸಬೇಕಾದ ಕಾರ್ಯವಿಧಾನಗಳು ಆತ/ಆಕೆಗೆ ಗೊತ್ತಾಗುತ್ತವೆ. ಇವಿಎಂ ಮತ್ತು ವಿವಿಪ್ಯಾಟ್ ಮತ್ತು ಇತರ ಚುನಾವಣೆ ದಾಖಲೆಗಳನ್ನು ಸೀಲ್ ಮಾಡುವ ಮತ್ತು ಭದ್ರಗೊಳಿಸುವ ಸರಿಯಾದ ರೀತಿಯನ್ನು ಕಲಿಯಬಹುದು.

## 11. ಮತಗಟ್ಟೆಯನ್ನು ತಲುಪುವುದು

11.1 ಸಾಮಾನ್ಯವಾಗಿ, ಮತದಾನದ ಪ್ರಕ್ರಿಯೆಗಳು ವಾಸ್ತವಿಕವಾಗಿ ಪ್ರಾರಂಭವಾಗುವುದಕ್ಕೆ ಮೊದಲು ಪ್ರಿಸೈಡಿಂಗ್ ಅಧಿಕಾರಿಯವರು ಇವಿಎಂ ಮತ್ತು ವಿವಿಪ್ಯಾಟ್‌ನ ಸಿದ್ಧತೆಯನ್ನು ಒಳಗೊಂಡಂತೆ ವೋಟಿಂಗ್ ಕಂಪಾರ್ಟ್‌ಮೆಂಟ್‌ನಲ್ಲಿ ಬ್ಯಾಲೆಟ್ ಯೂನಿಟ್(ಗಳು) ಮತ್ತು ವಿವಿಪ್ಯಾಟ್‌ನ ಇಡುವಂತಹ ಪೂರ್ವಸಿದ್ಧತೆಯನ್ನು ಮಾಡಿಕೊಳ್ಳುವ ಸಮಯದಲ್ಲಿ ಪೋಲಿಂಗ್ ಏಜೆಂಟ್‌ನು ಹಾಜರಿರಬೇಕಾಗುವುದರಿಂದ ಅವನು ಮತಗಟ್ಟೆಯಲ್ಲಿ ಮತದಾನ ಪ್ರಾರಂಭವಾಗಲು ನಿಗದಿಪಡಿಸಿದ ಸಮಯಕ್ಕೆ ಕನಿಷ್ಠ ಒಂದು ಗಂಟೆ ಮುಂಚಿತವಾಗಿ ತಲುಪಿರಬೇಕು. ಒಂದು ವೇಳೆ ಯಾರೇ ಪೋಲಿಂಗ್ ಏಜೆಂಟ್‌ನು ತಡವಾಗಿ ಬಂದ ಪಕ್ಷದಲ್ಲಿ ಮತ್ತು ಈ ಪೂರ್ವಭಾವಿ

ಸಿದ್ಧತೆಗಳು ಆದಾಗಲೇ ಆಗಿ ಹೋಗಿದ್ದ ಪಕ್ಷದಲ್ಲಿ ಪ್ರಿಸೈಡಿಂಗ್ ಅಧಿಕಾರಿಯವರು, ತಡವಾಗಿ ಬಂದ ಆ ವ್ಯಕ್ತಿಯ ಸಲುವಾಗಿ ಪೂರ್ವ ಸಿದ್ಧತೆಯನ್ನು ಪುನಃ ಹೊಸದಾಗಿ ಮಾಡುವುದಿಲ್ಲ.

11.2 ಪೋಲಿಂಗ್ ಏಜೆಂಟ್‌ನು ಮತಗಟ್ಟೆಗೆ ತಲುಪುವುದಕ್ಕೆ ಕಾನೂನು ಯಾವುದೇ ನಿರ್ದಿಷ್ಟ ಕಾಲಮಿತಿಯನ್ನು ಗೊತ್ತುಪಡಿಸಿಲ್ಲ. ಆತನು ಮತಗಟ್ಟೆಗೆ ತಡವಾಗಿ ಬಂದಲ್ಲಿ ಪ್ರಿಸೈಡಿಂಗ್ ಅಧಿಕಾರಿಯವರು ಅವರು ಮತಗಟ್ಟೆಯಲ್ಲಿ ನಡೆಯುವ ಮುಂದಿನ ವ್ಯವಹರಣೆಗಳಲ್ಲಿ ಭಾಗವಹಿಸಲು ಅವನಿಗೆ ಅವಕಾಶ ನೀಡುತ್ತಾರೆ.

## 12. ಪೋಲಿಂಗ್ ಏಜೆಂಟ್‌ರಿಗೆ ಒದಗಿಸಬೇಕಾದ ಸಾಮಗ್ರಿಗಳು

12.1 ಪೋಲಿಂಗ್ ಏಜೆಂಟ್‌ರು ಮತಗಟ್ಟೆಗೆ ಬಂದಾಗ ಈ ಮುಂದಿನ ಸಾಮಗ್ರಿಗಳನ್ನು ಆತನಿಗೆ/ಆಕೆಗೆ ಒದಗಿಸಬೇಕು:

(ಎ) ನೇಮಕಾತಿ ಪತ್ರ;

(ಬಿ) ಎಲ್ಲ ಪೂರಕ ಪಟ್ಟಿಗಳೊಂದಿಗೆ ಮತಗಟ್ಟೆಯ ಇತ್ತೀಚಿನ ಮತದಾರರ ಪಟ್ಟಿಯ ಒಂದು ಪ್ರತಿ (ಯಾವುದಾದರೂ ಇದ್ದರೆ);

(ಸಿ) ಬ್ಯಾಲೆಟಿಂಗ್ ಯೂನಿಟ್(ಗಳ) ಕ್ಯಾರಿಂಗ್ ಕೇಸ್(ಗಳ) ಅನ್ನು ಎಣಿಕೆ/ಸಂಗ್ರಹಣಾ ಕೇಂದ್ರಕ್ಕೆ ಸಾಗಿಸುವುದಕ್ಕಿಂತ ಮೊದಲು ಅವುಗಳ ಮೇಲೆ ನಿಮ್ಮ ಮೊಹರು (ಸೀಲು) ಹಾಕುವುದಕ್ಕೆ ಬಳಸುವ ಒಂದು ಸಣ್ಣ ಹಿತ್ತಾಳೆ ಮೊಹರು;

(ಡಿ) ಪೆನ್ನು, ಕಾಗದ ಮತ್ತು ಪೆನ್ಸಿಲ್;

(ಇ) ರಿಟರ್ನಿಂಗ್ ಅಧಿಕಾರಿಯವರು ಮತ್ತು/ ಅಥವಾ ಅಭ್ಯರ್ಥಿಯು ಒದಗಿಸಿರುವಂಥ ಮತಗಟ್ಟೆಯಲ್ಲಿ ಬಳಸಬೇಕಾದ ಇವಿಎಂ ಮತ್ತು ವಿವಿಪ್ಯಾಟ್‌ನ ಕಂಟ್ರೋಲ್ ಮತ್ತು ಬ್ಯಾಲೆಟ್ ಯೂನಿಟ್‌ಗಳ ವಿವರಗಳು.

12.2 ಪೋಲಿಂಗ್ ಏಜೆಂಟನು ಮತದಾರರ ಪಟ್ಟಿಯ ಆತ/ಆಕೆಯ ಪ್ರತಿಯನ್ನು ಮತಗಟ್ಟೆ ಒಳಗಡೆ ತರುವುದಕ್ಕೆ ಅನುಮತಿಸುವುದು ಮತ್ತು ಮತದಾರರು ತಮ್ಮ ಮತ ಚಲಾಯಿಸಿದಾಗ ಗುರುತುಗಳನ್ನು ಹಾಕಿಕೊಳ್ಳುವುದಕ್ಕೆ ಪೋಲಿಂಗ್ ಏಜೆಂಟನಿಗೆ ಅವಕಾಶವಿರುತ್ತದೆ. ಆದಾಗ್ಯೂ, ಯಾವುದೇ ಪರಿಸ್ಥಿತಿಗಳಲ್ಲೂ ಮತದಾನ ನಡೆಯುತ್ತಿರುವಾಗ ಮತ್ತು ಮತದಾನ ಪೂರ್ಣಗೊಳ್ಳುವವರೆಗೆ ಆತ/ಆಕೆಯ ಬಳಿ ಇರುವ ಮತದಾರಪಟ್ಟಿಯನ್ನು ಪೋಲಿಂಗ್ ಏಜೆಂಟ್ ಅಥವಾ ಬದಲಿ ಏಜೆಂಟರ ಮೂಲಕವಾಗಲೀ ಮತಗಟ್ಟೆಯಿಂದ ಹೊರಗೆ ತೆಗೆದುಕೊಂಡು ಹೋಗುವುದಕ್ಕೆ ಆತ/ಆಕೆಗೆ ಅವಕಾಶ ನೀಡುವುದಿಲ್ಲ. ಮತ ಚಲಾಯಿಸಿದ

ಅಥವಾ ಚಲಾಯಿಸದ ಮತದಾರರ ಕ್ರಮಸಂಖ್ಯೆಯನ್ನು ಸೂಚಿಸುವ ಚೀಟಿಗಳನ್ನು ಹೊರಗೆ ಕಳುಹಿಸುವುದಕ್ಕೆ ಪೋಲಿಂಗ್ ಏಜೆಂಟ್ ಅಥವಾ ಬದಲಿ ಏಜೆಂಟರಿಗೆ ಅವಕಾಶವಿರುತ್ತದೆ.

**13. ಪೋಲಿಂಗ್ ಏಜೆಂಟರ್‌ರುಗಳು ನೇಮಕಾತಿ ಪತ್ರವನ್ನು ಹಾಜರುಪಡಿಸುವುದು**

13.1 ಪ್ರತಿಯೊಬ್ಬ ಪೋಲಿಂಗ್ ಏಜೆಂಟನು, ಎಲ್ಲಾ ವಿಧದಲ್ಲಿ ವಿದ್ಯುಕ್ತವಾಗಿ ಭರ್ತಿ ಮಾಡಿರುವ ಮತ್ತು ಆತನನ್ನು ನೇಮಕ ಮಾಡಿರುವ ಅಭ್ಯರ್ಥಿಯು ಮತ್ತು ಚುನಾವಣಾ ಏಜೆಂಟರು ಮತ್ತು ಪೋಲಿಂಗ್ ಏಜೆಂಟನು ಸಹಿ ಮಾಡಿರುವ ನೇಮಕಾತಿ ಪತ್ರವನ್ನು ಪ್ರಿಸೈಡಿಂಗ್ ಅಧಿಕಾರಿಯವರಿಗೆ ಸಲ್ಲಿಸಬೇಕು. ಆಗ ಪ್ರಿಸೈಡಿಂಗ್ ಅಧಿಕಾರಿಯವರು ಆತ/ಆಕೆಗೆ ತಮ್ಮ ಸಮ್ಮುಖದಲ್ಲಿ ದಸ್ತಾವೇಜುಗಳನ್ನು ಪೂರ್ಣಗೊಳಿಸಲು ಮತ್ತು ಘೋಷಣಾ ಪತ್ರಕ್ಕೆ ಸಹಿ ಮಾಡಲು ಹೇಳುತ್ತಾರೆ. ತರುವಾಯ ಪ್ರಿಸೈಡಿಂಗ್ ಅಧಿಕಾರಿಯವರು ನೇಮಕಾತಿ ಪತ್ರವನ್ನು ತಾವೇ ಇಟ್ಟುಕೊಂಡು ಪೋಲಿಂಗ್ ಏಜೆಂಟನನ್ನು ಮತಗಟ್ಟೆಯೊಳಗೆ ಪ್ರವೇಶಿಸಲು ಅನುಮತಿ ನೀಡುತ್ತಾರೆ.

**14. ಪೋಲಿಂಗ್ ಏಜೆಂಟ್‌ರುಗಳಿಗೆ ಪಾಸುಗಳು**

ಮತಗಟ್ಟೆಯೊಳಗೆ ಪ್ರವೇಶ ನೀಡಲಾಗಿರುವ ಪೋಲಿಂಗ್ ಏಜೆಂಟ್‌ನು, ಪ್ರಿಸೈಡಿಂಗ್ ಅಧಿಕಾರಿಯವರು ನೀಡಿರುವ ಪಾಸನ್ನು ಆತನು ತನ್ನ ಬಳಿ ಇಟ್ಟುಕೊಂಡು ಅವಶ್ಯಕತೆ ಬಿದ್ದಾಗಲೆಲ್ಲಾ ಮತಗಟ್ಟೆಯೊಳಗೆ ಬರಬಹುದು ಹಾಗೂ ಹೊರಗೆ ಹೋಗಬಹುದು. ಪೋಲಿಂಗ್ ಏಜೆಂಟ್ ಅಥವಾ ರಿಲೀವಿಂಗ್ ಏಜೆಂಟನು ಮತಗಟ್ಟೆಯಲ್ಲಿ ಇರುವ ಸಮಯದಲ್ಲಿ ಆತ/ಆಕೆಯು ಎಂಟ್ರಿ ಪಾಸನ್ನು ಪ್ರದರ್ಶಿಸತಕ್ಕದ್ದು.

**15. ಪೋಲಿಂಗ್ ಏಜೆಂಟರು ಬ್ಯಾಡ್ಜ್‌ಗಳನ್ನು ತೊಡುವಿಕೆ**

15.1 ಮತದಾನಕೇಂದ್ರದೊಳಗೆ ಅಥವಾ ಅಲ್ಲಿಂದ 100 ಮೀಟರುಗಳ ಅಂತರದಲ್ಲಿ ಪೋಲಿಂಗ್ ಏಜೆಂಟನು, ಪಕ್ಷದ ನಾಯಕನ ಚಿತ್ರವಿರುವ ಅಥವಾ ಪಕ್ಷದ ಬಾವುಟವಿರುವ ಅಥವಾ ಪಕ್ಷದ ಚಿಹ್ನೆ ಇರುವ ಯಾವುದೇ ಬ್ಯಾಡ್ಜನ್ನು ಧರಿಸಕೂಡದು. ಪೋಲಿಂಗ್ ಏಜೆಂಟನು ಹಾಗೆ ಮಾಡಿದ ಪಕ್ಷದಲ್ಲಿ, ಆತನ/ಆಕೆಯ ವರ್ತನೆಯು ಮತಗಳಿಗಾಗಿ ಪ್ರಚಾರ ಮಾಡುವ ಅಥವಾ ಮತದಾರರ ಮತಗಳನ್ನು ಕೋರುತ್ತಿದ್ದಾನೆಂಬ ಅಥವಾ ಆ ಚುನಾವಣೆಗೆ ಸಂಬಂಧಪಟ್ಟಂತೆ ಯಾವುದೇ ನೋಟೀಸು (ಅಧಿಕೃತ ನೋಟೀಸುಗಳನ್ನು ಬಿಟ್ಟು) ಅಥವಾ ಚಿಹ್ನೆಯನ್ನು ಪ್ರದರ್ಶಿಸುವುದಕ್ಕೆ ಸಮನಾಗಬಹುದಾದ ಚುನಾವಣಾ ಅಪರಾಧವಾಗುತ್ತದೆ (ಜನತಾ ಪ್ರಾತಿನಿಧ್ಯ ಅಧಿನಿಯಮ,

1951ರ ಪ್ರಕರಣ 130). ಮೇಲಿನ ಅಪರಾಧವು, ಸಂಜ್ಞೇಯ ಅಪರಾಧವಾಗಿದ್ದು, ಅದು 250 ರೂ.ಗಳವರೆಗೆ ವಿಸ್ತರಿಸಬಹುದಾದಂತಹ ದಂಡನೆಗೆ ಗುರಿಪಡಿಸುತ್ತದೆ.

15.2 ಆದರೆ ಪೋಲಿಂಗ್ ಏಜೆಂಟ್ ಇಷ್ಟಪಟ್ಟಲ್ಲಿ, ಆತ/ಆಕೆಯು ಯಾರ ಪೋಲಿಂಗ್ ಏಜೆಂಟ್ ಆಗಿ ಕಾರ್ಯ ನಿರ್ವಹಿಸುತ್ತಿರುವರೋ ಆ ಅಭ್ಯರ್ಥಿಯ ಹೆಸರು ಇರುವ ಒಂದು ಸಣ್ಣ ಬ್ಯಾಡ್ಜನ್ನು ಧರಿಸಬಹುದು.

15.3 ಪೋಲಿಂಗ್ ಏಜೆಂಟರು, 'ಮತದಾನ ಕೇಂದ್ರದ ಸುತ್ತಮುತ್ತಲಿನ ಪ್ರದೇಶ' ಎಂದು ಕರೆಯಲಾಗಿರುವ ಮತದಾನಕೇಂದ್ರಗಳ 100 ಮೀಟರ್ ಪರಿಧಿಯಲ್ಲಿ ಮತ್ತು ಮತಗಟ್ಟೆಯೊಳಗೆ ಸೆಲ್ಯೂಲರ್ ಫೋನುಗಳು, ಕಾರ್ಡ್‌ಲೆಸ್ ಫೋನುಗಳು, ವೈರ್‌ಲೆಸ್ ಸೆಟ್‌ಗಳು, ಮೊದಲಾದವುಗಳನ್ನು ತರುವುದಕ್ಕಾಗಲೀ ಅಥವಾ ಬಳಸುವುದಕ್ಕಾಗಲೀ ಅವಕಾಶವಿರುವುದಿಲ್ಲ. ಆದಾಗ್ಯೂ, ವೀಕ್ಷಕರು/ ಸೂಕ್ಷ್ಮ ವೀಕ್ಷಕರು, ಪ್ರಿಸೈಡಿಂಗ್ ಅಧಿಕಾರಿ, ಸೆಕ್ಟರ್ ಅಧಿಕಾರಿಗಳು ಮತ್ತು ಭದ್ರತಾ ಸಿಬ್ಬಂದಿಯು ಮೊಬೈಲ್ ಫೋನ್ ತರುವುದಕ್ಕೆ ಅವಕಾಶವಿರುತ್ತದೆ ಆದರೆ ಅವರು ಅವುಗಳನ್ನು 'ಸೈಲೆಂಟ್ ಮೋಡ್'ನಲ್ಲಿ ಇಟ್ಟುಕೊಳ್ಳಬೇಕು.

**16. ಪೋಲಿಂಗ್ ಏಜೆಂಟರಿಗೆ ಆಸನ ವ್ಯವಸ್ಥೆ**

16.1 ಪೋಲಿಂಗ್ ಏಜೆಂಟರು ತಾವು ಕುಳಿತಲ್ಲಿಂದಲೇ ಮತದಾರರನ್ನು ಗುರುತಿಸುವುದಕ್ಕೆ, ಪ್ರಿಸೈಡಿಂಗ್ ಅಧಿಕಾರಿಯವರ ಮೇಜಿನ ಬಳಿ ನಡೆಯುವ ಇಡೀ ಕಾರ್ಯಾಚರಣೆಯನ್ನು ನೋಡುವುದಕ್ಕೆ, ನಿರ್ದಿಷ್ಟವಾಗಿ ಇವಿಎಂನ ಕಂಟ್ರೋಲ್ ಯುನಿಟ್ ಇಟ್ಟಿರುವ ಟೇಬಲ್ ಅನ್ನು, ಮತದಾರನು ಪ್ರಿಸೈಡಿಂಗ್ ಅಧಿಕಾರಿಯವರ ಮೇಜಿನಿಂದ ಮತದಾನ ಕಂಪಾರ್ಟ್‌ಮೆಂಟಿಗೆ ಹೋಗುವ ಮತ್ತು ಮತದಾನ ಕಂಪಾರ್ಟ್‌ಮೆಂಟಿನಲ್ಲಿ (ಬ್ಯಾಲೆಟಿಂಗ್ ಯೂನಿಟ್(ಗಳು) ಮತ್ತು ವಿವಿಪ್ಯಾಟ್ ಇಡಲಾಗುವ ಮೇಜು) ಮತ ದಾಖಲು ಮಾಡಿ ಆತ ಹೊರ ಬರುವುದನ್ನು ನೋಡುವುದಕ್ಕೆ ಸಾಕಷ್ಟು ಅವಕಾಶವಿರುವಂತೆ ಪೋಲಿಂಗ್ ಏಜೆಂಟರಿಗೆ ಆಸನ ವ್ಯವಸ್ಥೆ ಮಾಡತಕ್ಕದ್ದು.

16.2 ಆಯೋಗವು ಕೊಟ್ಟಿರುವ ಸೂಚನೆಗಳ ಪ್ರಕಾರ, ಮತದಾನ ಕೇಂದ್ರದಲ್ಲಿ ವಿವಿಧ ರಾಜಕೀಯ ಪಕ್ಷಗಳಿಗೆ ಸೇರಿದ ಅಭ್ಯರ್ಥಿಗಳು, ಪೋಲಿಂಗ್ ಏಜೆಂಟರು ಕುಳಿತುಕೊಳ್ಳುವುದಕ್ಕೆ ಆಸನ ವ್ಯವಸ್ಥೆಯನ್ನು ಈ ಕೆಳಗಿನಂತೆ, ಆದ್ಯತೆ ಆಧಾರದ ಮೇಲೆ ಮಾಡಲಾಗುತ್ತದೆ:

(i) ಮಾನ್ಯತೆ ಪಡೆದ ರಾಷ್ಟ್ರೀಯ ಪಕ್ಷಗಳ ಅಭ್ಯರ್ಥಿಗಳು;

(ii) ಮಾನ್ಯತೆ ಪಡೆದ ರಾಜ್ಯ ಪಕ್ಷಗಳ ಅಭ್ಯರ್ಥಿಗಳು;

(iii) ಬೇರೆ ರಾಜ್ಯಗಳ ಮಾನ್ಯತೆ ಪಡೆದ ರಾಜ್ಯ ಪಕ್ಷಗಳಿಗೆ ಚುನಾವಣಾ ಕ್ಷೇತ್ರದಲ್ಲಿ ಮೀಸಲಿಟ್ಟ ಚಿಹ್ನೆಗಳನ್ನು ಬಳಸಲು ಅನುಮತಿ ಕೊಡಲಾಗಿರುವಂಥ ಪಕ್ಷಗಳ ಅಭ್ಯರ್ಥಿಗಳು;

(iv) ನೋಂದಾಯಿತ–ಮಾನ್ಯತೆ ಪಡೆಯದ ಪಕ್ಷಗಳ ಅಭ್ಯರ್ಥಿಗಳು; ಮತ್ತು

(v) ಸ್ವತಂತ್ರ ಅಭ್ಯರ್ಥಿಗಳು;.

16.3 ಪೋಲಿಂಗ್ ಏಜೆಂಟ್‌ರು ತಮಗೆ ಗೊತ್ತು ಮಾಡಿರುವ ಸ್ಥಳದಲ್ಲಿಯೇ ಕುಳಿತುಕೊಳ್ಳಬೇಕು ಮತ್ತು ಅನಗತ್ಯವಾಗಿ ಮತದಾನಕೇಂದ್ರದಲ್ಲಿ ಓಡಾಡಬಾರದು.

16.4 ಮತದಾನಕೇಂದ್ರದ ಧೂಮಪಾನವನ್ನು ನಿಷೇಧಿಸಲಾಗಿದೆ.

**17. ಮುಕ್ತ ಮತ್ತು ನ್ಯಾಯೋಚಿತ ಚುನಾವಣೆಗೆ ಸಿದ್ಧತೆಗಳು:**

17.1 ಭಾರತ ಚುನಾವಣಾ ಆಯೋಗವು, ಚುನಾವಣಾ ದಿನಾಂಕವನ್ನು ಘೋಷಿಸಿದ ದಿನದಿಂದ ಮತದಾನದ ಪ್ರಕ್ರಿಯೆಯು ಮುಕ್ತಾಯವಾಗುವವರೆಗೆ ಚುನಾವಣಾ ನಿರ್ವಹಣೆಗಾಗಿ ಪ್ರತಿ 10–12 ಮತದಾನ ಕೇಂದ್ರಗಳಿಗೆ ಸೆಕ್ಟರ್ ಅಧಿಕಾರಿಗಳನ್ನು ನೇಮಿಸುವ ವ್ಯವಸ್ಥೆಯನ್ನು ಜಾರಿಗೊಳಿಸಿದೆ. ಇವರನ್ನು ಮತದಾನದ ದಿನಕ್ಕೆ 7 ದಿನಗಳ ಮುಂಚಿತವಾಗಿ ವಿಭಾಗ ಮ್ಯಾಜಿಸ್ಟ್ರೇಟರುಗಳಾಗಿ ಗೊತ್ತುಮಾಡಲಾಗುವುದು ಮತ್ತು ಇವರು ವಿಶೇಷ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟರ ಅಧಿಕಾರಗಳನ್ನು ಹೊಂದಿರುತ್ತಾರೆ ಮತ್ತು ಇವರೊಂದಿಗೆ ಪೋಲೀಸ್ ಅಧಿಕಾರಿಯೊಬ್ಬರು ಜೊತೆಗಿರುವಂತೆ ವ್ಯವಸ್ಥೆ ಮಾಡಲಾಗುವುದು. ಸೆಕ್ಟರ್ ಅಧಿಕಾರಿಗಳು ಅವುಗಳ ಸುಗಮ ಕಾರ್ಯಾಚರಣೆಗೆ ಅನುವಾಗುವಂತೆ ತಮಗೆ ಹಂಚಿಕೆ ಮಾಡಲಾದ ಮತದಾನಕೇಂದ್ರಗಳಿಗೆ ಪದೇ ಪದೇ ಭೇಟಿ ನೀಡುವರು.

17.2 ಮತದಾನ ಕೇಂದ್ರದ ಒಳಗೆ ಪ್ರವೇಶಿಸಬೇಕಾದ ವ್ಯಕ್ತಿಗಳ ಮೇಲೆ ಕಾನೂನು ನಿರ್ಬಂಧವನ್ನು ಹೇರಲಾಗಿದೆ. ಮತದಾನ ಕೇಂದ್ರದ ಒಳಗೆ ಪ್ರವೇಶಿಸಲು ಪ್ರಿಸೈಡಿಂಗ್ ಅಧಿಕಾರಿಯವರು ಅವಕಾಶ ಮಾಡಿ ಕೊಡಬಹುದಾದ ವ್ಯಕ್ತಿಗಳೆಂದರೆ,–

(ಎ) ಮತದಾರರು;

(ಬಿ) ಪೋಲಿಂಗ್ ಅಧಿಕಾರಿಗಳು;

(ಸಿ) ಪ್ರತಿಯೊಬ್ಬ ಅಭ್ಯರ್ಥಿ, ಆತನ ಚುನಾವಣಾ ಏಜೆಂಟ್ ಮತ್ತು ಒಂದು ಸಲಕ್ಕೆ ಯುಕ್ತವಾಗಿ ನೇಮಕ ಮಾಡಿದ ಪ್ರತಿಯೊಬ್ಬ ಅಭ್ಯರ್ಥಿಯ ಒಬ್ಬ ಪೋಲಿಂಗ್ ಏಜೆಂಟ್;

(ಡಿ) ಆಯೋಗವು ಅಧಿಕೃತಗೊಳಿಸಲಾದ ವ್ಯಕ್ತಿಗಳು;

(ಇ) ಕರ್ತವ್ಯನಿರತ ಸರ್ಕಾರಿ ನೌಕರರು;

(ಎಫ್) ಮತದಾರನ ಜೊತೆಯಲ್ಲಿರುವ ಕೈಗೂಸು;

(ಜಿ) ಸಹಾಯವಿಲ್ಲದೆ ನಡೆದಾಡಲಾಗದಂಥ ಕುರುಡ ಅಥವಾ ದುರ್ಬಲ ಮತದಾರನ ಜತೆಯಲ್ಲಿರುವ ವ್ಯಕ್ತಿ; ಮತ್ತು

(ಎಚ್) ಮತದಾರರನ್ನು ಗುರುತಿಸುವ ಉದ್ದೇಶಕ್ಕಾಗಿ ಅಥವಾ ಮತದಾನ ನಡೆಯುವಾಗ ಅಥವಾ ನೆರವು ನೀಡುವುದಕ್ಕಾಗಿ ಪ್ರಿಸೈಡಿಂಗ್ ಅಧಿಕಾರಿಯವರು ಕಾಲಕಾಲಕ್ಕೆ ಪ್ರವೇಶ ನೀಡಬಹುದಾದಂಥ ಇತರೆ ವ್ಯಕ್ತಿಗಳು.

17.3 ಆಯೋಗವು, ಅತಿಸೂಕ್ಷ್ಮ ಮತದಾನಕೇಂದ್ರಗಳ ನಿರ್ವಹಣೆಗಾಗಿ ಸ್ಪಷ್ಟ ಮಾರ್ಗದರ್ಶನಗಳನ್ನು ನೀಡಿದೆ. ಮತದಾನಕೇಂದ್ರಗಳ ಸ್ಥಳಗಳು, ಸಂಪರ್ಕಗೊಳಿಸುವಿಕೆ ಸಿಎಪಿಎಫ್‌ನ ಲಭ್ಯತೆ, ಸೂಕ್ಷ್ಮ ವೀಕ್ಷಕರು– ಇವುಗಳನ್ನು ಅವಲಂಬಿಸಿ, ಆಯೋಗವು, ಮುಕ್ತ ಮತ್ತು ನ್ಯಾಯೋಚಿತ ಚುನಾವಣೆಗಳನ್ನು ಸುನಿಶ್ಚಿತಪಡಿಸಿಕೊಳ್ಳಲು ಈ ಮುಂದಿನವುಗಳ ಪೈಕಿ ಒಂದನ್ನು/ ಒಬ್ಬರನ್ನು ನಿಯೋಜಿಸಿಕೊಳ್ಳುವಂತೆ ನಿರ್ದೇಶನಗಳನ್ನು ನೀಡಿದೆ.

**(i) ಮತದಾನ ಕೇಂದ್ರದೊಳಗೆ ವಿಡಿಯೋಗ್ರಫಿ**

ಆಯೋಗವು, ಮತದಾನ ಪ್ರಕ್ರಿಯೆಯ ಮತ್ತು ಸಾಧ್ಯವಾದಷ್ಟು ಮಟ್ಟಿಗೆ ಅತಿ ಸೂಕ್ಷ್ಮ ಮತ್ತು ಸೂಕ್ಷ್ಮ ಮತದಾನಕೇಂದ್ರಗಳ ಮಹತ್ವದ ಘಟನೆಗಳನ್ನು ವಿಡಿಯೋ ಚಿತ್ರೀಕರಣ ಮಾಡುವ ಸಂಬಂಧ ಸೂಚನೆಗಳನ್ನು ಈಗಾಗಲೇ ನೀಡಿದೆ. ವಿಡಿಯೋ ಚಿತ್ರೀಕರಣ ಮಾಡುವಾಗ ಮತದಾನದ ಗೌಪ್ಯತೆಯನ್ನು ಉಲ್ಲಂಘಿಸದಿರುವುದನ್ನು ಖಚಿತಪಡಿಸುವ ನಿಟ್ಟಿನಲ್ಲಿ ಸೂಕ್ತ ಎಚ್ಚರಿಕೆ ವಹಿಸತಕ್ಕದ್ದು. ಸಹಜ ಪ್ರಕ್ರಿಯೆಗೆ ಧಕ್ಕೆಯಾಗದ ಹಾಗೂ ಮತದಾನದ ಗೌಪ್ಯತೆಯನ್ನು ಕಾಪಾಡುವ ದೃಷ್ಟಿಯಿಂದ ಮತಗಟ್ಟೆಯೊಳಗೆ ಫೋಟೋಗ್ರಫಿ/ವಿಡಿಯೋ ಚಿತ್ರೀಕರಣ ಮಾಡಲು ಮಾಧ್ಯಮದ ಯಾರೇ ವ್ಯಕ್ತಿಗಳಿಗೆ ಅಥವಾ ಇತರೆ ಯಾರೇ ಅನಧಿಕೃತ ವ್ಯಕ್ತಿಗಳಿಗೆ ಅವಕಾಶ ನೀಡತಕ್ಕದ್ದಲ್ಲ. ಮತದಾನ ಪ್ರಕ್ರಿಯೆಯ ಎಲ್ಲಾ ಸೂಕ್ಷ್ಮ ಘಟನೆಗಳ ವಿಡಿಯೋಗ್ರಫಿ ಮಾಡುವುದನ್ನು ಮುಂದುವರಿಸತಕ್ಕದ್ದು.

**(ii) ಕೇಂದ್ರ ಸಶಸ್ತ್ರ ಪೊಲೀಸ್ ಪಡೆಯ(ಸಿಎಪಿಎಫ್) ಸಿಬ್ಬಂದಿ**

ಅತಿ ಸೂಕ್ಷ್ಮ ಮತ್ತು ಸೂಕ್ಷ್ಮ ಮತಗಟ್ಟೆಗಳಲ್ಲಿ ಸಿಎಪಿಎಫ್ ಸಿಬ್ಬಂದಿಯ ನೇಮಕವು ಮತದಾರರಲ್ಲಿ ವಿಶ್ವಾಸವನ್ನು ತುಂಬುವುದಕ್ಕಾಗಿನ ಪರ್ಯಾಯ ವ್ಯವಸ್ಥೆಗಳಲ್ಲಿ ಒಂದಾಗಿದೆ.

(iii) ಮತದಾನಕೇಂದ್ರಗಳಲ್ಲಿ ವೆಬ್‌ಕಾಸ್ಟಿಂಗ್ ಪ್ರಕ್ರಿಯೆಯನ್ನು ಜಾರಿಗೊಳಿಸುವುದು ಸೂಕ್ಷ್ಮ ಮತಕೇಂದ್ರಗಳಲ್ಲಿ ಮಾಡಬೇಕಾದ ಮತ್ತೊಂದು ವ್ಯವಸ್ಥೆಯಾಗಿದೆ.

(iv) ಸೂಕ್ಷ್ಮ ವೀಕ್ಷಕರ (ಮೈಕ್ರೋ ಅಬ್ಸರ್ವ) ನೇಮಕ

ಸ್ವತಂತ್ರ, ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆ ನಡೆಸುವುದರಲ್ಲಿ ವೀಕ್ಷಕರು ಬಹಳ ಮಹತ್ವಪೂರ್ಣ ಪಾತ್ರ ನಿರ್ವಹಿಸುವರು. ಪರಿವೀಕ್ಷಣೆಯ ವ್ಯವಸ್ಥೆಯನ್ನು ಬಲಪಡಿಸುವುದಕ್ಕಾಗಿ, ಆಯೋಗವು ಅಗತ್ಯವಿರುವೆಡೆಗಳಲ್ಲಿ ಸೂಕ್ಷ್ಮ ವೀಕ್ಷಕರನ್ನು (ಮೈಕ್ರೋ–ಅಬ್ಸರ್ವ) ನಿಯೋಜಿಸುವುದಕ್ಕಾಗಿ ಪ್ರಜ್ಞಾಪೂರ್ವಕವಾಗಿ ನಿರ್ಧಾರ ಕೈಗೊಂಡಿದೆ. ಈ ಸೂಕ್ಷ್ಮ ವೀಕ್ಷಕರು – (ಮೈಕ್ರೋ–ಅಬ್ಸರ್ವ) ನೇರವಾಗಿ ಸಾಮಾನ್ಯ ವೀಕ್ಷಕರ ನಿಯಂತ್ರಣ ಮತ್ತು ಮೇಲ್ವಿಚಾರಣೆ ಅಡಿಯಲ್ಲಿ ಕಾರ್ಯ ನಿರ್ವಹಿಸುವರು.

**18. ಮತದಾನ ಪ್ರಾರಂಭವಾಗುವುದಕ್ಕೆ ಮೊದಲು ಮಾಡಬೇಕಾದ ಪೂರ್ವ ಸಿದ್ಧತೆಗಳು**

18.1 ಮತದಾನದ ಪ್ರಾರಂಭ ಗೊತ್ತುಪಡಿಸಿರುವ ಸಮಯಕ್ಕೆ ಸುಮಾರು ಒಂದು ಗಂಟೆ ಮುಂಚಿತವಾಗಿ ಪ್ರಿಸೈಡಿಂಗ್ ಅಧಿಕಾರಿಯವರು ಮತದಾನ ನಡೆಸಲು ಪ್ರಾರಂಭಿಕ ಸಿದ್ಧತೆಗಳನ್ನು ನಡೆಸುತ್ತಾರೆ.

18.2 ಪ್ರಿಸೈಡಿಂಗ್ ಅಧಿಕಾರಿಯವರು –

(ಎ) ಮತದಾನಕ್ಕೆ ಉಪಯೋಗಿಸುವ ಇವಿಎಂ ಮತ್ತು ವಿವಿಪ್ಯಾಟ್ ಪಕ್ಕಾ ಸುಸ್ಥಿತಿಯಲ್ಲಿರುವುದನ್ನು ಮತ್ತು ಈಗಾಗಲೇ ಇವುಗಳಲ್ಲಿ ಯಾವುದೇ ಮತವೂ ದಾಖಲಾಗಿಲ್ಲದಿರುವುದನ್ನು ಪೋಲಿಂಗ್ ಏಜೆಂಟರಿಗೆ ಮತ್ತು ಹಾಜರಿರುವ ಇತರ ವ್ಯಕ್ತಿಗಳಿಗೆ ತೋರಿಸುತ್ತಾರೆ.

(ಬಿ) ಇವಿಎಂ ಮತ್ತು ವಿವಿಪ್ಯಾಟ್ ಸರಿಯಾಗಿ ಕಾರ್ಯನಿರ್ವಹಿಸುತ್ತದೆ ಎಂಬುದನ್ನು ಪೋಲಿಂಗ್ ಏಜೆಂಟ್‌ರಿಗೆ ಮನವರಿಕೆ ಮಾಡಲು ಅಣಕು ಮತದಾನ ಮಾಡುತ್ತಾರೆ.

(ಸಿ) ಮತಯಂತ್ರದ ಕಂಟ್ರೋಲ್ ಯೂನಿಟ್‌ನಿಂದ ಅಂತಹ ಅಣಕು ಮತದಾನದ ಮತಗಳನ್ನು ಅಳಿಸಿಹಾಕುತ್ತಾರೆ ಮತ್ತು ವಿವಿಪ್ಯಾಟ್‌ನಿಂದ ಕಾಗದದ ಸ್ಲಿಪ್‌ಗಳನ್ನು ತೆಗೆದುಹಾಕುತ್ತಾರೆ. ಇದರಿಂದ ಅಣುಕು ಮತದಾನಕ್ಕೆ ಸಂಬಂಧಿಸಿದ ಯಾವುದೇ ದತ್ತಾಂಶವು ಇವಿಎಂ ಮತ್ತು ವಿವಿಪ್ಯಾಟ್‌ನಲ್ಲಿ ಉಳಿದುಕೊಳ್ಳುವುದಿಲ್ಲ.

(ಡಿ) ಅಣಕು ಮತದಾನದ ಪ್ರಮಾಣಪತ್ರ ಸಿದ್ಧಪಡಿಸಿ ಅದಕ್ಕೆ ಪೋಲಿಂಗ್ ಏಜೆಂಟ್‌ರ ಸಹಿ ಪಡೆಯುತ್ತಾರೆ.

(ಇ) ಕಂಟ್ರೋಲ್ ಯೂನಿಟ್ಟಿನ ಫಲಿತಾಂಶ ಭಾಗದ ಒಳ ಅಂಕಣದ ಒಳ ಬಾಗಿಲಿನ ಮೇಲೆ ಹಸಿರು ಕಾಗದದ ಸೀಲ್ ಅನ್ನು ಅಳವಡಿಸುವುದಕ್ಕೆ ಒದಗಿಸಿರುವ ಚೌಕಟ್ಟಿನಲ್ಲಿ ಹಸಿರು ಕಾಗದದ ಸೀಲ್ ಅನ್ನು ಅಳವಡಿಸುತ್ತಾರೆ.

(ಎಫ್) ಕಂಟ್ರೋಲ್ ಯೂನಿಟ್ಟಿನ ಫಲಿತಾಂಶ ಭಾಗದ ಒಳ ಬಾಗಿಲನ್ನು ಮುಚ್ಚಿ ದಾರಕಟ್ಟಿ ಅದಕ್ಕೆ "ಸ್ಪೆಷಲ್ ಟ್ಯಾಗ್" ಹಾಕಿ ಸೀಲ್ ಮಾಡುತ್ತಾರೆ; ವಿವಿಪ್ಯಾಟ್ ಡ್ರಾಪ್ ಬಾಕ್ಸ್ ಸಹ ಸಾಮಾನ್ಯ 'ಅಡ್ರೆಸ್ ಟ್ಯಾಗ್'ನ್ನು ಜೋಡಿಸಿ ಸೀಲ್ ಮಾಡತಕ್ಕದ್ದು.

(ಜಿ) ಕಂಟ್ರೋಲ್ ಯೂನಿಟ್ಟಿನ ಆ ಫಲಿತಾಂಶ (ರಿಸಲ್ಟ್) ಸೆಕ್ಷನ್‌ನ ಹೊರ ಹೊದಿಕೆಯನ್ನು ದಾರದಿಂದ ಕಟ್ಟುತ್ತಾರೆ ಮತ್ತು ಅದಕ್ಕೆ 'ಅಡ್ರೆಸ್ ಟ್ಯಾಗ್' ಹಾಕಿ ಮೊಹರು (ಸೀಲ್) ಮಾಡುತ್ತಾರೆ;

(ಎಚ್) ರಿಸಲ್ಟ್ ಸೆಕ್ಷನ್ ಅನ್ನು ಹೊರಗಡೆಯಿಂದ 'ಸ್ಟ್ರಿಪ್ ಸೀಲ್' ಸಹಾಯದಿಂದ ಭದ್ರಪಡಿಸುತ್ತಾರೆ ಮತ್ತು ಮೊಹರು (ಸೀಲ್) ಮಾಡುತ್ತಾರೆ.

(ಐ) ಹಾಜರಿರುವ ಪೋಲಿಂಗ್ ಏಜೆಂಟರು ಮತ್ತು ಇತರ ವ್ಯಕ್ತಿಗಳಿಗೆ ಮತದಾರರ ಪಟ್ಟಿಯ ಗುರುತು ಮಾಡಿರುವ ಪ್ರತಿಯು (ಮತದಾನ ಮಾಡುವುದಕ್ಕೆ ಅವಕಾಶ ನೀಡುವ ಮತದಾರರ ಹೆಸರುಗಳನ್ನು ಗುರುತು ಮಾಡಿಕೊಳ್ಳುವುದಕ್ಕೆ ಉಪಯೋಗಿಸುವ ಮತದಾರರ ಪಟ್ಟಿಯ ಪ್ರತಿ) ಅಂಚೆ ಮತಪತ್ರಗಳು ಮತ್ತು ಚುನಾವಣಾ ಕರ್ತವ್ಯ ಪ್ರಮಾಣಪತ್ರಗಳನ್ನು ನೀಡುವುದಕ್ಕೆ ಉಪಯೋಗಿಸುವುದಕ್ಕಾಗಿ ಬಳಸಿರುವಂಥವುಗಳನ್ನು ಹೊರತುಪಡಿಸಿ ಯಾವುದೇ ಇತರ ಷರಾಗಳನ್ನು ಒಳಗೊಂಡಿರುವುದಿಲ್ಲ; ಮತ್ತು ಪೂರಕ ಪಟ್ಟಿಯಲ್ಲಿ ಯಾವುದೇ ತೆಗೆದುಹಾಕಿರುವ ಹೆಸರುಗಳು ಇದ್ದರೆ, ಅವುಗಳನ್ನು ಮತ್ತು ಭಾವಚಿತ್ರವಿರುವ ಮತದಾರರ ಪಟ್ಟಿಯಾಗಿದ್ದರೆ ಸಂಬಂಧಪಟ್ಟ ಮತದಾರನ ವಿವರಣೆಯ ಬಾಕ್ಸ್‌ನಲ್ಲಿ "ತೆಗೆದುಹಾಕಲಾಗಿದೆ" ಎಂದು ಸೂಚಿಸುವ ಮೂಲಕ ಮತದಾರರ ಪಟ್ಟಿಯಲ್ಲಿ ಹೊಡೆದುಹಾಕುವ ವಿಧಾನದಿಂದ ಮರುಮುದ್ರಿತವಾದ ಮೂಲಮತದಾರರ ಪಟ್ಟಿಯಲ್ಲಿ ಅಂತಿಮ ಮುದ್ರಣವಾಗುವುದಕ್ಕಿಂತ ಮುಂಚಿತವಾಗಿ ಮನವಿಗಳು ಮತ್ತು ಆಕ್ಷೇಪಣೆಗಳನ್ನು ವಿಲೆಮಾಡಿದ ತರುವಾಯ ಸಿದ್ಧಪಡಿಸಿದ ಕರಡುಪಟ್ಟಿ ಮತ್ತು ಪೂರಕಪಟ್ಟಿಯಲ್ಲಿ ಪರಿಶಿಷ್ಟವಾಗಿ ಸೇರಿಸಲಾಗಿರುತ್ತದೆ ಎಂದು ಪ್ರದರ್ಶಿಸಿ ತೋರಿಸುವರು (ಎಇಆರ್‌ಓಗಳು ಮತ್ತು ಮತ್ತೊಬ್ಬ ಅಧಿಕಾರಿಯು ಮತದಾರರ ಪಟ್ಟಿಗೆ ಯುಕ್ತವಾಗಿ ಸಹಿಮಾಡಿರಬೇಕು) ಮತ್ತು;

(ಜೆ) ಹಾಜರಿರುವ ಪೋಲಿಂಗ್ ಏಜೆಂಟರು ಮತ್ತು ಇತರ ವ್ಯಕ್ತಿಗಳಿಗೆ 'ಮತದಾರರ ರಿಜಿಸ್ಟರ್' (ನಮೂನೆ 17ಎ) ಈಗಾಗಲೇ ಯಾರೇ ಮತದಾರನ ಸಂಬಂಧದಲ್ಲಿ ಯಾವುದೇ ನಮೂದನ್ನು ಒಳಗೊಂಡಿರುವುದಿಲ್ಲ ಎಂದು ಪ್ರದರ್ಶಿಸಿ ತೋರಿಸುವರು.

**19. ಮತದಾನ ಪ್ರಾರಂಭವಾಗುವುದಕ್ಕೆ ಮುಂಚಿತವಾಗಿ ಪ್ರಿಸೈಡಿಂಗ್ ಅಧಿಕಾರಿಯವರು ಮತಯಂತ್ರದ ಸಿದ್ಧತೆಗಳನ್ನು ಮಾಡುವುದು.**

19.1 ಮತದಾನ ಕೇಂದ್ರದಲ್ಲಿ ಇವಿಎಂ ಮತ್ತು ವಿವಿಪ್ಯಾಟ್ ಅನ್ನು ವಾಸ್ತವವಾಗಿ ಉಪಯೋಗಿಸುವುದಕ್ಕೆ ಮೊದಲು, ಅಭ್ಯರ್ಥಿ ಮತ್ತು ಅವರ ಏಜೆಂಟರ ಸಮ್ಮುಖದಲ್ಲಿ ರಿಟರ್ನಿಂಗ್ ಅಧಿಕಾರಿಯವರ ಹಂತದಲ್ಲಿ ಮಾಡಲಾದ ಸಿದ್ಧತೆಗಳ ಜೊತೆಗೆ ಕೆಲವು ಸಿದ್ಧತೆಗಳನ್ನು ಮಾಡುವುದು ಅವಶ್ಯಕವಾಗಿರುತ್ತದೆ. ಮತದಾನ ಪ್ರಾರಂಭವಾಗಲು ನಿಗದಿಪಡಿಸಿರುವ ಸಮಯಕ್ಕೆ ಸುಮಾರು ಒಂದು ಗಂಟೆ ಮುಂಚಿತವಾಗಿಯೇ ಪ್ರಿಸೈಡಿಂಗ್ ಅಧಿಕಾರಿಯವರು ಸಿದ್ಧತೆಗಳನ್ನು ಮಾಡಲು ಪ್ರಾರಂಭಿಸಬೇಕು. ಯಾರೇ ಪೋಲಿಂಗ್ ಏಜೆಂಟನು ಹಾಜರಿರದಿದ್ದರೆ, ಪ್ರಿಸೈಡಿಂಗ್ ಅಧಿಕಾರಿಯವರು ಮಾಡಿಕೊಳ್ಳಬೇಕಾದ ಸಿದ್ಧತೆಗಳನ್ನು ಪೋಲಿಂಗ್ ಏಜೆಂಟನು ಬರುವವರೆಗೆ ಕಾಯುತ್ತಾ ಮುಂದೂಡತಕ್ಕದ್ದಲ್ಲ. ಯಾರೇ ಪೋಲಿಂಗ್ ಏಜೆಂಟನು ತಡವಾಗಿ ಬಂದರೆ ಆತನಿಗೋಸ್ಕರ ಸಿದ್ಧತೆಗಳನ್ನು ಮತ್ತೊಮ್ಮೆ ಆರಂಭಿಸಬೇಕಾಗಿಲ್ಲ.

**ಬ್ಯಾಲೆಟಿಂಗ್ ಯೂನಿಟ್ ಸಿದ್ಧತೆಗಳು**

19.2 ರಿಟರ್ನಿಂಗ್ ಅಧಿಕಾರಿ ಹಂತದಲ್ಲಿ ಬ್ಯಾಲೆಟಿಂಗ್ ಯೂನಿಟನ್ನು ಈಗಾಗಲೇ ಎಲ್ಲಾ ರೀತಿಯಿಂದಲೂ ಸುಸಜ್ಜಿತವಾಗಿ ಸಿದ್ಧಪಡಿಸಲಾಗಿದ್ದು, ಇದರ ನಡುವೆ ಅಂತರ ಸಂಪರ್ಕದ ಕೇಬಲನ್ನು ವಿವಿಪ್ಯಾಟ್ ಯೂನಿಟ್‌ಗೆ ಪ್ಲಗ್ ಮಾಡುವುದನ್ನು ಹೊರತುಪಡಿಸಿದರೆ, ಮತದಾನದ ದಿನದಂದು ಮತದಾನ ಕೇಂದ್ರದಲ್ಲಿ ಈ ಯೂನಿಟನ್ನು ಮತ್ತೊಮ್ಮೆ ಸಿದ್ಧಪಡಿಸುವ ಅಗತ್ಯವಿರುವುದಿಲ್ಲ.

19.3 ಮತದಾನ ಕೇಂದ್ರದಲ್ಲಿ ಒಂದಕ್ಕಿಂತ ಹೆಚ್ಚು ಬ್ಯಾಲೆಟಿಂಗ್ ಯೂನಿಟ್ಟುಗಳನ್ನು ಬಳಕೆ ಮಾಡಬೇಕಾದರೆ, ಈ ಬ್ಯಾಲೆಟಿಂಗ್ ಯೂನಿಟ್ಟುಗಳನ್ನು ಸರಿಯಾದ ಕ್ರಮಾನುಗತಿಯಲ್ಲಿ ಪರಸ್ಪರ ಜೋಡಿಸಬೇಕಾಗುತ್ತದೆ. ಅಂಥ ಸಂದರ್ಭದಲ್ಲಿ, ಮೊದಲನೆ ಬ್ಯಾಲೆಟಿಂಗ್ ಯೂನಿಟ್ ಅನ್ನು ಮಾತ್ರ ವಿವಿಪ್ಯಾಟ್ ಯೂನಿಟ್‌ನೊಂದಿಗೆ ಸಂಪರ್ಕಿಸಲಾಗುತ್ತದೆ. ಪ್ರಿಸೈಡಿಂಗ್ ಅಧಿಕಾರಿಯವರು ಕಂಟ್ರೋಲ್ ಯೂನಿಟನ್ನು ವಿವಿಪ್ಯಾಟ್ ಮತ್ತು ಬ್ಯಾಲೆಟಿಂಗ್ ಯೂನಿಟ್‌ನೊಡನೆ ಸರಿಯಾಗಿ ಸಂಪರ್ಕ ಕಲ್ಪಿಸಿರುವುದನ್ನು ಪೋಲಿಂಗ್ ಏಜೆಂಟರು ಮನವರಿಕೆ ಮಾಡಿಕೊಳ್ಳಬಹುದಾಗಿರುತ್ತದೆ. ಹಾಗೆ ಅಂತರ್ ಸಂಪರ್ಕ ಕಲ್ಪಿಸುವಲ್ಲಿ ಯಾವುದೇ ದೋಷವಿದ್ದರೆ, ತಕ್ಷಣವೇ ಕಂಟ್ರೋಲ್ ಯೂನಿಟ್ಟಿನಲ್ಲಿರುವ ಪ್ರದರ್ಶನ ಫಲಕಗಳ ಮೇಲೆ ತೋರಿಸುತ್ತದೆ.

19.4 ಪೋಲಿಂಗ್ ಏಜೆಂಟರು,–

(i) ಬ್ಯಾಲೆಟ್ ಪತ್ರದ ಸ್ಕ್ರೀನ್ ಅಡಿಯಲ್ಲಿನ ಬ್ಯಾಲೆಟ್ ಪ್ರದರ್ಶಕ ಫಲಕದಲ್ಲಿ ಬ್ಯಾಲೆಟ್‌ಪತ್ರವನ್ನು ಸರಿಯಾಗಿ ಜೋಡಿಸಲಾಗಿದೆಯೇ: ಮತ್ತು

(ii) ಬ್ಯಾಲೆಟಿಂಗ್ ಯೂನಿಟ್ಟಿನ ಬಲ ಭಾಗದಲ್ಲಿ ಮೇಲುಭಾಗದಲ್ಲಿ ಮತ್ತು ಕೆಳ ಭಾಗದಲ್ಲಿ ರಿಟರ್ನಿಂಗ್ ಅಧಿಕಾರಿ ಹಾಕಿರುವ ಎರಡೂ ಸೀಲುಗಳು ಭದ್ರವಾಗಿವೆಯೇ;

(iii) ಬ್ಯಾಲೆಟಿಂಗ್ ಯೂನಿಟ್ ಅನ್ನು ಭದ್ರಪಡಿಸುವುದಕ್ಕಾಗಿ ಗುಲಾಬಿ ಬಣ್ಣದ ಪೇಪರ್ ಸೀಲನ್ನು ಉಪಯೋಗಿಸಲಾಗಿದೆಯೇ;

(iv) ಬ್ಯಾಲೆಟಿಂಗ್ ಯೂನಿಟ್(ಗಳ)ನಲ್ಲಿರುವ ಸ್ಲೈಡ್ ಸ್ವಿಚ್/ಥಂಬ್ ವೀಲ್ ಅನ್ನು ಸೂಕ್ತವಾಗಿ ಅಳವಡಿಸಲಾಗಿದೆಯೇ;

– ಎಂಬುದನ್ನು ಸಹ ಪರಿಶೀಲಿಸಬೇಕು ಮತ್ತು ಖಚಿತಪಡಿಸಿಕೊಳ್ಳಬೇಕು.

**ಕಂಟ್ರೋಲ್ ಯೂನಿಟ್ ಸಿದ್ಧತೆಗಳು:**

19.5 ಕಂಟ್ರೋಲ್ ಯೂನಿಟ್ಟಿನ ಎಡಭಾಗದಲ್ಲಿನ 'ಕ್ಯಾಂಡಿಡೇಟ್ ಸೆಟ್ ಸೆಕ್ಷನ್' ಮೇಲೆ ರಿಟರ್ನಿಂಗ್ ಅಧಿಕಾರಿಯವರು ಹಾಕಿರುವ ಸೀಲು ಭದ್ರವಾಗಿದೆಯೇ ಎಂಬುದನ್ನು ಪರಿಶೀಲಿಸಿ ನೋಡಲು ಪೋಲಿಂಗ್ ಏಜೆಂಟರಿಗೆ ಅವಕಾಶ ಕಲ್ಪಿಸಿಕೊಡಲಾಗುತ್ತದೆ.

19.6 ಪ್ರಿಸೈಡಿಂಗ್ ಅಧಿಕಾರಿಯವರು ಕಂಟ್ರೋಲ್ ಯೂನಿಟ್ಟಿನಲ್ಲಿ ಮಾಡಬೇಕಾದ ಸಿದ್ಧತೆಗಳು ಈ ಕೆಳಕಂಡಂತಿವೆ:

(i) ಕಂಟ್ರೋಲ್ ಯೂನಿಟ್ ಅನ್ನು ವಿವಿಪ್ಯಾಟ್‌ನೊಂದಿಗೆ ಅಂತರ–ಸಂಪರ್ಕಗೊಳಿಸುವುದು ಮತ್ತು ಬ್ಯಾಲೆಟಿಂಗ್ ಯೂನಿಟ್(ಗಳು) ಮತ್ತು ವಿವಿಪ್ಯಾಟ್ ಅನ್ನು ವಿಎಸ್‌ಡಿಯು (ಯಾವುದಾದರೂ ಇದ್ದರೆ)ದೊಂದಿಗೆ ಅಂತರ–ಸಂಪರ್ಕಗೊಳಿಸುವುದು;

(ii) ವಿದ್ಯುತ್ ಸ್ವಿಚ್ ಅನ್ನು 'ಆನ್' ಸ್ಥಿತಿಗೆ ತರುವುದು;

(iii) ಈ ಮೇಲಿನ (i) ಮತ್ತು (ii)ರಲ್ಲಿ ಹೇಳಿದ ಕಾರ್ಯಗಳನ್ನು ನಿರ್ವಹಿಸಿದ ನಂತರ ಹಿಂಬದಿಯ ಅಂಕಣವನ್ನು ಮುಚ್ಚುವುದು.

(iv) ಅಣಕು ಮತದಾನವನ್ನು ನಡೆಸುವುದು. ಪೋಲಿಂಗ್ ಏಜೆಂಟರ ಸಮ್ಮುಖದಲ್ಲಿ ಡ್ರಾಪ್‌ಬಾಕ್ಸ್‌ನಿಂದ ವಿವಿಪ್ಯಾಟ್ ಕಾಗದ ಸ್ಲಿಪ್‌ಗಳನ್ನು ತೆಗೆದು ಅವುಗಳನ್ನು ಎಣಿಸಬೇಕು ಮತ್ತು ಪ್ರತಿಯೊಬ್ಬ ಅಭ್ಯರ್ಥಿಗೆ ಸಂಬಂಧಿಸಿದಂತೆ, ವಿವಿಪ್ಯಾಟ್ ಕಾಗದ

ಸ್ಲಿಪ್ ಎಣಿಕೆಯು ಕಂಟ್ರೋಲ್ ಯೂನಿಟ್‌ನ ಫಲಿತಾಂಶಕ್ಕೆ ತಾಳೆಯಾಗುತ್ತದೆ ಎಂಬುದನ್ನು ದೃಢೀಕರಿಸಿಕೊಳ್ಳಬೇಕು.

(v) ಅಣಕು ಮತದಾನದ ನಂತರ ಇವಿಎಂ ಅನ್ನು ಕ್ಲಿಯರ್ ಮಾಡಬೇಕು ಮತ್ತು 'ಕ್ಲಿಯರ್' ಬಟನ್ ಅನ್ನು ಒತ್ತುವ ಮೂಲಕ ಎಲ್ಲಾ ಎಣಿಕೆಗಳನ್ನು 'ಸೊನ್ನೆ' ಗೆ ಸೆಟ್ ಮಾಡಬೇಕು;

(vi) ವಿದ್ಯುತ್ ಸ್ವಿಚ್ಚನ್ನು "ಆಫ್" ಸ್ಥಿತಿಗೆ ತರುವುದು;

(vii) ರಿಸಲ್ಟ್ ಸೆಕ್ಷನ್ನಿನ ಒಳ ಅಂಕಣವನ್ನು ಭದ್ರಗೊಳಿಸುವುದಕ್ಕಾಗಿ ಹಸಿರು ಕಾಗದದ ಸೀಲನ್ನು(ಸೀಲುಗಳನ್ನು) ಭದ್ರವಾಗಿ ಜೋಡಿಸುವುದು (ಪ್ಯಾರ 21ರಲ್ಲಿ ವಿವರಿಸಲಾದಂತೆ);

(viii) ವಿಶೇಷ ಟ್ಯಾಗ್ ಅನ್ನು ಭದ್ರವಾಗಿ ಜೋಡಿಸುವ ಮೂಲಕ ರಿಸಲ್ಟ್ ಅಂಕಣದ ಒಳ ಬಾಗಿಲನ್ನು ಮುಚ್ಚಿ ಮೊಹರು ಮಾಡುವುದು (ಪ್ಯಾರಾ 22 ಅನ್ನು ನೋಡಿ); ಮತ್ತು

(ix) ಅಡ್ರಸ್ ಟ್ಯಾಗ್ ಮತ್ತು ಸ್ಟ್ರಿಪ್‌ಸೀಲುಗಳೊಂದಿಗೆ ರಿಸಲ್ಟ್ ಸೆಕ್ಷನ್ನಿನ ಹೊರ ಹೊದಿಕೆಯನ್ನು ಮುಚ್ಚಿ ಮೊಹರು ಮಾಡುವುದು (ಪ್ಯಾರ 23 ಮತ್ತು 24ನ್ನು ನೋಡಿ);

19.7 ಕಂಟ್ರೋಲ್ ಯೂನಿಟ್ಟಿನ 'ಪವರ್ ಸ್ವಿಚ್' ಅನ್ನು 'ಆನ್' ಸ್ಥಿತಿಯಲ್ಲಿರಿಸಿದಾಗ, ಕಂಟ್ರೋಲ್ ಯೂನಿಟ್‌ನಲ್ಲಿ "ಬೀಪ್" ಶಬ್ದವು ಉಂಟಾಗುತ್ತದೆ ಮತ್ತು ಕಂಟ್ರೋಲ್ ಯೂನಿಟ್ಟಿನ ಡಿಸ್‌ಪ್ಲೇ ಸೆಕ್ಷನ್‌ನಲ್ಲಿ 'ಆನ್' ದೀಪವು ಹಸಿರು ಬಣ್ಣದಲ್ಲಿ ಪ್ರಕಾಶಿಸುತ್ತದೆ.

19.8 ಆನಂತರ ಪ್ರಿಸೈಡಿಂಗ್ ಅಧಿಕಾರಿಯವರು ಹಿಂಬದಿಯ ಕಂಪಾರ್ಟ್‌ಮೆಂಟನ್ನು ಮುಚ್ಚುತ್ತಾರೆ. ಇದನ್ನು ಭದ್ರವಾಗಿ ಮುಚ್ಚಲು, ತೆಳುತಂತಿಯ ತುಂಡನ್ನು ಅಥವಾ ದಪ್ಪನೆಯ ದಾರವನ್ನು ತೆಗೆದುಕೊಂಡು ಈ ಉದ್ದೇಶಕ್ಕಾಗಿಯೇ ಒದಗಿಸಲಾದ ಎರಡು ರಂಧ್ರಗಳ ಮೂಲಕ ತೂರಿಸಿ ಹೊರಬಂದ ತಂತಿಯ/ ದಾರದ ಎರಡೂ ತುದಿಗಳನ್ನು ಒಂದುಗೂಡಿಸಿ ಸಂದರ್ಭಾನುಸಾರ ಕೆಲವು ಸುತ್ತು ಸುತ್ತುಹಾಕಬಹುದು ಅಥವಾ ಗಂಟುಹಾಕಬಹುದು. ಮತದಾನದ ನಂತರ ಕಂಟ್ರೋಲ್ ಯೂನಿಟ್‌ನ ವಿದ್ಯುತ್ ಸ್ವಿಚ್ಚನ್ನು 'ಆಫ್' ಮಾಡಲು ಮತ್ತು ವಿವಿಪ್ಯಾಟ್ ಮತ್ತು ಬ್ಯಾಲೆಟಿಂಗ್ ಯೂನಿಟ್ (ಗಳ) ಸಂಪರ್ಕವನ್ನು ತಪ್ಪಿಸಲು ಹಿಂಭಾಗದ ಕಂಪಾರ್ಟ್‌ಮೆಂಟನ್ನು ಮತ್ತೆ ತೆರೆಯಬೇಕಾಗುವುದರಿಂದ ಅದನ್ನು ಮೊಹರು ಮಾಡಬೇಕಾಗಿಲ್ಲವೆಂಬುದನ್ನು ಪ್ರಿಸೈಡಿಂಗ್ ಅಧಿಕಾರಿಯು ಗಮನದಲ್ಲಿಟ್ಟುಕೊಂಡಿರಬೇಕು.

**ಮತದಾರನು ಪರಿಶೀಲಿಸಿಕೊಳ್ಳಬಹುದಾದ ಕಾಗದ ತಾಳೆ ದರ್ಶಕದ (ವಿವಿಪ್ಯಾಟ್) ಸಿದ್ಧತೆ**

19.9 ವಿವಿಪ್ಯಾಟ್‌ಗೆ ಬ್ಯಾಲೆಟ್ ಪತ್ರವನ್ನು ತಪ್ಪದೇ ತುಂಬಿಸಿ ಅದನ್ನು ರಿಟರ್ನಿಂಗ್ ಅಧಿಕಾರಿಯು ಕಂಟ್ರೋಲ್ ಯೂನಿಟ್‌ನಲ್ಲಿ ಸ್ಪರ್ಧಿಸುತ್ತಿರುವ ಅಭ್ಯರ್ಥಿಗಳ ಸಂಖ್ಯೆಗನುಗುಣವಾಗಿ ಸೆಟ್ ಮಾಡತಕ್ಕದ್ದು. ಪ್ರಿಸ್ಯೆಂಡಿಂಗ್ ಅಧಿಕಾರಿಯು ಮತಸಾಮಗ್ರಿಗಳೊಂದಿಗೆ ಇವಿಎಂ ಅನ್ನು ತೆಗೆದುಕೊಳ್ಳುವ ಸಮಯದಲ್ಲಿ ವಿವಿಪ್ಯಾಟ್‌ನ ಕ್ರಮಸಂಖ್ಯೆಯನ್ನು ಪರಿಶೀಲಿಸಬಹುದಾಗಿದೆ. ಪ್ರಿಸ್ಯೆಡಿಂಗ್ ಅಧಿಕಾರಿಯವರು ಬ್ಯಾಲೆಟ್ ಯೂನಿಟ್‌ನಲ್ಲಿ ನೀಡಿರುವ ಅಭ್ಯರ್ಥಿಗಳ ಕ್ರಮಸಂಖ್ಯೆಗಳು ಮತ್ತು ಹೆಸರುಗಳು ಹಾಗೂ ಅವರಿಗೆ ಹಂಚಿಕೆಯಾಗಿರುವ ಚಿಹ್ನೆಗಳು ಸರಿಯಾಗಿವೆಯೇ ಮತ್ತು ಪೇಪರನ್ನು ಸಾಕಷ್ಟು ಪ್ರಮಾಣದಲ್ಲಿ ಪ್ರಿಂಟರಿನಲ್ಲಿ ಅಳವಡಿಸಲಾಗಿದೆಯೇ ಎಂಬುದನ್ನು ಪರಿಶೀಲಿಸಬೇಕು. ವಿವಿಪ್ಯಾಟ್ ಅನ್ನು ವೋಟಿಂಗ್ ಕಂಪಾರ್ಟ್‌ಮೆಂಟ್‌ನಲ್ಲಿ ಬ್ಯಾಲೆಟ್ ಯೂನಿಟ್ (ಗಳು)ನೊಂದಿಗೆ ಇರಿಸತಕ್ಕದ್ದು ಮತ್ತು ಅದನ್ನು ಚುನಾವಣಾ ಆಯೋಗವು ನಿರ್ದೇಶಿಸಿದ ರೀತಿಯಲ್ಲಿ ಇವಿಎಂಗೆ ಸಂಪರ್ಕಿಸತಕ್ಕದ್ದು. ಮತದಾರನು ಒಮ್ಮೆ ಮತ ಚಲಾಯಿಸಿದ ನಂತರ, ಅಭ್ಯರ್ಥಿಯ ಕ್ರಮಸಂಖ್ಯೆ, ಹೆಸರು ಮತ್ತು ಚಿಹ್ನೆಯನ್ನೊಳಗೊಂಡ ಒಂದು ಸ್ಲಿಪ್ ವಿವಿಪ್ಯಾಟ್ ಪ್ರಿಂಟರಿನಲ್ಲಿ ಪ್ರಿಂಟ್ ಆಗುತ್ತದೆ ಮತ್ತು 7 ಸೆಕೆಂಡುಗಳವರೆಗೆ ಪಾರದರ್ಶಕ ಕಿಟಕಿಯ ಮೂಲಕ ಕಾಣಿಸುತ್ತದೆ. ಆ ನಂತರ, ಅದು ಸ್ವಯಂಚಾಲಿತವಾಗಿ ತುಂಡಾಗಿ ಪ್ರಿಂಟರಿನ ಡ್ರಾಪ್‌ಬಾಕ್ಸಿನೊಳಗೆ ಬೀಳುತ್ತದೆ.

**20. ಅಣಕು ಮತದಾನ ನಡೆಸುವುದು**

20.1 ಮತದಾನ ಪ್ರಾರಂಭವಾಗುವುದಕ್ಕೆ ಮೊದಲು, ಇವಿಎಂ ಮತ್ತು ವಿವಿಪ್ಯಾಟ್ ಪೂರ್ಣ ಸುಸ್ಥಿತಿಯಲ್ಲಿದೆಯೆಂಬುದನ್ನು ಮತ್ತು ಯಂತ್ರದಲ್ಲಿ ಈಗಾಗಲೇ ಯಾವ ಮತಗಳೂ ದಾಖಲಾಗಿಲ್ಲವೆಂಬುದನ್ನು ಪ್ರಿಸ್ಯೆಡಿಂಗ್ ಅಧಿಕಾರಿಯವರು ಸ್ವತಃ ಮನವರಿಕೆ ಮಾಡಿಕೊಳ್ಳುವುದು ಮಾತ್ರವಲ್ಲದೇ, ಹಾಜರಿರುವ ಎಲ್ಲಾ ಪೋಲಿಂಗ್ ಏಜೆಂಟರಿಗೆ ಅದನ್ನು ಮನವರಿಕೆ ಮಾಡಿಕೊಡಬೇಕು. ಈ ರೀತಿ ಮನವರಿಕೆ ಮಾಡಿಕೊಡುವುದಕ್ಕಾಗಿ, ಅವರು, ಮೊದಲಿಗೆ ಎಲ್ಲಾ ಎಣಿಕೆಗಳನ್ನು 'ಕ್ಲಿಯರ್' ಬಟನ್ ಒತ್ತುವ ಮೂಲಕ ಸೊನ್ನೆಗೆ ತರಲಾಗಿದೆ ಎಂಬುದನ್ನು ಹಾಜರಿರುವ ಎಲ್ಲರಿಗೂ ತೋರಿಸಬೇಕು. ಕಂಟ್ರೋಲ್ ಯೂನಿಟ್ಟಿನ ರಿಸಲ್ಟ್ ಸೆಕ್ಷನ್ನಿನಲ್ಲಿರುವ ಕಂಪಾರ್ಟ್‌ಮೆಂಟಿನಲ್ಲಿ 'ಕ್ಲಿಯರ್' ಬಟನ್ ಅನ್ನು ಒದಗಿಸಲಾಗಿರುತ್ತದೆ. ಈ ಕಂಪಾರ್ಟ್‌ಮೆಂಟ್ ಒಳಬಾಗಿಲು ಮತ್ತು ಹೊರ ಹೊದಿಕೆಯಿಂದ ಮುಚ್ಚಲ್ಪಟ್ಟಿದೆ. ಒಳ ಬಾಗಿಲು 'ಕ್ಲಿಯರ್' ಬಟನ್, 'ರಿಸಲ್ಟ್' ಬಟನ್ ಮತ್ತು 'ಪ್ರಿಂಟ್' ಬಟನ್‌ಗಳನ್ನು ಒಳಗೊಂಡಿರುವ ಕಂಪಾರ್ಟ್‌ಮೆಂಟ್‌ಗಳಿಗೆ

ರಕ್ಷಾಕವಚವಾಗಿರುತ್ತದೆ. ಈ 'ಕ್ಲೋಸ್' ಬಟನ್‌ನ ಪಕ್ಕಕ್ಕೆ ಮತ್ತೊಂದು ಚೇಂಬರ್ ಇರುತ್ತದೆ. ರಿಸಲ್ಟ್ ಸೆಕ್ಷನ್ನಿನ ಇತರ ಹೊದಿಕೆಯು ಮುಚ್ಚಲ್ಪಟ್ಟಿರುವಾಗ 'ಕ್ಲೋಸ್' ಬಟನ್ ಅನ್ನು ಒಳಗೊಂಡಿರುವ ಈ ಚೇಂಬರನ್ನು ಮುಚ್ಚಲಾಗುತ್ತದೆ. ಒಳ ಬಾಗಿಲ ಮೇಲೆ ಹೊರಹೊದಿಕೆಯನ್ನು ಕಲ್ಪಿಸಲಾಗಿದ್ದು, ಇದು ಕೂಡ 'ಕ್ಲೋಸ್' ಬಟನ್ ಅನ್ನು ಒಳಗೊಂಡಿರುವ ಕಂಪಾರ್ಟ್‌ಮೆಂಟ್‌ಗೆ ರಕ್ಷಾಕವಚವಾಗಿರುತ್ತದೆ. 'ಕ್ಲಿಯರ್' ಬಟನ್ ಅನ್ನು ತಲುಪುವುದಕ್ಕಾಗಿ, ಅವರು ಮೊದಲು ಎಡಬದಿಯಲ್ಲಿ ಒದಗಿಸಲಾಗಿರುವ ಅಗುಳಿಯ (ಲ್ಯಾಚ್)ನ್ನು ಸ್ವಲ್ಪ ಒಳಮುಖವಾಗಿ ಒತ್ತುವುದರ ಮೂಲಕ ಹೊರ ಹೊದಿಕೆಯನ್ನು ತೆರೆಯುತ್ತಾರೆ. ತದನಂತರ, 'ರಿಸಲ್ಟ್' ಮತ್ತು 'ಪ್ರಿಂಟ್' ಬಟನ್‌ಗಳ ಮೇಲ್ಭಾಗದ ಎರಡು ರಂಧ್ರಗಳ ಮುಖಾಂತರ ಹೆಬ್ಬೆರಳು ಮತ್ತು ಒಂದು ಬೆರಳನ್ನು ತೂರಿಸಿ, ನಂತರ ಒಳಭಾಗದಲ್ಲಿರುವ ಅಗುಳಿ (ಲ್ಯಾಚ್)ಗಳನ್ನು ಏಕಕಾಲಕ್ಕೆ ಸ್ವಲ್ಪ ಒಳಮುಖವಾಗಿ ಒತ್ತುವುದರ ಮೂಲಕ ಒಳ ಬಾಗಿಲನ್ನು ತೆರೆಯಬಹುದು. ಯಾವುದೇ ಸಂದರ್ಭದಲ್ಲೂ, ಒಳ ಬಾಗಿಲನ್ನು ಮೇಲೆ ವಿವರಿಸಲಾದ ರೀತಿಯಲ್ಲಿ ಅಗುಳಿ (ಲ್ಯಾಚ್)ಗಳನ್ನು ಚಾಲೂಗೊಳಿಸದೆ ಬಲವಂತವಾಗಿ ತೆರೆಯತಕ್ಕದ್ದಲ್ಲ. ಲ್ಯಾಚ್‌ಗಳನ್ನು ಚಾಲೂಗೊಳಿಸದೆ ತೆರೆದರೆ ಈ ಅತ್ಯಂತ ಮುಖ್ಯವಾದ ಕಂಪಾರ್ಟ್‌ಮೆಂಟ್ ಹಾನಿಗೊಳಗಾಗುತ್ತದೆ. 'ಕ್ಲಿಯರ್' ಬಟನ್ ಅನ್ನು ಒತ್ತಿದಾಗ, ಕಂಟ್ರೋಲ್ ಯೂನಿಟ್‌ನಲ್ಲಿರುವ ಡಿಸ್‌ಪ್ಲೇ ಪ್ಯಾನಲ್‌ಗಳು ಕ್ರಮಾನುಗತವಾಗಿ ಈ ಮುಂದಿನ ಮಾಹಿತಿಯನ್ನು ಡಿಸ್‌ಪ್ಲೇ ಮಾಡಲು ಪ್ರಾರಂಭಿಸುತ್ತವೆ: (ಪ್ರತಿಯೊಂದು ಸಂಕೇತದ ನಂತರ ಬೀಪ್ ಶಬ್ದ ಬರುತ್ತದೆ).

| |
|---|
| **ಚಲಾಯಿಸಲಾದ ಮತಗಳನ್ನು ಅಳಿಸುವುದು** |
| **ಅಭ್ಯರ್ಥಿಗಳು–10** |
| **ಒಟ್ಟು ಚಲಾಯಿಸಲಾದ ಮತಗಳು–0** |
| **ಅಭ್ಯರ್ಥಿ–01**<br>**ಮತಗಳು–0** |
| **ಅಭ್ಯರ್ಥಿ–02**<br>**ಮತಗಳು–0** |
| **--------**<br>**--------** |
| **ಅಭ್ಯರ್ಥಿ–10**<br>**ಮತಗಳು–0** |
| **ಮುಕ್ತಾಯ** |

**ಸೂಚನೆ:** 'ಕ್ಲಿಯರ್' ಬಟನ್ ಅನ್ನು ಒತ್ತಿದಾಗ, ಡಿಸ್‌ಪ್ಲೇ ಪ್ಯಾನಲ್‌ನಲ್ಲಿ ಮೇಲೆ ಸೂಚಿಸಲಾದಂತೆ ಮಾಹಿತಿಯು ಪ್ರದರ್ಶನವಾಗದಿದ್ದರೆ, ಯಂತ್ರವನ್ನು ಕ್ಲಿಯರ್ ಮಾಡುವುದಕ್ಕಾಗಿ ಮೊದಲೇ ನಿರ್ವಹಿಸಬೇಕಾಗಿದ್ದ ಕೆಲವು ಕಾರ್ಯಾಚರಣೆಗಳನ್ನು ನಿರ್ವಹಿಸಿರುವುದಿಲ್ಲವೆಂದರ್ಥ. ಯಂತ್ರವನ್ನು ಕ್ಲಿಯರ್ ಮಾಡಲು, ಪ್ರಿಸೈಡಿಂಗ್ ಅಧಿಕಾರಿಯು ಬ್ಯಾಲೆಟಿಂಗ್ ಯೂನಿಟ್‌ಗಳು, ವಿವಿಪ್ಯಾಟ್ ಮತ್ತು ಕಂಟ್ರೋಲ್ ಯೂನಿಟ್ ಅನ್ನು ಪರಸ್ಪರ ಸರಿಯಾಗಿ ಸಂಪರ್ಕ ಕಲ್ಪಿಸಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ನಂತರ ಅವರು 'ಕ್ಲೋಸ್' ಬಟನ್ ಅನ್ನು ಒತ್ತಿ ಆನಂತರ, 'ರಿಸಲ್ಟ್' ಬಟನ್ ಅನ್ನು ಒತ್ತಬೇಕು. ಈಗ ಅವರು 'ಕ್ಲಿಯರ್' ಬಟನ್ ಒತ್ತಿದಾಗ, ಡಿಸ್‌ಪ್ಲೇ ಪ್ಯಾನಲ್‌ಗಳು ಮೇಲೆ ಸೂಚಿಸಿರುವಂತೆ ಮಾಹಿತಿಯನ್ನು ಡಿಸ್‌ಪ್ಲೇ ಮಾಡಲು ಪ್ರಾರಂಭಿಸುತ್ತವೆ. ಡಿಸ್‌ಪ್ಲೇ ಪ್ಯಾನಲ್ಲಿನಲ್ಲಿನ ಮಾಹಿತಿ ಡಿಸ್‌ಪ್ಲೇಯು ಯಾವುದೇ ಮತಗಳು ಮತಯಂತ್ರದಲ್ಲಿ ಈಗಾಗಲೇ ದಾಖಲುಗೊಂಡಿಲ್ಲವೆಂಬುದನ್ನು ಮತಗಟ್ಟೆಯಲ್ಲಿ ಹಾಜರಿರುವ ಪೋಲಿಂಗ್ ಏಜೆಂಟರಿಗೆ ಮನವರಿಕೆ ಮಾಡಿಕೊಡತಕ್ಕದ್ದು.

20.2 ಮತಯಂತ್ರದಲ್ಲಿ ಯಾವುದೇ ಮತಗಳು ಈಗಾಗಲೇ ದಾಖಲಾಗಿಲ್ಲವೆಂಬುದನ್ನು ಮೇಲಿನಂತೆ ಪ್ರಾತ್ಯಕ್ಷಿಕೆ ಮಾಡಿ ತೋರಿಸಿದ ನಂತರ ಪ್ರಿಸೈಡಿಂಗ್ ಅಧಿಕಾರಿಯವರು, ಸ್ಪರ್ಧಿಸುತ್ತಿರುವ ಪ್ರತಿಯೊಬ್ಬ ಅಭ್ಯರ್ಥಿಗೆ ಯಾದೃಚ್ಛಿಕವಾಗಿ ಕನಿಷ್ಠ ಪಕ್ಷ 50 ಮತಗಳನ್ನು ದಾಖಲಿಸಿ ಅಣಕು ಮತದಾನವನ್ನು ನಡೆಸತಕ್ಕದ್ದು. ಆ ಉದ್ದೇಶಕ್ಕಾಗಿ, ಪ್ರಿಸೈಡಿಂಗ್ ಅಧಿಕಾರಿಯು ಈ ಮುಂದಿನ ಕಾರ್ಯಾಚರಣೆಗಳನ್ನು ನಡೆಸುತ್ತಾರೆ:–

(ಎ) ಅವರು ಕಂಟ್ರೋಲ್ ಯೂನಿಟ್‌ನ ಬ್ಯಾಲೆಟ್ ಸೆಕ್ಷನ್‌ನಲ್ಲಿರುವ 'ಬ್ಯಾಲೆಟ್' ಬಟನ್ ಅನ್ನು ಒತ್ತುವರು. 'ಬ್ಯಾಲೆಟ್' ಬಟನ್ ಅನ್ನು ಒತ್ತಿದಾಗ ಡಿಸ್‌ಪ್ಲೇ ಸೆಕ್ಷನ್‌ನಲ್ಲಿರುವ 'ಬ್ಯುಸಿ' ದೀಪವು ಕೆಂಪು ಬಣ್ಣದಲ್ಲಿ ಪ್ರಜ್ವಲಿಸುತ್ತದೆ. ಏಕಕಾಲಕ್ಕೆ ಬ್ಯಾಲೆಟಿಂಗ್ ಯೂನಿಟ್‌ನಲ್ಲಿರುವ 'ರೆಡಿ' ದೀಪವು ಸಹ ಹಸಿರು ಬಣ್ಣದಲ್ಲಿ ಪ್ರಜ್ವಲಿಸಲಾರಂಭಿಸುತ್ತದೆ.

(ಬಿ) ಆಮೇಲೆ ಪ್ರಿಸೈಡಿಂಗ್ ಅಧಿಕಾರಿ ಅವರು, ಪೋಲಿಂಗ್ ಏಜೆಂಟರು ತಮ್ಮ ಆಯ್ಕೆಗೆ ಅನುಸಾರವಾಗಿ ಬ್ಯಾಲೆಟಿಂಗ್ ಯೂನಿಟ್ಟಿನಲ್ಲಿ ಯಾವುದೇ ಅಭ್ಯರ್ಥಿಯ ಮುಂದಿನ ನೀಲಿ ಬಟನ್‌ಗಳನ್ನು ಒತ್ತುವಂತೆ ಯಾರೇ ಪೋಲಿಂಗ್ ಏಜೆಂಟ್‌ರಿಗೆ ಕೇಳುವರು. ಪ್ರತಿಯೊಂದು ನೀಲಿ (ಮುಚ್ಚಿರದ) ಬಟನ್‌ಗಳನ್ನು ಕನಿಷ್ಠ ಪಕ್ಷ ಒಂದು ಬಾರಿ ಒತ್ತಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳುವುದು. ಇದರಿಂದ ಎಡಗಡೆ ಮುಚ್ಚದಿರುವ ಪ್ರತಿಯೊಂದು ಬಟನ್ ಅನ್ನು

ಪರೀಕ್ಷಿಸಿ ಅವು ಸರಿಯಾಗಿ ಕಾರ್ಯನಿರ್ವಹಿಸುತ್ತಿದೆ ಎಂಬುದನ್ನು ಖಚಿತಪಡಿಸಿಕೊಂಡಂತಾಗುತ್ತದೆ.

(ಸಿ) ಅಭ್ಯರ್ಥಿಯ ನೀಲಿ ಬಟನ್ನನ್ನು ಹಾಗೆ ಒತ್ತುತ್ತಿರುವಾಗ, ಬ್ಯಾಲೆಟಿಂಗ್ ಯೂನಿಟ್‌ನಲ್ಲಿರುವ 'ರೆಡಿ' ದೀಪವು ಕ್ಷೀಣವಾಗುತ್ತದೆ ಮತ್ತು ಬಟನ್ ಬಳಿ ಇರುವ ಅಭ್ಯರ್ಥಿಯ, ದೀಪವು ಕೆಂಪು ಬಣ್ಣದಲ್ಲಿ ಪ್ರಜ್ವಲಿಸಲಾರಂಭಿಸುತ್ತದೆ. ಮತ ಚಲಾಯಿತ ಅಭ್ಯರ್ಥಿಯ ಚಿಹ್ನೆ, ಕ್ರಮಸಂಖ್ಯೆ, ಹೆಸರನ್ನೊಳಗೊಂಡ ಕಾಗದದ ಸಣ್ಣ ಸ್ಲಿಪ್ ಪ್ರಿಂಟರಿನಲ್ಲಿ ಪ್ರಿಂಟ್ ಆಗುತ್ತದೆ 7 ಸೆಕೆಂಡುಗಳವರೆಗೆ ವಿವಿಪ್ಯಾಟ್‌ನ ಪಾರದರ್ಶಕ ಕಿಟಕಿಯ ಮೂಲಕ ಕಾಣಿಸುತ್ತದೆ. ಅಲ್ಲದೆ ಕಂಟ್ರೋಲ್ ಯೂನಿಟ್ಟಿನಿಂದ 'ಬೀಪ್' ಶಬ್ದವು ಕೇಳಿಸುತ್ತದೆ. ಕೆಲವು ಸೆಕೆಂಡುಗಳ ನಂತರ ಅಭ್ಯರ್ಥಿಯ ದೀಪದಲ್ಲಿನ ಕೆಂಪು ಬೆಳಕು, 'ಬ್ಯುಸಿ' ದೀಪದಲ್ಲಿನ ಕೆಂಪು ಬೆಳಕು ಹಾಗೂ ಬೀಪ್ ಶಬ್ದವು ಕ್ಷೀಣಿಸುತ್ತದೆ. ಇದು, ಯಾವ ಅಭ್ಯರ್ಥಿಯ ಹೆಸರಿನ ಮುಂದಿನ ನೀಲಿ ಬಟನ್ನನ್ನು ಒತ್ತಲಾಗಿದೆಯೋ ಅಂತಹ ಅಭ್ಯರ್ಥಿಯ ಪರವಾಗಿ ಮತವು ಕಂಟ್ರೋಲ್ ಯೂನಿಟ್‌ನಲ್ಲಿ ದಾಖಲಾಗಿದೆ ಮತ್ತು ಮತಯಂತ್ರವು ಈಗ ಮುಂದಿನ ಮತವನ್ನು ದಾಖಲಿಸಿಕೊಳ್ಳಲು ಸಿದ್ಧವಾಗಿದೆ ಎಂಬುದನ್ನು ಸೂಚಿಸುತ್ತದೆ.

(ಡಿ) ಈ ಹಿಂದಿನ (ಎ), (ಬಿ) ಮತ್ತು (ಸಿ) ಪ್ಯಾರಾಗಳಲ್ಲಿ ವಿವರಿಸಲಾದಂಥ ಪ್ರಕ್ರಿಯೆಯನ್ನೇ ಉಳಿದ ಪ್ರತಿಯೊಬ್ಬ ಅಭ್ಯರ್ಥಿಗೆ ಒಂದು ಅಥವಾ ಒಂದಕ್ಕಿಂತ ಹೆಚ್ಚು ಮತಗಳನ್ನು ದಾಖಲಿಸುವುದಕ್ಕಾಗಿ ಪುನರಾವರ್ತಿಸಲಾಗುವುದು. ಹಾಗೆ ಪ್ರತಿಯೊಬ್ಬ ಅಭ್ಯರ್ಥಿಯ ಸಂಬಂಧದಲ್ಲಿ ದಾಖಲಿಸಲಾದ ಮತಗಳ ಲೆಕ್ಕವನ್ನು ಎಚ್ಚರಿಕೆಯಿಂದ ಇಟ್ಟುಕೊಳ್ಳಬೇಕು. ಪ್ರತಿಯೊಂದು ಮತವೂ ವಿವಿಪ್ಯಾಟ್ ಪೇಪರ್ ಸ್ಲಿಪ್‌ನಲ್ಲಿ ಮುದ್ರಿತವಾಗುತ್ತದೆ.

(ಇ) ಮತಗಳನ್ನು ಹಾಗೆ ದಾಖಲಿಸುತ್ತಿರುವಾಗ, ಪ್ರಿಸೈಡಿಂಗ್ ಅಧಿಕಾರಿಯವರು ಯಾವುದೇ ಸಮಯದಲ್ಲಿ ಮತಯಂತ್ರದಲ್ಲಿ ದಾಖಲಾಗಿರುವ ಒಟ್ಟು ಮತಗಳು, ಆ ಅವಧಿಯವರೆಗೆ ಚಲಾವಣೆಯಾದಂಥ ಮತಗಳ ಸಂಖ್ಯೆಗೆ ತಾಳೆಯಾಗುತ್ತವೆಯೇ ಎಂಬುದನ್ನು ಪರಿಶೀಲಿಸಲು ಕಂಟ್ರೋಲ್ ಯೂನಿಟ್‌ನ ಬ್ಯಾಲೆಟ್ ಸೆಕ್ಷನ್‌ನಲ್ಲಿರುವ 'ಟೋಟಲ್' ಬಟನ್ನನ್ನು ಒತ್ತಬಹುದು.

**ಸೂಚನೆ:** ಯಾರೇ ಅಭ್ಯರ್ಥಿಗೆ ಮತವನ್ನು ದಾಖಲಿಸಿದ ನಂತರ ಮತ್ತು ಡಿಸ್‌ಪ್ಲೇ ಸೆಕ್ಷನ್ ನಲ್ಲಿ 'ಬ್ಯುಸಿ' ದೀಪವು ನಿಂತ ನಂತರ ಮಾತ್ರವೇ 'ಟೋಟಲ್' ಬಟನ್ನನ್ನು ಒತ್ತಬೇಕು.

(ಎಫ್) ಅಣಕು ಮತದಾನದ ಮುಕ್ತಾಯದಲ್ಲಿ, ಪ್ರಿಸೈಡಿಂಗ್ ಅಧಿಕಾರಿ ಅವರು ರಿಸಲ್ಟ್ ಸೆಕ್ಷನ್ನಿನಲ್ಲಿರುವ 'ಕ್ಲೋಸ್' ಬಟನ್ನನ್ನು ಒತ್ತಿದಾಗ, ಡಿಸ್‌ಪ್ಲೇ ಸೆಕ್ಷನ್‌ನಲ್ಲಿನ ಡಿಸ್‌ಪ್ಲೇ ಪ್ಯಾನಲ್ ಅನುಕ್ರಮ ಮಾಹಿತಿಯನ್ನು ತೋರಿಸುತ್ತದೆ.

(ಜಿ) ಈಗ, ರಿಸಲ್ಟ್ ಸೆಕ್ಷನ್ನಿನಲ್ಲಿ 'ರಿಸಲ್ಟ್' ಎಂದು ಗುರುತು ಮಾಡಲಾದ ಬಟನ್ನನ್ನು ಒತ್ತಿದಾಗ, ಡಿಸ್‌ಪ್ಲೇ ಪ್ಯಾನಲ್‌ಗಳು ಅನುಕ್ರಮವಾಗಿ ಮಾಹಿತಿಯನ್ನು ತೋರಿಸಲಾರಂಭಿಸುತ್ತವೆ. ಅಣಕು ಮತದಾನದ ನಂತರ, ಪೋಲಿಂಗ್ ಏಜೆಂಟರ ಸಮ್ಮುಖದಲ್ಲಿ ಪ್ರತಿಯೊಬ್ಬ ಅಭ್ಯರ್ಥಿಗೆ ಸಂಬಂಧಿಸಿದಂತೆ ಕಂಟ್ರೋಲ್ ಯೂನಿಟ್‌ನಲ್ಲಿ ದಾಖಲಾದ ಫಲಿತಾಂಶವನ್ನು ಖಚಿತಪಡಿಸಿಕೊಳ್ಳಬೇಕು ಮತ್ತು ವಿವಿಪ್ಯಾಟ್ ಪೇಪರ್ ಸ್ಲಿಪ್ ಅನ್ನು (ವಿವಿಪ್ಯಾಟ್ ಡ್ರಾಪ್ ಬಾಕ್ಸಿನಿಂದ ತೆಗೆದನಂತರ) ಎಣಿಸಬೇಕು ಮತ್ತು ಪ್ರತಿ ಅಭ್ಯರ್ಥಿಗೆ ಸಂಬಂಧಿಸಿದಂತೆ ಚಲಾಯಿಸಲಾದ ಮತಗಳೊಂದಿಗೆ ಫಲಿತಾಂಶವು ತಾಳೆಯಾಗುತ್ತದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.

ಆನಂತರ, ಪ್ರಿಸೈಡಿಂಗ್ ಅಧಿಕಾರಿಯು, ಅಣಕು ಮತದಾನದ ಅವಧಿಯಲ್ಲಿ ದಾಖಲಾದ ಮತಗಳ ಲೆಕ್ಕವನ್ನು ಅಳಿಸಿಹಾಕಲು ಮತ್ತೆ 'ಕ್ಲಿಯರ್' ಬಟನ್ನನ್ನು ಒತ್ತುವರು. 'ಕ್ಲಿಯರ್' ಬಟನ್ ಅನ್ನು ಹಾಗೆ ಒತ್ತಿದಾಗ, ಎಲ್ಲ ಎಣಿಕೆಗಳು ಸೊನ್ನೆಯನ್ನು ತೋರಿಸುತ್ತವೆ. ವಿವಿಪ್ಯಾಟ್‌ನಲ್ಲಿ ಪೇಪರ್ ಸ್ಲಿಪ್‌ಗಳನ್ನೂ ಸಹ ಡ್ರಾಪ್ ಬಾಕ್ಸಿನಿಂದ ಖಾಲಿ ಮಾಡಬೇಕು

20.3 ಪೋಲಿಂಗ್ ಏಜೆಂಟರ ಹಾಜರಾತಿಯು, ಬೇರೊಬ್ಬನ ಮತವನ್ನು ಚಲಾಯಿಸುವುದಕ್ಕಾಗಿ ಬೇರೊಬ್ಬನ ಸೋಗುಹಾಕಿಕೊಂಡು ಬರುವ ನಕಲಿ ಮತದಾರರನ್ನು ತಡೆಯುವಲ್ಲಿ ಸಹಾಯವಾಗುವುದರಿಂದ ಮತ್ತು ಮತಗಟ್ಟೆಯಲ್ಲಿ ಬಳಸಲಾದ ಇವಿಎಂ ಮತ್ತು ವಿವಿಪ್ಯಾಟ್ ಸಮರ್ಪಕವಾಗಿ ಕಾರ್ಯನಿರ್ವಹಣಾ ಸ್ಥಿತಿಯಲ್ಲಿದೆ ಹಾಗೂ ಅಣಕು ಮತದಾನದ ಸಮಯದಲ್ಲಿ ಚಲಾಯಿಸಲಾದ ಮತಗಳನ್ನು ಅಳಿಸಿಹಾಕಲಾಗಿದೆ ಎಂಬುದನ್ನು ಖಚಿತಪಡಿಸುವುದರಿಂದ, ಆಯೋಗವು ಪ್ರಿಸೈಡಿಂಗ್ ಅಧಿಕಾರಿಯರವರು ನೀಡಬೇಕಾದ ಒಂದು ಪ್ರಮಾಣಪತ್ರವನ್ನು ಜಾರಿಗೆ ತಂದಿದೆ. ಈ ಪ್ರಮಾಣಪತ್ರವು ಹಾಜರಿರುವ ಪೋಲಿಂಗ್ ಏಜೆಂಟರ ಹೆಸರುಗಳನ್ನು ಹಾಗೂ ಅವರು ಪ್ರತಿನಿಧಿಸುವ ಅಭ್ಯರ್ಥಿಯ ಹೆಸರುಗಳನ್ನು ಸೂಚಿಸುತ್ತದೆ ಮತ್ತು ಅದರ ಮೇಲೆ ಅವರ ಸಹಿಗಳನ್ನು ಪಡೆಯಲಾಗುತ್ತದೆ. ಅಣಕು ಮತದಾನ ಪ್ರಮಾಣಪತ್ರದ ನಮೂನೆಯನ್ನು ಅನುಬಂಧ– IX ರಲ್ಲಿ ನೀಡಲಾಗಿದೆ.

## 21. ಕಂಟ್ರೋಲ್ ಯೂನಿಟ್ಟಿನಲ್ಲಿ ಗ್ರೀನ್ ಪೇಪರ್ ಸೀಲನ್ನು ಅಳವಡಿಸುವುದು

21.1 ಮತಪತ್ರಗಳು ಮತ್ತು ಮತಪೆಟ್ಟಿಗೆಗಳನ್ನು ಬಳಸುವ ಸಾಂಪ್ರದಾಯಿಕ ಮತದಾನ ವ್ಯವಸ್ಥೆಯಲ್ಲಿ ಮತಪೆಟ್ಟಿಗೆಗಳನ್ನು ಆಯೋಗದವರು ವಿಶೇಷವಾಗಿ ಮುದ್ರಣ ಮಾಡಿಸಿರುವ ಹಸಿರು ಕಾಗದ ಸೀಲನ್ನು ಅಳವಡಿಸುವ ಮೂಲಕ ಮೊಹರು ಮಾಡಿ ಭದ್ರಪಡಿಸಲಾಗುತ್ತದೆ. ಒಮ್ಮೆ ಹಸಿರು ಕಾಗದದ ಸೀಲನ್ನು ಮತದಾನ ಪೆಟ್ಟಿಗೆಯಲ್ಲಿ ಅಳವಡಿಸಿ ಅದರ ಮುಚ್ಚಳವನ್ನು ಮುಚ್ಚಿದ ಮೇಲೆ ಪೆಟ್ಟಿಗೆಯನ್ನು ತೆಗೆಯಲಿಕ್ಕೆ ಬರುವುದಿಲ್ಲ. ಹಸಿರು ಕಾಗದದ ಸೀಲನ್ನು ಹರಿಯದ ಹೊರತು ಅದರಲ್ಲಿರುವ ಮತಪತ್ರಗಳನ್ನು ಅಕ್ರಮವಾಗಿ ತಿದ್ದಲು ಬರುವುದಿಲ್ಲ ಅಥವಾ ಎಣಿಕೆ ಮಾಡಲು ಹೊರಗೆ ತೆಗೆಯುವುದಕ್ಕೆ ಬರುವುದಿಲ್ಲ. ಇದೇ ರೀತಿಯ ರಕ್ಷಣೆಯನ್ನು ಇವಿಎಂಗೂ ಒದಗಿಸಲಾಗಿದೆ ಒಮ್ಮೆ ಮತದಾನ ಪ್ರಾರಂಭವಾಯಿತೆಂದರೆ ಯಾರೇ ವ್ಯಕ್ತಿಗೂ ಇವಿಎಂ ಅನ್ನು ವಿರೂಪಗೊಳಿಸಲು ಸಾಧ್ಯವಿಲ್ಲ. ಹೀಗೆ ಮಾಡುವುದಕ್ಕಾಗಿ ಮತ್ತು ಅದನ್ನು ಮಾಡುವಂತೆ ನೋಡಿಕೊಳ್ಳುವುದಕ್ಕಾಗಿ ಮತಪೆಟ್ಟಿಗೆಯನ್ನು ಭದ್ರಪಡಿಸಲು ಉಪಯೋಗಿಸುವ ಹಸಿರು ಕಾಗದದ ಸೀಲನ್ನು ಇವಿಎಂನ ಕಂಟ್ರೋಲ್ ಯೂನಿಟ್ಟಿನಲ್ಲಿ ಅಳವಡಿಸುವುದಕ್ಕೆ ಅವಕಾಶ ಕಲ್ಪಿಸಲಾಗಿದೆ.

21.2 ಕಂಟ್ರೋಲ್ ಯೂನಿಟ್ಟಿನ ಫಲಿತಾಂಶ ವಿಭಾಗದ ಒಳ ಕಂಪಾರ್ಟ್‌ಮೆಂಟಿನ ಒಳಗಡೆ ಕಾಗದದ ಮೊಹರನ್ನು ಅಳವಡಿಸಲು ಒಂದು ಚೌಕಟ್ಟನ್ನು ಒದಗಿಸಲಾಗಿದೆ. ಈ ಸೀಲನ್ನು ಹೇಗೆ ಅಳವಡಿಸಬೇಕು ಎಂದರೆ ಅದರ ಹಸಿರು ಮೇಲ್ಮೈಯು ಹೊರಗಿನಿಂದ ಕಿಂಡಿಯ ಮೂಲಕ ಕಾಣುವಂತಿರಬೇಕು. ಯಾವುದೇ ಸಂದರ್ಭದಲ್ಲೂ ಹಾನಿಗೊಳಗಾದ ಯಾವುದೇ ಪೇಪರ್ ಸೀಲನ್ನು ಬಳಸದ ಹಾಗೆ ನೋಡಿಕೊಳ್ಳಬೇಕು ಮತ್ತು ಪೇಪರ್ ಸೀಲನ್ನು ಹಾಕುವ ಪ್ರಕ್ರಿಯೆಯಲ್ಲಿ ಯಾವುದೇ ಪೇಪರ್ ಸೀಲ್ ಹಾನಿಗೊಳಗಾದರೆ, ಒಳ ಕಂಪಾರ್ಟ್‌ಮೆಂಟಿನ ಬಾಗಿಲನ್ನು ಮುಚ್ಚುವುದಕ್ಕೂ ಮುಂಚೆ ಆ ಕೂಡಲೇ ಆಗಲೇ ಅದನ್ನು ಬದಲಾಯಿಸಬೇಕು.

21.3 ಪೇಪರ್ ಸೀಲನ್ನು ಹಾಕಿ ಭದ್ರಪಡಿಸಿದ ತರುವಾಯ, ಒಳ ಕಂಪಾರ್ಟ್‌ಮೆಂಟಿನ ಬಾಗಿಲನ್ನು ಬಿಗಿಯಾಗಿ ಅದುಮುವುದರ ಮೂಲಕ ಬಾಗಿಲನ್ನು ಗಟ್ಟಿಯಾಗಿ ಮುಚ್ಚಲಾಗುವುದು. ಪೇಪರ್ ಸೀಲಿನ ಎರಡೂ ತೆರೆದುಕೊಂಡಿರುವ ತುದಿಗಳು ಒಳ ಕಂಪಾರ್ಟ್‌ಮೆಂಟಿನ ಪಾರ್ಶ್ವದಿಂದ ಹೊರಮುಖವಾಗಿ ಚಾಚಿಕೊಂಡಿರುವಂತೆ ಇದನ್ನು ಮುಚ್ಚಲಾಗುವುದು. ಗ್ರೀನ್ ಪೇಪರ್ ಸೀಲನ್ನು ಆ ಉದ್ದೇಶಕ್ಕಾಗಿ ಒದಗಿಸಲಾದ ಚೌಕಟ್ಟಿನಲ್ಲಿ ಜೋಡಿಸುವುದಕ್ಕೂ ಮೊದಲು, ಪ್ರಿಸೈಡಿಂಗ್ ಅಧಿಕಾರಿಯು, ಪೇಪರ್ ಸೀಲಿನ ಬಿಳಿ ಮೇಲ್ಮೈ ಮೇಲೆ ಪೇಪರ್ ಸೀಲಿನ ಕ್ರಮ ಸಂಖ್ಯೆಯ ನಿಕಟ ಕೆಳಗೆ ತಮ್ಮ ಪೂರ್ಣ ಸಹಿಯನ್ನು ಮಾಡಬೇಕು. ಅಲ್ಲಿ ಹಾಜರಿರುವ ತಮ್ಮ ಸಹಿಯನ್ನು

ಮಾಡಲಿಚ್ಛಿಸುವಂತಹ ಅಭ್ಯರ್ಥಿಯ ಅಥವಾ ಅವರ ಪೋಲಿಂಗ್ ಏಜೆಂಟರ ಸಹಿಯನ್ನು ಸಹ ಪಡೆಯಬೇಕು.

**22. ಕಂಟ್ರೋಲ್ ಯೂನಿಟ್ಟಿನ ರಿಸಲ್ಟ್ ಸೆಕ್ಷನ್ನನ್ನು ಮುಚ್ಚುವುದು ಮತ್ತು ಮೊಹರು ಮಾಡುವುದು**

**22.1 ವಿಶೇಷ ಟ್ಯಾಗ್**

ಗ್ರೀನ್ ಪೇಪರ್ ಸೀಲನ್ನು ಅಳವಡಿಸಿ ಭದ್ರಪಡಿಳಿಸಿದ ಹಾಗೂ ಪ್ರಿಸೈಡಿಂಗ್ ಅಧಿಕಾರಿ ಮತ್ತು ಪೋಲಿಂಗ್ ಏಜೆಂಟರುಗಳು ಅದರ ಮೇಲೆ ಸಹಿ ಮಾಡಿದ ನಂತರ, "ಕ್ಲಿಯರ್" ಬಟನ್ ಮತ್ತು "ರಿಸಲ್ಟ್" ಬಟನ್‌ಗಳ ಮೇಲಿನ ಒಳ ಕಂಪಾರ್ಟ್‌ಮೆಂಟಿನ ಬಾಗಿಲನ್ನು ಪೇಪರ್ ಸೀಲಿನ ಎರಡೂ ತುದಿಗಳು ಒಳ ಬಾಗಿಲಿನ ಪಾರ್ಶ್ವಗಳಿಂದ ಹೊರಮುಖವಾಗಿ ಚಾಚಿಕೊಂಡಿರುವಂಥ ರೀತಿಯಲ್ಲಿ ಪ್ರಿಸೈಡಿಂಗ್ ಆಫೀಸರ್ ಜೋರಾಗಿ ಅದುಮಿ ಮುಚ್ಚಬೇಕು. ನಂತರ ಈ ಒಳ ಬಾಗಿಲನ್ನು 'ವಿಶೇಷ ಟ್ಯಾಗ್'ನಿಂದ ಮೊಹರು ಮಾಡಬೇಕು. ಇದಕ್ಕಾಗಿ, ರಿಟರ್ನಿಂಗ್ ಅಧಿಕಾರಿಯವರು ವಿಶೇಷವಾಗಿ ಈ ಉದ್ದೇಶಕ್ಕಾಗಿಯೇ ಪೂರೈಸಲಾದ ಅಧಿಕ ಗುಣಮಟ್ಟದ ಟ್ವೈನ್‌ದಾರವನ್ನು ಪ್ರಿಸೈಡಿಂಗ್ ಅಧಿಕಾರಿಯು, ಒಳ ಬಾಗಿಲಿನಲ್ಲಿ ಒದಗಿಸಲಾದ ಎರಡು ರಂಧ್ರಗಳ ಮೂಲಕ ಮತ್ತು ವಿಶೇಷ ಟ್ಯಾಗ್‌ನಲ್ಲಿ ಒದಗಿಸಲಾದ ರಂಧ್ರದ ಮೂಲಕ ಹಾದುಬರುವಂತೆ ತೂರಿಸಿ ದಾರವನ್ನು ಗಂಟುಹಾಕಿ ಕಟ್ಟಿ ಮೊಹರು ಮಾಡುವ ವ್ಯಾಕ್ಸ್‌ನಿಂದ ವಿಶೇಷ ಟ್ಯಾಗ್‌ನ ಮೇಲೆ ದಾರವನ್ನಿಟ್ಟು ಮೊಹರು ಮಾಡಬೇಕು. ತದನಂತರ ಮೊಹರನ್ನು ಹಾನಿಗೊಳಿಸದಂತೆ, ಅವರು ವಿಶೇಷ ಟ್ಯಾಗಿನ ಮಧ್ಯಭಾಗದಲ್ಲಿರುವ ಕತ್ತರಿಸಿದ ರಂಧ್ರದ ಮೂಲಕ "ಕ್ಲೋಸ್" ಬಟನ್ ಮೇಲಕ್ಕೆ ಹೊರಬರುವ ಹಾಗೆ ನೋಡಿಕೊಂಡು "ಕ್ಲೋಸ್" ಬಟನ್‌ನ ಕಂಪಾರ್ಟ್‌ಮೆಂಟಿ**ನಲ್ಲಿ** ವಿಶೇಷ ಟ್ಯಾಗನ್ನು ಹೊಂದಿಸಬೇಕು.

22.2 ವಿಶೇಷ ಟ್ಯಾಗನ್ನು ಬಳಸುವುದಕ್ಕೂ ಮೊದಲು, ಪ್ರಿಸೈಡಿಂಗ್ ಅಧಿಕಾರಿಯು ವಿಶೇಷ ಟ್ಯಾಗಿನ ಮೇಲೆ ಕಂಟ್ರೋಲ್ ಯೂನಿಟ್ಟಿನ ಕ್ರಮಸಂಖ್ಯೆಯನ್ನು ಬರೆಯಬೇಕು.

22.3 ವಿಶೇಷ ಟ್ಯಾಗಿನ ಮೇಲೆ ಕಂಟ್ರೋಲ್ ಯೂನಿಟ್‌ನ ಕ್ರಮಸಂಖ್ಯೆಯನ್ನು ಬರೆದಾದ ಮೇಲೆ, ಪ್ರಿಸೈಡಿಂಗ್ ಅಧಿಕಾರಿಯು ವಿಶೇಷ ಟ್ಯಾಗಿನ ಹಿಂಬದಿಯಲ್ಲಿ ತಮ್ಮ ಸಹಿಯನ್ನು ಹಾಕಬೇಕು. ಮತದಾನ ಆರಂಭಗೊಳ್ಳುವುದಕ್ಕೆ ಮುಂಚೆ ಮತಗಟ್ಟೆಯಲ್ಲಿ ಹಾಜರಿದ್ದ ಅಭ್ಯರ್ಥಿಗಳು/ ಪೋಲಿಂಗ್ ಏಜೆಂಟರುಗಳು ಸಹಿ ಮಾಡಲು ಇಚ್ಛೆಪಟ್ಟರೆ ಅವರುಗಳು ಸಹ ಹಿಂಬದಿಯಲ್ಲಿ ಸಹಿ ಮಾಡುವಂತೆ ಅವರು ತಿಳಿಸಬೇಕು. ವಿಶೇಷ ಟ್ಯಾಗಿನ ಮೇಲೆ ಮೊದಲೇ ಮುದ್ರಿಸಿದ

ಕ್ರಮಸಂಖ್ಯೆಯನ್ನು ಅವರು ಓದಬೇಕು ಮತ್ತು ಕ್ರಮಸಂಖ್ಯೆಯನ್ನು ಬರೆದುಕೊಳ್ಳುವಂತೆ ಹಾಜರಿದ್ದ ಅಭ್ಯರ್ಥಿಗಳು/ ಪೋಲಿಂಗ್ ಏಜೆಂಟರುಗಳಿಗೆ ತಿಳಿಸಬೇಕು. ಅಕಸ್ಮಾತ್ತಾಗಿ, ವಿಶೇಷ ಟ್ಯಾಗ್ ಹಾಳಾದರೆ ಅಥವಾ ಹರಿದುಹೋದರೆ, ಇನ್ನೊಂದು ಟ್ಯಾಗನ್ನು ಬಳಸಲಾಗುವುದು. ಈ ಉದ್ದೇಶಕ್ಕಾಗಿ, ರಿಟರ್ನಿಂಗ್ ಅಧಿಕಾರಿಯು ಗ್ರೀನ್ ಪೇಪರ್ ಸೀಲುಗಳ ತರಹ, 3 ಮತ್ತು 4 "ವಿಶೇಷ ಟ್ಯಾಗು"ಗಳನ್ನು ಪೂರೈಸಿರುತ್ತಾರೆ.

**ರಿಸಲ್ಟ್ ಸೆಕ್ಷನ್ನಿನ ಹೊರ ಹೊದಿಕೆಯನ್ನು ಮುಚ್ಚಿ ಮೊಹರು ಮಾಡುವುದು**

22.4 ಕಂಟ್ರೋಲ್ ಯೂನಿಟ್ಟಿನ ರಿಸಲ್ಟ್ ಸೆಕ್ಷನ್‌ನ ಒಳ ಕಂಪಾರ್ಟ್‌ಮೆಂಟನ್ನು ಮುಚ್ಚಿ ಮೊಹರು ಮಾಡಿದ ನಂತರ, ರಿಸಲ್ಟ್ ಸೆಕ್ಷನ್ನಿನ ಹೊರ ಹೊದಿಕೆಯನ್ನು ಜೋರಾಗಿ ಅದುಮಿ, ಆ ಸೆಕ್ಷನ್ನನ್ನು ಮುಚ್ಚಬೇಕು. ಆ ಹೊರ ಹೊದಿಕೆಯನ್ನು ಅದುಮುವುದಕ್ಕೂ ಮುನ್ನ, ಪೇಪರ್ ಸೀಲಿನ ಎರಡೂ ತೆರೆದ ತುದಿಗಳು ಹೊರ ಹೊದಿಕೆಯ ಎರಡೂ ಪಾರ್ಶ್ವಗಳಿಂದ ಹೊರಮುಖವಾಗಿ ಚಾಚಿಕೊಂಡಿವೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.

22.5 ರಿಸಲ್ಟ್ ಸೆಕ್ಷನ್‌ನ ಹೊರ ಹೊದಿಕೆಯನ್ನು ಮುಚ್ಚಿದ ತರುವಾಯ, ಆ ಹೊದಿಕೆಯನ್ನು (i) ಹೊರ ಹೊದಿಕೆಯ ಎಡ ಪಾರ್ಶ್ವದಲ್ಲಿ ಈ ಉದ್ದೇಶಕ್ಕಾಗಿ ಒದಗಿಸಲಾದ ಎರಡು ರಂಧ್ರಗಳ ಮೂಲಕ ದಾರವನ್ನು ಹಾದುಬರುವಂತೆ ತೂರಿಸಿ; (ii) ದಾರವನ್ನು ಗಂಟುಹಾಕಿ ಕಟ್ಟಿ; (iii) ರಿಟರ್ನಿಂಗ್ ಆಫೀಸರ್‌ರವರ ಮಟ್ಟದಲ್ಲಿ 'ಕ್ಯಾಂಡ್ ಸೆಟ್ ಸೆಕ್ಷನ್'ಗೆ ಲಗತ್ತಿಸಲಾಗಿರುವ ಲೇಬಲ್‌ನ ತರಹದ ಲೇಬಲ್ಲನ್ನೇ (ಅಡ್ರಸ್ ಟ್ಯಾಗ್) ಲಗತ್ತಿಸಿ, ಅಡ್ರಸ್ ಟ್ಯಾಗ್ ಮೇಲೆ ದಾರವನ್ನಿಟ್ಟು ವ್ಯಾಕ್ಸ್‌ನಿಂದ ಮೊಹರು ಮಾಡಿ, ಅದರ ಮೇಲೆ ಪ್ರಿಸೈಡಿಂಗ್ ಅಧಿಕಾರಿಯವರ ಸೀಲು ಹಾಕಿ ಮೊಹರು ಮಾಡತಕ್ಕದ್ದು. ಅಭ್ಯರ್ಥಿಗಳು ಅಥವಾ ಅವರ ಪೋಲಿಂಗ್ ಏಜೆಂಟರು ಹೊರ ಹೊದಿಕೆಯ ಮೇಲೆ ತಮ್ಮ ಸೀಲುಗಳನ್ನು ಹಾಕಲು ಇಚ್ಛಿಸಿದರೆ ಅವರಿಗೂ ಸಹ ಸೀಲುಗಳನ್ನು ಹಾಕಲು ಅವಕಾಶ ಮಾಡಿಕೊಡತಕ್ಕದ್ದು.

**22.6 'ಅಡ್ರಸ್ ಟ್ಯಾಗ್' ಈ ಮುಂದಿನ ವಿವರಗಳನ್ನು ಒಳಗೊಂಡಿರುತ್ತದೆ:**

| |
|---|
| **ಕ್ರಮ ಸಂಖ್ಯೆ: 00000000** |
| ಲೋಕಸಭೆ/ ವಿಧಾನಸಭೆಗೆ ಚುನಾವಣೆ |
| **ಲೋಕಸಭೆ/ ವಿಧಾನಸಭೆಯ ----------- ಚುನಾವಣಾ ಕ್ಷೇತ್ರದಿಂದ ---- ಗೆ ಚುನಾವಣೆ** |
| **ಬ್ಯಾಲೆಟ್ ಯೂನಿಟ್/ ಕಂಟ್ರೋಲ್ ಯುನಿಟ್/ ವಿವಿಪ್ಯಾಟ್ ಸಂ. -----------** |
| **ಎಲ್ಲಿ ಬಳಸಲಾಗಿದೆಯೋ ಆ ಮತಗಟ್ಟೆಯ ಕ್ರ.ಸಂ. ಮತ್ತು ಹೆಸರು ---------** |
| **ಮತದಾನದ ದಿನಾಂಕ ----------** |

22.7 ರಿಟರ್ನಿಂಗ್ ಅಧಿಕಾರಿಯವರು ಮತದಾನ ಸಾಮಗ್ರಿಗಳ ಭಾಗವಾಗಿ ಸಾಕಷ್ಟು ಸಂಖ್ಯೆಯ ಖಾಲಿ ಬಿಟ್ಟಿರುವ ಸಾಮಾನ್ಯ ಅಡ್ರಸ್ ಟ್ಯಾಗ್‌ಗಳನ್ನು ಒದಗಿಸಿರುತ್ತಾರೆ. ಅಡ್ರಸ್ ಟ್ಯಾಗ್‌ನಲ್ಲಿ ನಮೂದಿಸಬೇಕಾದ ವಿವರಗಳನ್ನು ಪ್ರಿಸೈಡಿಂಗ್ ಅಧಿಕಾರಿಯು ಎಚ್ಚರಿಕೆಯಿಂದ ಭರ್ತಿ ಮಾಡಬೇಕು. ಪ್ರತಿ ಕಂಟ್ರೋಲ್ ಯೂನಿಟ್ಟಿನ ಕ್ರಮಸಂಖ್ಯೆಯು ಕಂಟ್ರೋಲ್ ಯೂನಿಟ್‌ನ ಕೆಳಭಾಗದಲ್ಲಿ ನಮೂದಿಸಿರುತ್ತದೆ.

22.8 ಅಭ್ಯರ್ಥಿಗಳು ಅಥವಾ ಅವರ ಚುನಾವಣಾ ಏಜೆಂಟರುಗಳು ಹೊರ ಹೊದಿಕೆಯ ಅಡ್ರಸ್ ಟ್ಯಾಗ್‌ನ ಮೇಲೆ ಪ್ರಿಸೈಡಿಂಗ್ ಅಧಿಕಾರಿಯ ಸೀಲಿನ ಜೊತೆಗೆ ಅವರ ಸೀಲುಗಳನ್ನು ಹಾಕಲು ಇಚ್ಛಿಸಿದರೆ ಅವರಿಗೂ ಕೂಡ ಅವರ ಸೀಲುಗಳನ್ನು ಹಾಕಲು ಅವಕಾಶ ಮಾಡಿಕೊಡತಕ್ಕದ್ದು.

22.9 ಒಳ ಕಂಪಾರ್ಟ್‌ಮೆಂಟ್ ಮತ್ತು ಹೊರ ಹೊದಿಕೆಯನ್ನು ಹಾಗೆ ಮುಚ್ಚಿ ಮೊಹರು ಮಾಡುವುದರಿಂದ, ಇಡೀ ರಿಸಲ್ಟ್ ಸೆಕ್ಷನ್‌ನನ್ನೇ ಮೊಹರು ಮಾಡಿ ಭದ್ರಪಡಿಸಿದಂತಾಗುತ್ತದೆ ಮತ್ತು ಇದರಿಂದ ಕಂಟ್ರೋಲ್ ಯೂನಿಟ್‌ನಲ್ಲಿ ದಾಖಲಾದ ಮತಗಳನ್ನು ಅಳಿಸಿಹಾಕಲು ಅಥವಾ ಫಲಿತಾಂಶವನ್ನು ವೀಕ್ಷಿಸಲು ಸಾಧ್ಯವಾಗುವುದಿಲ್ಲ.

**23. ಸ್ಟ್ರಿಪ್ ಸೀಲ್:**

23.1 ವಿದ್ಯುನ್ಮಾನ ಮತಯಂತ್ರಗಳಿಗೆ ಮೊಹರು ಮಾಡುವ ವ್ಯವಸ್ಥೆಗಳನ್ನು ಮತ್ತಷ್ಟು ಸುಧಾರಣೆ ಮಾಡುವ ದೃಷ್ಟಿಯಿಂದ, ಭಾರತ ಚುನಾವಣಾ ಆಯೋಗವು, ಹೊರ ಪೇಪರ್ ಸ್ಟ್ರಿಪ್ ಸೀಲಿನೊಂದಿಗೆ (ಇದರಲ್ಲಿ ಇನ್ನು ಮುಂದೆ "ಸ್ಟ್ರಿಪ್ ಸೀಲ್" ಎಂಬುದಾಗಿ ಕರೆಯಲಾಗಿದೆ) ಸಂಪೂರ್ಣವಾಗಿ ಕಂಟ್ರೋಲ್ ಯೂನಿಟ್ಟಿನ "ರಿಸಲ್ಟ್ ಸೆಕ್ಷನ"ನ್ನು ಮೊಹರು ಮಾಡುವುದಕ್ಕಾಗಿ ಹೆಚ್ಚುವರಿ ಬಾಹ್ಯ ಮೊಹರು ವ್ಯವಸ್ಥೆಗೆ ಅನುಮೋದನೆ ನೀಡಿದೆ. ಇದರಿಂದಾಗಿ, ಒಮ್ಮೆ ಮತದಾನ ಪ್ರಾರಂಭವಾದಾಗಿನಿಂದ ಮತ್ತು ಮತಗಳ ಎಣಿಕೆ ಕಾರ್ಯವನ್ನು ಕೈಗೊಳ್ಳುವವರೆಗೆ ಕಂಟ್ರೋಲ್ ಯೂನಿಟ್ಟಿನ ಈ ಭಾಗವನ್ನು ತೆರೆಯಲು ಸಾಧ್ಯವಾಗುವುದಿಲ್ಲ. ಮತಗಟ್ಟೆಯಲ್ಲಿ ಮೊದಲನೆಯ ಮತದಾರರು ಮತಯಂತ್ರದಲ್ಲಿ ಮತ ಚಲಾಯಿಸಿದ ಸಮಯದಿಂದ ಹಿಡಿದು, ಮತಯಂತ್ರವನ್ನು ಮತ ಎಣಿಕೆ ಮೇಜಿಗೆ ಕೊಂಡೊಯ್ಯುವವರೆಗೆ, ಯಾರೇ ವ್ಯಕ್ತಿ ಸ್ಟ್ರಿಪ್ ಸೀಲನ್ನು ಹಾನಿಗೊಳಿಸದೆ ರಿಸಲ್ಟ್ ಸೆಕ್ಷನ್ನನ್ನು ತೆರೆಯಲಿಕ್ಕಾಗುವುದಿಲ್ಲವೆಂಬುದನ್ನು ಇದು ಖಾತ್ರಿಪಡಿಸುತ್ತದೆ.

23.2 ಹಾಗಾಗಿ, ಇವಿಎಂ ಅನ್ನು ಬಳಸಿ ಚುನಾವಣೆಯನ್ನು ನಡೆಸುವಂತಹ ಪ್ರತಿಯೊಂದು ಮತಗಟ್ಟೆಯಲ್ಲಿ, ಕಂಟ್ರೋಲ್ ಯೂನಿಟ್ಟನ್ನು, ಸ್ಟ್ರಿಪ್ ಸೀಲನ್ನು ಹಾನಿಗೊಳಿಸದೆ ತೆರೆಯಲಿಕ್ಕಾಗದಿರುವ ಹಾಗೆ ಈ ಕೆಳಗೆ ವಿವರಿಸಲಾದಂತೆ ಸಂಪೂರ್ಣವಾಗಿ ಹೊರಗಡೆಯಿಂದ ಸ್ಟ್ರಿಪ್ ಸೀಲನ್ನು ಹಾಕಿ ಭದ್ರಪಡಿಸಿ ಮೊಹರು ಮಾಡಬೇಕು. "ಕ್ಲೋಸ್" ಬಟನ್‌ಗೆ ರಕ್ಷಾ ಕವಚವಾಗಿರುವ ರಬ್ಬರ್ ಕ್ಯಾಪನ್ನು ಸ್ಟ್ರಿಪ್ ಸೀಲು ಮುಚ್ಚದ ಹಾಗೆ **"ಕ್ಲೋಸ್"** ಬಟನ್‌ನ ರಬ್ಬರ್ ಕ್ಯಾಪ್‌ನ ಸ್ವಲ್ಪ ಕೆಳಗಡೆ "ರಿಸಲ್ಟ್ ಸೆಕ್ಷನ್ನಿ"ನ ಹೊರ ಬಾಗಿಲಿನ ಮೇಲೆ ಸ್ಟ್ರಿಪ್ ಸೀಲನ್ನು ಹಾಕಬೇಕು.

23.3 ಸ್ಟ್ರಿಪ್ ಸೀಲ್–ಭೌತಿಕ ಲಕ್ಷಣಗಳು:

ಈ ಮುಂದಿನವುಗಳು ಸ್ಟ್ರಿಪ್ ಸೀಲಿನ ಪ್ರಮುಖ ಭೌತಿಕ ಲಕ್ಷಣಗಳಾಗಿವೆ:

(i) ಸ್ಟ್ರಿಪ್ ಸೀಲು, 23.5" (ಇಪ್ಪತ್ಮೂರು ಪಾಯಿಂಟ್ ಐದು ಇಂಚುಗಳು) ಉದ್ದ ಮತ್ತು 1" (ಒಂದು ಇಂಚು) ಅಗಲ ಅಳತೆಯನ್ನು ಹೊಂದಿರುವ ಒಂದು ಕಾಗದದ ಮೊಹರು. ಮತದಾನದ ಆರಂಭಕ್ಕೆ ಮೊದಲು ಮತ್ತು ಯೂನಿಟ್ಟಿನಲ್ಲಿ ಇತರ ಪ್ರಮಾಣಬದ್ಧ ಸೀಲುಗಳನ್ನು ಕಂಟ್ರೋಲ್ ಅಳವಡಿಸಿದ ನಂತರ ಕಂಟ್ರೋಲ್ ಯೂನಿಟ್ಟಿಗೆ ಒಂದು ಹೆಚ್ಚುವರಿ ಬಾಹ್ಯ ಮೊಹರನ್ನು

ಮಾಡಲು ಕಂಟ್ರೋಲ್ ಯೂನಿಟ್ಟಿನ ಸುತ್ತಲೂ ಸುಲಭವಾಗಿ ಸುತ್ತುವಷ್ಟು ಉದ್ದಳತೆಯನ್ನು ಸ್ಟ್ರಿಪ್ ಸೀಲ್ ಹೊಂದಿರುತ್ತದೆ.

(ii) ಪ್ರತಿಯೊಂದು ಸ್ಟ್ರಿಪ್ ಸೀಲು 'ವಿಶಿಷ್ಟ ಗುರುತಿನ ಸಂಖ್ಯೆ'ಯನ್ನು ಹೊಂದಿರುತ್ತದೆ.

(iii) ಆಯೋಗದಿಂದ ಯುಕ್ತವಾಗಿ ಅನುಮೋದಿಸಲ್ಪಟ್ಟ ಇಂಡಿಯಾ ಸೆಕ್ಯೂರಿಟಿ ಪ್ರೆಸ್, ನಾಸಿಕ್– ಸಂಸ್ಥೆಯು ಈ ಸ್ಟ್ರಿಪ್ ಸೀಲುಗಳನ್ನು ಪೂರೈಸುತ್ತಿದ್ದು, ಅವುಗಳನ್ನು ಮುಖ್ಯ ಚುನಾವಣಾಧಿಕಾರಿಗಳು, ಪ್ರತಿ ರಾಜ್ಯಕ್ಕಾಗಿ ಕೇಂದ್ರೀಯವಾಗಿ ಖರೀದಿಸುತ್ತಾರೆ.

(iv) ಸ್ಟ್ರಿಪ್ ಸೀಲಿನ ಎರಡೂ ತುದಿಗಳಲ್ಲಿ, ನಾಲ್ಕು (4) ಮೊದಲೇ ಗೋಂದು ಹಾಕಿ ಸಿದ್ಧಪಡಿಸಿದ ಭಾಗಗಳಿರುತ್ತವೆ. ಇವುಗಳ ಪೈಕಿ, ಮೂರು ('ಎ' 'ಬಿ' ಮತ್ತು 'ಸಿ' ಅಕ್ಷರಗಳಿಂದ ಗುರುತಿಸಲಾದ) ಸುಮಾರು ಒಂದು ಚದರ ಇಂಚು ವಿಸ್ತೀರ್ಣದ ಭಾಗವನ್ನು ಹೊಂದಿರುತ್ತವೆ ಮತ್ತು ಒಂದು ('ಡಿ' ಅಕ್ಷರಗಳಿಂದ ಗುರುತಿಸಲಾದ) ಭಾಗವು ಸುಮಾರು ಎರಡು ಚದರ ಇಂಚು ವಿಸ್ತೀರ್ಣದ ಭಾಗವನ್ನು ಹೊಂದಿರುತ್ತದೆ. ಪ್ರತಿಯೊಂದು ಗೋಂದು ಹಾಕಿದ ಭಾಗವು ವ್ಯಾಕ್ಸ್ ಕಾಗದದ ಒಂದು ಸ್ಟ್ರಿಪ್‌ನಿಂದ ಮುಚ್ಚಲ್ಪಟ್ಟಿರುತ್ತದೆ.

(v) ಸ್ಟ್ರಿಪ್ ಸೀಲು ಒಳ ಮಗ್ಗಲು ಮತ್ತು ಹೊರ ಮಗ್ಗಲುಗಳನ್ನು ಹೊಂದಿದೆ. ಸ್ಟ್ರಿಪ್ ಸೀಲಿನ ಒಳ ಮಗ್ಗಲಿನ ಮೇಲೆ, ಒಂದು ತುದಿಯಲ್ಲಿ 'ಎ' ಮತ್ತು 'ಬಿ' ಅಕ್ಷರಗಳಿಂದ ಗುರುತು ಮಾಡಿರುವ ಎರಡು ಅಕ್ಕಪಕ್ಕದ ಮೊದಲೇ ಗೋಂದು ಹಾಕಿದ ಭಾಗಗಳಿವೆ. ಸ್ಟ್ರಿಪ್ ಸೀಲಿನ ಒಳ ಮಗ್ಗಲಿನ ಇನ್ನೊಂದು ತುದಿಯಲ್ಲಿ, 'ಡಿ' ಅಕ್ಷರದಿಂದ ಗುರುತು ಮಾಡಿದ ಸುಮಾರು 2" (ಎರಡು ಇಂಚು) ಇಂಚುಗಳಷ್ಟು ಮೊದಲೇ ಗೋಂದು ಹಾಕಿದ ಭಾಗವಿದೆ. ಸ್ಟ್ರಿಪ್‌ನ ಹೊರ ಮಗ್ಗಲಿನ ಮೇಲೆ 'ಸಿ' ಅಕ್ಷರದಿಂದ ಗುರುತು ಮಾಡಿದ ಕೇವಲ ಒಂದೇ ಒಂದು ಮೊದಲೇ ಗೋಂದು ಹಾಕಿದ ಭಾಗವಿದೆ. ಹೊರ ಮಗ್ಗಲು ಮತ್ತು ಒಳ ಮಗ್ಗಲನ್ನು ತೋರಿಸುವ ಸ್ಟ್ರಿಪ್ ಸೀಲಿನ ಒಂದು ಚಿತ್ರವನ್ನು ಕೆಳಗೆ ನೀಡಿದೆ. ಸ್ಟ್ರಿಪ್ ಸೀಲಿನ ಒಳ ಮಗ್ಗಲು ಮತ್ತು ಹೊರ ಮಗ್ಗಲಿನ ಮೇಲಿರುವ ಕಪ್ಪು ಭಾಗಗಳು ಗೋಂದು ಹಾಕಿದ ಭಾಗಗಳಾಗಿವೆ.

| ಎ | ಬಿ | ಒಳಭಾಗ | ಡಿ |
|---|---|---|---|
| | | | |

| | ಸಿ | ಹೊರ ಭಾಗ |
|---|---|---|
| | | |

ಸೀಲಿನ ಎ, ಬಿ, ಸಿ ಮತ್ತು ಡಿ ಭಾಗಗಳು ಒಳ ಮಗ್ಗಲು ಮತ್ತು ಹೊರ ಮಗ್ಗಲಿನ ಮೇಲೆ ಗೋಂದು ಹಾಕಿದ ಭಾಗಗಳಾಗಿವೆ.

23.4 ಪ್ರಕ್ರಿಯೆಯನ್ನು ಸುಲಭವಾಗಿ ಅರ್ಥ ಮಾಡಿಕೊಳ್ಳುವ ಸಲುವಾಗಿ, ಸ್ಟ್ರಿಪ್ ಸೀಲನ್ನು ಅಳವಡಿಸುವುದೂ ಸೇರಿದಂತೆ ಮತ್ತು ಅದನ್ನು ಅಳವಡಿಸುವವರೆಗೆ ಮತಗಟ್ಟೆಯಲ್ಲಿ ಪ್ರಿಸೈಡಿಂಗ್ ಅಧಿಕಾರಿಯು ಕೈಗೊಳ್ಳಬೇಕಾದ ಕ್ರಮಗಳ ಸಂಪೂರ್ಣ ಕ್ರಮಾನು ಕ್ರಮ ಏಣಿಕೆಯನ್ನು ಈ ಕೆಳಗೆ ನೀಡಲಾಗಿದೆ:

(i) ವಾಸ್ತವಿಕ ಮತದಾನವನ್ನು ಪ್ರಾರಂಭಿಸುವುದಕ್ಕೂ ಮುಂಚೆ, ಪ್ರಿಸೈಡಿಂಗ್ ಅಧಿಕಾರಿ ಅಣಕು ಮತದಾನವನ್ನು ನಡೆಸಬೇಕು.

(ii) ಅಣಕು ಮತದಾನವನ್ನು ನಡೆಸಿ, ಫಲಿತಾಂಶವನ್ನು ತೋರಿಸಿದ ನಂತರ, ಪ್ರಿಸೈಡಿಂಗ್ ಅಧಿಕಾರಿ, "ಕ್ಲಿಯರ್" ಬಟನ್ನನ್ನು ಒತ್ತುವ ಮೂಲಕ ಅಣಕು ಮತದಾನದ ಸಂದರ್ಭದಲ್ಲಿ ಕಂಟ್ರೋಲ್ ಯೂನಿಟ್‌ನಲ್ಲಿ ದಾಖಲಾಗಿರುವ ಅಂಕಿ ಅಂಶಗಳನ್ನು ಅಳಿಸಿ ಹಾಕತಕ್ಕದ್ದು.

(iii) ಹಾಗೆ ಅಳಿಸಿ ಹಾಕಿದ ನಂತರ, ಪ್ರಿಸೈಡಿಂಗ್ ಅಧಿಕಾರಿ, ರಿಸಲ್ಟ್ ಸೆಕ್ಷನ್‌ನ ಒಳ ಬಾಗಿಲಿನ ಕಿಂಡಿಗಳು ಮುಚ್ಚಿಕೊಳ್ಳುವಂತೆ ಗ್ರೀನ್ ಪೇಪರ್ ಸೀಲನ್ನು (ಬಿಇಎಲ್ ಯಂತ್ರಗಳ ಸಂದರ್ಭದಲ್ಲಿ ಎರಡು ಸೀಲುಗಳನ್ನು ಮತ್ತು ಇಸಿಐಎಲ್ ಯಂತ್ರದ ಸಂದರ್ಭದಲ್ಲಿ ಒಂದೇ ಸೀಲನ್ನು) ಅಳವಡಿಸತಕ್ಕದ್ದು. ಗ್ರೀನ್ ಪೇಪರ್ ಸೀಲುಗಳನ್ನು ಒಳಗೆ ಸೇರಿಸುವಾಗ, ಒಳಬಾಗಿಲನ್ನು ಮುಚ್ಚಿದ ನಂತರ ಒಳಬಾಗಿಲಿನ ಕಿಂಡಿಯ ಮೂಲಕ ಸೀಲ್‌ನ ಹಸಿರು ಭಾಗವು ಕಣ್ಣಿಗೆ ಗೋಚರಿಸುವ ಹಾಗೆ ನೋಡಿಕೊಳ್ಳುವಂತೆ ಎಚ್ಚರಿಕೆ ವಹಿಸತಕ್ಕದ್ದು.

(iv) ಗ್ರೀನ್ ಪೇಪರ್ ಸೀಲುಗಳನ್ನು ಸೇರಿಸಿದ ನಂತರ, ರಿಸಲ್ಟ್ ಬಟನ್‌ಗಳ ಮೇಲಿರುವ ಒಳಬಾಗಿಲನ್ನು ಮುಚ್ಚತಕ್ಕದ್ದು.

(v) ಆನಂತರ, ರಿಸಲ್ಟ್ ಸೆಕ್ಷನ್‌ನ ಒಳಬಾಗಿಲನ್ನು ವಿಶೇಷ ಟ್ಯಾಗಿನಿಂದ ಮೊಹರು ಮಾಡತಕ್ಕದ್ದು.

(vi) ವಿಶೇಷ ಟ್ಯಾಗನ್ನು ಅಳವಡಿಸಿದ ನಂತರ, ಗ್ರೀನ್ ಪೇಪರ್ ಸೀಲಿನ (ಸೀಲುಗಳ) ಮುಕ್ತ ತುದಿಗಳು ಮುಚ್ಚಲಾದ ಹೊರಬಾಗಿಲಿನ ಎರಡೂ ಕಡೆಗಳಿಂದ ಹೊರ ಚಾಚಿಕೊಂಡಿವೆ ಎಂಬುದನ್ನು ಖಚಿತಪಡಿಸಿಕೊಂಡು ರಿಸಲ್ಟ್ ಸೆಕ್ಷನ್‌ನ ಹೊರಬಾಗಿಲನ್ನು ಮುಚ್ಚಬೇಕು.

(vii) ತರುವಾಯ, ಪ್ರಿಸೈಡಿಂಗ್ ಅಧಿಕಾರಿ, ದಾರ ಹಾಗೂ ವಿಳಾಸದ ಟ್ಯಾಗಿನಿಂದ ಹೊರಬಾಗಿಲನ್ನು ಮೊಹರು ಮಾಡತಕ್ಕದ್ದು.

(viii) ನಂತರ ಅವರು, ಸಂಪೂರ್ಣವಾಗಿ ಹೊರಭಾಗದಿಂದ ರಿಸಲ್ಟ್ ಸೆಕ್ಷನ್ ಅನ್ನು ಮೊಹರು ಮಾಡಲು ಕಂಟ್ರೋಲ್ ಯೂನಿಟ್‌ನ ಸುತ್ತಲೂ ಸ್ಟ್ರಿಪ್ ಸೀಲನ್ನು ಅಳವಡಿಸಲು ಕ್ರಮವಹಿಸಬೇಕು. ಹೀಗೆ ಮಾಡುವುದರಿಂದ ರಿಸಲ್ಟ್ ಸೆಕ್ಷನನ್ನು ಮತದಾನ ಪ್ರಾರಂಭವಾದ ನಂತರ ಸ್ಟ್ರಿಪ್ ಸೀಲನ್ನು ಹಾನಿಗೊಳಿಸದೆ ತೆರೆಯಲು ಸಾಧ್ಯವಿರುವುದಿಲ್ಲ. ಸ್ಟ್ರಿಪ್ ಸೀಲ್‌ನ್ನು "ಕ್ಲೋಸ್" ಬಟನ್‌ನ ಸ್ವಲ್ಪ ಕೆಳಗೆ ಅಳವಡಿಸತಕ್ಕದ್ದು.

**24. ಸ್ಟ್ರಿಪ್ ಸೀಲ್‌ನಿಂದ ಕಂಟ್ರೋಲ್ ಯೂನಿಟ್ಟನ್ನು ಮೊಹರು ಮಾಡುವ ವಿಧಾನ:**

ಸ್ಟ್ರಿಪ್ ಸೀಲ್‌ನಿಂದ ಇವಿಎಂ ಅನ್ನು ಮೊಹರು ಮಾಡುವುದಕ್ಕೆ ವಹಿಸುವ ಕ್ರಮಗಳು ಈ ಕೆಳಕಂಡಂತಿವೆ :

**ಕ್ರಮ–1:** ಪ್ರಿಸೈಡಿಂಗ್ ಅಧಿಕಾರಿಯು, ಸೀಲಿನ ಹಸಿರು ಭಾಗವು ಹೊರಗಡೆ ಉಳಿಯುವಂತೆ ಗ್ರೀನ್ ಪೇಪರ್ ಸೀಲ್ ನ ಒಳಭಾಗದ ಕೊನೆಯಲ್ಲಿ ಮಧ್ಯದಲ್ಲಿ ಡಬಲ್ ಫೋಲ್ಡ್ ಮಾಡಬೇಕು

**ಕ್ರಮ–2:** ರಿಸಲ್ಟ್ ಸೆಕ್ಷನ್‌ನ ಹೊರ ಬಾಗಿಲಿನ ಒಳ ಮಗ್ಗುಲಿನಿಂದ ಹೊರಬಂದಿರುವ ಗ್ರೀನ್ ಪೇಪರ್ ಸೀಲ್‌ನ ಕೆಳಗೆ, ಸ್ಟ್ರಿಪ್ ಸೀಲ್ ನ ಮೊದಲೇ ಗೋಂದು ಹಾಕಿದ "ಎ" ಭಾಗ ಬರುವಂತೆ ಸ್ಟ್ರಿಪ್ ಸೀಲ್ ಸಾಧನವನ್ನು ಗೊತ್ತುಪಡಿಸಿ, 'ಎ' ಭಾಗದ ಮೇಲಿರುವ ವ್ಯಾಕ್ಸ್ ಪೇಪರನ್ನು ತೆಗೆಯಬೇಕು. ಅನಂತರ ಗೋಂದು ಹಾಕಿದ 'ಎ' ಭಾಗದ ಮೇಲೆ ಗ್ರೀನ್ ಪೇಪರ್ ಸೀಲಿನ ಒಳಪದರವನ್ನು ಇಟ್ಟು ಅದುಮಿ ಅಂಟಿಸಬೇಕು.

**ಕ್ರಮ–3:** ಆನಂತರ, ಮೊದಲೇ ಗೋಂದು ಹಾಕಿದ 'ಬಿ' ಭಾಗದ ಮೇಲಿನ ವ್ಯಾಕ್ಸ್ ಪೇಪರನ್ನು ತೆಗೆದು ಅದನ್ನು  ಗ್ರೀನ್ ಪೇಪರ್ ಸೀಲಿನ ಹೊರ ಪದರದ ಮೇಲೆ ಇಟ್ಟು ಅದುಮಿ ಅಂಟಿಸಬೇಕು.

**ಕ್ರಮ–4:** ಗ್ರೀನ್ ಪೇಪರ್ ಸೀಲಿನ ಮೇಲೆ 'ಬಿ' ಭಾಗವನ್ನು ಅಂಟಿಸಿದ ನಂತರ ಮೊದಲೇ ಗೋಂದು ಹಾಕಿದ 'ಸಿ' ಭಾಗವು ಮೇಲಿನ ಸ್ಥಾನಕ್ಕೆ ಬರುತ್ತದೆ. ಮೊದಲೇ ಗೋಂದು ಹಾಕಿರುವ 'ಸಿ' ಭಾಗದ ಮೇಲಿನ ವ್ಯಾಕ್ಸ್ ಪೇಪರನ್ನು ತೆಗೆದು ಅದರ ಮೇಲೆ ಹೊರಬಾಗಿಲಿನ ಮೇಲ್ಭಾಗದಿಂದ ಹೊರಚಾಚಿರುವ ಗ್ರೀನ್ ಪೇಪರ್ ಸೀಲಿನ ಎರಡೂ ತುದಿಗಳನ್ನು ಇಟ್ಟು ಗ್ರೀನ್ ಪೇಪರ್ ಸೀಲು 'ಸಿ' ಭಾಗಕ್ಕೆ ಗಟ್ಟಿಯಾಗಿ ಅಂಟಿಕೊಳ್ಳುವ ಹಾಗೆ ಒತ್ತಬೇಕು..

**ಕ್ರಮ–5:** ಸ್ಟ್ರಿಪ್ ಸೀಲ್ ನ ಉಳಿದ ಭಾಗ 'ಕ್ಲೋಸ್' ಬಟನ್‌ನ್ನು ಮುಚ್ಚಿಕೊಳ್ಳುವ ರಬ್ಬರ್ ಮುಚ್ಚಳಿಕೆಯ ಕೆಳಗೆ ಹಾದುಹೋಗುವ ಹಾಗೆ ಎಚ್ಚರಿಕೆ ವಹಿಸಿ. ಎಡಭಾಗದಿಂದ ಕಂಟ್ರೋಲ್ ಯೂನಿಟ್‌ನ ಸುತ್ತಲೂ ತನ್ನಿ. ನಂತರ ಸ್ಟ್ರಿಪ್ ಸೀಲ್‌ನ ಮತ್ತೊಂದು ತುದಿಯನ್ನು ಕಂಟ್ರೋಲ್ ಯೂನಿಟ್‌ನ ಬಲಭಾಗದಿಂದ ತಂದು ಮೊದಲೇ ಗೋಂದು ಹಾಕಿರುವ 'ಎ', 'ಬಿ' ಮತ್ತು 'ಸಿ' ಭಾಗಗಳನ್ನು ಅಂಟಿಸಲಾಗಿರುವ ಕಂಟ್ರೋಲ್ ಯೂನಿಟ್‌ನ ಹೊರ ಬಾಗಿಲ ಮೇಲ್ಭಾಗದಲ್ಲಿ ಅಂಟಿಸಬೇಕು.

**ಕ್ರಮ–6:** ಮೊದಲೇ ಗೋಂದು ಹಾಕಿರುವ ಭಾಗ 'ಡಿ' ಯನ್ನು ಮುಚ್ಚಿರುವ ವ್ಯಾಕ್ಸ್ ಪೇಪರನ್ನು ತೆಗೆದು ಅದನ್ನು ಹೊರ ಬಾಗಿಲ ಮೇಲ್ಭಾಗದಿಂದ ಹೊರಚಾಚಿರುವ ಗ್ರೀನ್ ಪೇಪರ್ ಸೀಲಿನ ಮೇಲೆ ಇಟ್ಟು ಗಟ್ಟಿಯಾಗಿ ಒತ್ತಿ ಅಂಟಿಸಬೇಕು. ಮೊದಲೇ ಗೋಂದು ಹಾಕಲಾದ 'ಡಿ' ಭಾಗ 'ಕ್ಲೋಸ್' ಬಟನ್‌ನ ಕೆಳಗಿರುವ ಸ್ಟ್ರಿಪ್ ಸೀಲ್‌ನ ಮೇಲೆ ಚಾಚಿಕೊಂಡಿರುತ್ತದೆ. ಪ್ರಿಸೈಡಿಂಗ್ ಆಫೀಸರನು ಚಾಚಿಕೊಂಡಿರುವ 'ಡಿ' ಭಾಗವನ್ನು ಸ್ಟ್ರಿಪ್ ಸೀಲ್‌ನ ಮೇಲೆ ಇಟ್ಟು ಗಟ್ಟಿಯಾಗಿ ಒತ್ತಬೇಕು. ಮೇಲ್ಕಂಡ ಪ್ರಕ್ರಿಯೆಯ ಮೂಲಕ ಹೊರಬಾಗಿಲ ಎರಡೂ ಕಡೆಗಳಿಂದ ಹೊರಚಾಚಿಕೊಂಡಿರುವ ಗ್ರೀನ್ ಪೇಪರ್ ಸೀಲ್‌ಗಳ ಎಲ್ಲಾ ನಾಲ್ಕೂ ಮುಕ್ತ ತುದಿಗಳನ್ನು ಗಟ್ಟಿಯಾಗಿ ಅಂಟಿಸಿದ್ದರೆ, ಸ್ಟ್ರಿಪ್ ಸೀಲ್ ಅದನ್ನು ಭದ್ರಪಡಿಸಿದಂತಾಗುತ್ತದೆ. ಅದೇ ಸಮಯದಲ್ಲಿ ರಿಸಲ್ಟ್ ಸೆಕ್ಷನ್ ಮೇಲಿನ ಹೊರ ಬಾಗಿಲನ್ನು ಸಹ ಎಲ್ಲ ಕಡೆಗಳಿಂದ ಈ ಸ್ಟ್ರಿಪ್ ಸೀಲ್‌ನಿಂದ ಮೊಹರು ಮಾಡಿದಂತಾಗಿದ್ದು ಈಗ ಸ್ಟ್ರಿಪ್ ಸೀಲನ್ನು ಹಾನಿಗೊಳಿಸದೆ ಈ ಸೆಕ್ಷನನ್ನು ತೆರೆಯಲಾಗುವುದಿಲ್ಲ.

**ಸ್ಟ್ರಿಪ್ ಸೀಲ್‌ನ್ನು ಅಳವಡಿಸಿದ ನಂತರ**

ಸ್ಟ್ರಿಪ್ ಸೀಲ್‌ನಿಂದ ಕಂಟ್ರೋಲ್ ಯೂನಿಟ್‌ನ್ನು ಮೊಹರು ಮಾಡಿದ ತರುವಾಯ, ಪ್ರಿಸೈಡಿಂಗ್ ಅಧಿಕಾರಿಯು, ಮತದಾನದ ಅವಧಿಯಲ್ಲಿ ಸ್ಟ್ರಿಪ್ ಸೀಲ್‌ಗೆ ಹಾನಿಯಾಗದ ಹಾಗೆ ಅಥವಾ ಅದರ ಬಗ್ಗೆ ಹಸ್ತಕ್ಷೇಪ ಮಾಡದ ಹಾಗೆ ಎಚ್ಚರಿಕೆ ವಹಿಸತಕ್ಕದ್ದು ಮತ್ತು ಮತಗಟ್ಟೆಯಲ್ಲಿ ಮತದಾನದ ಸಮಯದಲ್ಲಿ ಅಥವಾ ಮತದಾನದ ನಂತರ ಈ ಸೀಲನ್ನು ತೆಗೆಯತಕ್ಕದ್ದಲ್ಲ. ನಿಗದಿತ ವೇಳೆಗೆ ಮತದಾನ ಕೊನೆಗೊಂಡಾಗ, ಪ್ರಿಸೈಡಿಂಗ್ ಅಧಿಕಾರಿಯು ಸ್ಟ್ರಿಪ್ ಸೀಲ್‌ಗೆ ಹಾನಿಯಾಗದಂತೆ 'ಕ್ಲೋಸ್' ಬಟನ್ ಮೇಲಿರುವ ರಬ್ಬರ್ ಮುಚ್ಚಳವನ್ನು ತೆಗೆದು ಮತದಾನವನ್ನು ಮುಕ್ತಾಯಗೊಳಿಸುವುದಕ್ಕೆ 'ಕ್ಲೋಸ್' ಬಟನನ್ನು ಒತ್ತತಕ್ಕದ್ದು, ನಂತರ ಮುಚ್ಚಳವನ್ನು ಹಾಕತಕ್ಕದ್ದು. ಮತದಾನದ ಕೊನೆಯಲ್ಲಿ ಇತರ ವಿಧಿ ವಿಧಾನಗಳನ್ನು ಪೂರ್ಣಗೊಳಿಸಿದ ತರುವಾಯ, ಪ್ರಿಸೈಡಿಂಗ್ ಅಧಿಕಾರಿಯು ಕಂಟ್ರೋಲ್ ಯೂನಿಟ್‌ನ್ನು

ಅದನ್ನು ಸಾಗಿಸುವ ಪೆಟ್ಟಿಗೆಯಲ್ಲಿಟ್ಟು ಎಚ್ಚರಿಕೆಯಿಂದ ಪ್ಯಾಕ್ ಮಾಡತಕ್ಕದ್ದು ಮತ್ತು ಸಾಗಿಸುವ ಪೆಟ್ಟಿಗೆಯನ್ನು ಅಡ್ರೆಸ್ ಟ್ಯಾಗ್‌ನಿಂದ ಮೊಹರು ಮಾಡತಕ್ಕದ್ದು. ಈ ಮೊಹರು ಮಾಡಲಾದ ಸಾಗಿಸುವ ಪೆಟ್ಟಿಗೆಯನ್ನು ಭದ್ರತಾ ಕೊಠಡಿಗೆ ಒಪ್ಪಿಸತಕ್ಕದ್ದು. ಮತ ಎಣಿಕೆ ಮಾಡುವ ದಿವಸ, ಸ್ಟ್ರಿಪ್ ಸೀಲ್ ಸುಭದ್ರವಾಗಿರುವ ಕಂಟ್ರೋಲ್ ಯೂನಿಟ್ ನ್ನು ಎಣಿಕೆ ಮೇಜಿನಲ್ಲಿ ಹಾಜರಿರುವ ಉಮೇದುವಾರರು/ಎಣಿಕೆ ಏಜೆಂಟರುಗಳು ಪರೀಕ್ಷಿಸುವುದಕ್ಕೆ ಅವಕಾಶ ಮಾಡಿಕೊಡತಕ್ಕದ್ದು. ಆನಂತರ ಮಾತ್ರವೇ ಮೊಹರನ್ನು ತೆಗೆಯತಕ್ಕದ್ದು. ಮೊಹರು ತೆಗೆಯುವಾಗ ಗ್ರೀನ್ ಪೇಪರ್ ಸೀಲ್ ಹಾನಿಗೊಳ್ಳದಂತೆ ಎಚ್ಚರವಹಿಸಬೇಕು. ಹೊರಕ್ಕೆ ಚಾಚಿಕೊಂಡಿರುವ ಗ್ರೀನ್ ಪೇಪರ್ ಸೀಲುಗಳನ್ನು ಪರೀಕ್ಷಿಸಿದ ನಂತರ ಕಂಟ್ರೋಲ್ ಯೂನಿಟ್‌ನ ಹೊರಬಾಗಿಲಿನ ಮೇಲಿರುವ ದಾರದ ಮೊಹರನ್ನು ತೆರೆಯತಕ್ಕದ್ದು.

**ಸ್ಟ್ರಿಪ್ ಸೀಲ್‌ನ್ನು ಮೊಹರು ಮಾಡುವಾಗ ಪ್ರಮುಖ ಮುನ್ನೆಚ್ಚರಿಕೆ ಕ್ರಮಗಳು:**

(i) ಸ್ಟ್ರಿಪ್ ಸೀಲ್‌ನ್ನು ರಿಸಲ್ಟ್ ಸೆಕ್ಷನ್‌ನ ಹೊರಬಾಗಿಲಿನ ಮೇಲಿರುವ **'ಕ್ಲೋಸ್'** ಬಟನ್‌ನ್ನು ಮುಚ್ಚಳದ ಕೆಳಗಿನ ಭಾಗವನ್ನು ಮುಚ್ಚುವಂತೆ ಇರಿಸಬೇಕು. ಈ ಸ್ಟ್ರಿಪನ್ನು ಅಳವಡಿಸುವಾಗ **'ಕ್ಲೋಸ್'** ಬಟನನ್ನು ಮುಚ್ಚಲು ರಬ್ಬರ್ ಮುಚ್ಚಳವನ್ನು ಸ್ಪಷ್ಟವಾಗಿ ಕಾಣುವಂತೆ ಮತ್ತು ಅದು ಈ ಸ್ಟ್ರಿಪ್‌ನಿಂದ ಭಾಗಶಃವಾಗಿಯೂ ಮುಚ್ಚಿರದಂತೆ ನೋಡಿಕೊಳ್ಳಬೇಕು. ಇದರಿಂದ ರಬ್ಬರ್ ಮುಚ್ಚಳವನ್ನು ತೆಗೆಯಲು ಮತ್ತು ಅಗತ್ಯವಾದಾಗ ಕ್ಲೋಸ್ ಬಟನನ್ನು ಬಳಸಲು ಯಾವುದೇ ತೊಂದರೆಯಾಗುವುದಿಲ್ಲ.

(ii) ಸ್ಟ್ರಿಪ್ ಸೀಲ್‌ನ್ನು ಬಿಗಿಯಾಗಿ ಅಳವಡಿಸಬೇಕೇ ಹೊರತು ಸಡಿಲವಾಗಿ ಅಳವಡಿಸತಕ್ಕದ್ದಲ್ಲ.

(iii) **ಯಾವುದೇ ಸನ್ನಿವೇಶಗಳಲ್ಲಿ ಹಾನಿಗೊಂಡಿರುವ ಸ್ಟ್ರಿಪ್‌ಗಳನ್ನು ಬಳಸಬಾರದು**.

(iv) ಪ್ರತಿಯೊಂದು ಮತಗಟ್ಟೆಗೂ ಗ್ರೀನ್ ಪೇಪರ್ ಸೀಲುಗಳನ್ನು ಒದಗಿಸುವಂತೆಯೇ ನಾಲ್ಕು (4) ಸ್ಟ್ರಿಪ್ ಸೀಲ್‌ಗಳನ್ನು ಸಹ ಒದಗಿಸಲಾಗುವುದು.

(v) ಮತದಾನವನ್ನು ನಡೆಸುವುದಕ್ಕಾಗಿ ಮತಗಟ್ಟೆಗೆ ಒದಗಿಸಲಾದ ಪ್ರತಿಯೊಂದು ಸ್ಟ್ರಿಪ್ ಸೀಲ್ ಗಳಿಗೆ ಸಂಬಂಧಿಸಿದಂತೆ ಪ್ರಿಸೈಡಿಂಗ್ ಅಧಿಕಾರಿಯು ಲೆಕ್ಕವನ್ನಿಟ್ಟುಕೊಂಡಿರತಕ್ಕದ್ದು.

(vi) ಆಕಸ್ಮಿಕವಾಗಿ ಹಾನಿಗೊಂಡಿರುವ ಪ್ರತಿಯೊಂದು ಸ್ಟ್ರಿಪ್ ಸೀಲ್‌ನ್ನು (ಅದರ ಚೂರುಗಳೂ ಸೇರಿದಂತೆ), ಬಳಸದೆ ರಿಟರ್ನಿಂಗ್ ಆಫೀಸರ್‌ರವರಿಗೆ ಹಿಂದಿರುಗಿಸತಕ್ಕದ್ದು. ಯಾವುದೇ ಸ್ಟ್ರಿಪ್ ಸೀಲ್ ಯಾವುದೇ ಸಮಯದಲ್ಲಿ ಯಾರೇ ಅನಧಿಕೃತ ವ್ಯಕ್ತಿಯ ಕೈಯಲ್ಲಿರುವುದು ಕಂಡು ಬಂದರೆ ಅದಕ್ಕೆ ರಿಟರ್ನಿಂಗ್ ಅಧಿಕಾರಿಯು ಹೊಣೆಗಾರರಾಗುವರು.

(vii) ಚುನಾವಣಾಧಿಕಾರಿಗಳು ಮತ್ತು ಜಿಲ್ಲಾ ಚುನಾವಣಾಧಿಕಾರಿಗಳು ಪ್ರತಿಯೊಬ್ಬ ರಿಟರ್ನಿಂಗ್ ಅಧಿಕಾರಿಗೆ ಒದಗಿಸಿದ ಸ್ಟ್ರಿಪ್ ಸೀಲ್‌ಗಳ ಕ್ರಮಸಂಖ್ಯೆಗಳ ದಾಖಲೆಯನ್ನು ಇಟ್ಟುಕೊಳ್ಳತಕ್ಕದ್ದು. ಹಾಗೆಯೇ ಪ್ರತಿಯೊಬ್ಬ ರಿಟರ್ನಿಂಗ್ ಅಧಿಕಾರಿಯೂ ಸಹ ಪ್ರತಿ ಮತಗಟ್ಟೆಗೆ ಒದಗಿಸಲಾದ ಸ್ಟ್ರಿಪ್ ಸೀಲ್‌ಗಳ ಲೆಕ್ಕದ ದಾಖಲೆಯನ್ನು ಇಡತಕ್ಕದ್ದು.

(viii) ಆಯೋಗವು ಪ್ರಾತ್ಯಕ್ಷಿಕೆ ಮತ್ತು ತರಬೇತಿಯ ಉದ್ದೇಶಕ್ಕಾಗಿ ಸ್ಟ್ರಿಪ್ ಸೀಲ್‌ಗಳ ಮಾದರಿಗಳನ್ನು ನೀಡುತ್ತದೆ. ಈ ಮಾದರಿ ಸ್ಟ್ರಿಪ್ ಸೀಲ್‌ಗಳನ್ನು ಸಹ ಸುರಕ್ಷಿತ ಅಭಿರಕ್ಷೆಯಲ್ಲಿಡತಕ್ಕದ್ದು. ತರಬೇತಿಗೆ ಅಥವಾ ಸಂದರ್ಭಾನುಸಾರ ಪ್ರಾತ್ಯಕ್ಷಿಕೆಗಾಗಿ ಸ್ಟ್ರಿಪ್ ಸೀಲ್‌ಗಳನ್ನು ಬಳಸಿ ತರುವಾಯ ಹಾಗೆ ಬಳಸಲಾದ ಸ್ಟ್ರಿಪ್ ಸೀಲ್‌ಗಳನ್ನು ಚೂರು ಚೂರು ಮಾಡಿ ನಾಶಪಡಿಸತಕ್ಕದ್ದು.

## 25. ವಾಸ್ತವಿಕ ಮತದಾನಕ್ಕೆ ಸಿದ್ಧವಾದ ಮತಯಂತ್ರ

25.1 ಮತಯಂತ್ರವು ಈಗ ವಾಸ್ತವಿಕ ಮತದಾನದ ಬಳಕೆಗೆ ಎಲ್ಲಾ ವಿಧದಲ್ಲೂ ಸಿದ್ಧವಾಗಿದೆ.

25.2 ಅಣಕು ಮತದಾನವನ್ನು ಪ್ರಾರಂಭಿಸುವುದಕ್ಕೆ ಮೊದಲು, ಪ್ರಿಸೈಡಿಂಗ್ ಆಧಿಕಾರಿಯು ಬ್ಯಾಲೆಟ್ ಯೂನಿಟ್‌ಗಳು ಮತ್ತು ವಿವಿಪ್ಯಾಟ್ ಅನ್ನು ವೋಟಿಂಗ್ ಕಂಪಾರ್ಟ್‌ಮೆಂಟಿನೊಳಗೆ ಇಡತಕ್ಕದ್ದು. ವೋಟಿಂಗ್ ಕಂಪಾರ್ಟ್‌ಮೆಂಟನ್ನು, ಕಂಟ್ರೋಲ್ ಯೂನಿಟನ್ನು ಇಟ್ಟುಕೊಂಡು ಕಾರ್ಯನಿರ್ವಹಿಸುತ್ತಿರುವ ಮೇಜಿನಿಂದ ಸಾಕಷ್ಟು ದೂರದಲ್ಲಿ ಸ್ಥಾಪಿಸಿರತಕ್ಕದ್ದು. ವಿವಿಪ್ಯಾಟ್ ಮತ್ತು ಕಂಟ್ರೋಲ್ ಯೂನಿಟ್‌ಗಳ ನಡುವೆ ಪರಸ್ಪರ ಸಂಪರ್ಕ ಕಲ್ಪಿಸುವ ಕೇಬಲ್, ಸರಿಸುಮಾರು ಐದು ಮೀಟರುಗಳಷ್ಟು ಉದ್ದವಿರುತ್ತದೆ. ಆದ್ದರಿಂದ, ವೋಟಿಂಗ್ ಕಂಪಾರ್ಟ್‌ಮೆಂಟನ್ನು ಯುಕ್ತ ಅಂತರದಲ್ಲಿ ಸ್ಥಾಪಿಸಬೇಕು. ಅಲ್ಲದೆ, ಕೇಬಲ್ ಅನ್ನು ಮತಗಟ್ಟೆಯ ಒಳಗಡೆ ಮತದಾರರ ಚಲನವಲನಕ್ಕೆ ಅಡ್ಡಿಪಡಿಸದಿರುವ ಹಾಗೆ ಹಾಗೂ ಅವರು ಇದನ್ನು ತುಳಿದುಕೊಂಡು ಹೋಗದ ಅಥವಾ ಎಡವದ ಹಾಗೆ ಅಳವಡಿಸಬೇಕು. ಆದರೆ ವೋಟಿಂಗ್ ಕಂಪಾರ್ಟ್‌ಮೆಂಟಿನಲ್ಲಿ ಬ್ಯಾಲೆಟ್ ಯೂನಿಟ್(ಗಳು) ಮತ್ತು ವಿವಿಪ್ಯಾಟ್ ಅನ್ನು ಇಡುವಾಗ, ಮತದಾನದ ಗೋಪ್ಯತೆ ಉಲ್ಲಂಘನೆಯಾಗುವುದಿಲ್ಲವೆಂಬುದನ್ನು ತಪ್ಪದೇ ಖಚಿತಪಡಿಸಿಕೊಳ್ಳಬೇಕು. ವಿವಿಪ್ಯಾಟ್ ಅನ್ನು ಮೊದಲನೇ ಬ್ಯಾಲೆಟ್ ಯೂನಿಟ್‌ನ ಎಡಭಾಗಕ್ಕೆ ಇಡತಕ್ಕದ್ದು. ವೋಟಿಂಗ್ ಕಂಪಾರ್ಟ್‌ಮೆಂಟನ್ನು ಸ್ಟೀಲ್ ಬೂದು ಬಣ್ಣದ (ಅಪಾರದರ್ಶಕ ಮತ್ತು ಮರುಬಳಸುವಂಥ) ಮಸುಕಾದ ಪ್ಲಾಸ್ಟಿಕ್ ಷೀಟ್ (ಫ್ಲೆಕ್ಸ್ ಬೋರ್ಡ್) ನಿಂದ

ಮಾಡಲಾಗಿದೆಯೆಂಬುದನ್ನು ಖಚಿತಪಡಿಸಿಕೊಳ್ಳಬೇಕು. ಒಂದು ಬ್ಯಾಲೆಟ್ ಯೂನಿಟ್ ಬಳಸಿದ್ದಲ್ಲಿ ವೋಟಿಂಗ್ ಕಂಪಾರ್ಟ್‌ಮೆಂಟ್ ಮೂರು ಮಡಿಕೆಗಳನ್ನು ಹೊಂದಿರಬೇಕು ಮತ್ತು ಪ್ರತಿಯೊಂದು ಮಡಿಕೆಯ ಅಳತೆಯು 24" x 24" x 30" (ಉದ್ದ x ಅಗಲ x ಎತ್ತರ) ಗಳದ್ದಾಗಿರಬೇಕು. ಮತದಾನದಲ್ಲಿ ಒಂದು ಬ್ಯಾಲೆಟ್ ಯೂನಿಟ್‌ಗಿಂತ ಹೆಚ್ಚು ಬ್ಯಾಲೆಟ್ ಯೂನಿಟ್ ಬಳಸಿದ್ದಲ್ಲಿ, ವೋಟಿಂಗ್ ಕಂಪಾರ್ಟ್‌ಮೆಂಟ್‌ನ ಅಗಲವನ್ನು ಪ್ರತಿಯೊಂದು ಹೆಚ್ಚು ಸಂಖ್ಯಾತೀಕ ಯೂನಿಟ್‌ಗಾಗಿ 12 ಇಂಚುಗಳಷ್ಟು ಹೆಚ್ಚಿಸಿಕೊಳ್ಳಬಹುದಾಗಿದೆ. ವೋಟಿಂಗ್ ಕಂಪಾರ್ಟ್‌ಮೆಂಟ್‌ನ್ನು ಕಡ್ಡಾಯವಾಗಿ ಕಿಡಕಿ/ ಬಾಗಿಲಿನಿಂದ ದೂರದಲ್ಲಿ ಸ್ಥಾಪಿಸತಕ್ಕದ್ದು.

**26. ಪೇಪರ್‌ಸೀಲ್‌ಗಳ ಲೆಕ್ಕ**

26.1 ಪ್ರಿಸೈಡಿಂಗ್ ಅಧಿಕಾರಿಗಳು ಮತಗಟ್ಟೆಯಲ್ಲಿ ಉಪಯೋಗಿಸುವುದಕ್ಕಾಗಿ ತಮಗೆ ಒದಗಿಸಿದ ಪೇಪರ್ ಸೀಲ್‌ಗಳ ಮತ್ತು ಕಂಟ್ರೋಲ್ ಯೂನಿಟ್ ಮೊಹರು ಮಾಡುವುದಕ್ಕಾಗಿ ಮತ್ತು ಭದ್ರಪಡಿಸುವುದಕ್ಕಾಗಿ ತಾವು ವಾಸ್ತವವಾಗಿ ಬಳಸಿದ ಪೇಪರ್ ಸೀಲ್‌ಗಳ ಲೆಕ್ಕವನ್ನು ಸರಿಯಾಗಿ ಇಡತಕ್ಕದ್ದು. ಅಂತಹ ಲೆಕ್ಕವನ್ನು, ಅವರು ಚುನಾವಣೆಗಳನ್ನು ನಡೆಸುವ ನಿಯಮಗಳು, 1961 (ಅನುಬಂಧ VIII)ಕ್ಕೆ ಅನುಬಂಧಿಸಿದ 17ಸಿಯ ಭಾಗ–1ರ ಬಾಬು ಸಂಖ್ಯೆ 9ರ ಪ್ರಕಾರ ಈ ಉದ್ದೇಶಕ್ಕಾಗಿ ವಿಶೇಷವಾಗಿ ನಿರ್ದಿಷ್ಟಪಡಿಸಲಾದ ನಮೂನೆಯಲ್ಲಿ ಇಡತಕ್ಕದ್ದು.

26.2 ಪ್ರಿಸೈಡಿಂಗ್ ಅಧಿಕಾರಿಯು ಬಳಕೆಗಾಗಿ ಪೂರೈಸಲಾದ ಮತ್ತು ವಾಸ್ತವವಾಗಿ ಬಳಸಲಾದ ಪೇಪರ್ ಸೀಲ್‌ಗಳ ಕ್ರಮಸಂಖ್ಯೆಗಳನ್ನು ಬರೆದುಕೊಳ್ಳುವುದಕ್ಕೆ ಹಾಜರಿರುವ ಅಭ್ಯರ್ಥಿಗಳಿಗೆ ಅಥವಾ ಅವರ ಪೋಲಿಂಗ್ ಏಜೆಂಟರಿಗೆ ಅನುಮತಿ ನೀಡತಕ್ಕದ್ದು.

**27. ಮತದಾನದ ಗೌಪ್ಯತೆಯನ್ನು ಕಾಪಾಡುವುದು.**

27.1 ಪ್ರತಿಯೊಬ್ಬ ಪೋಲೀಂಗ್ ಏಜೆಂಟನು, ಮತದಾನದ ಗೌಪ್ಯತೆಯನ್ನು ಕಾಪಾಡಲು ಮತ್ತು ಕಾಪಾಡುವಲ್ಲಿ ನೆರವಾಗಲು ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 128ನೇ ಪ್ರಕರಣವನ್ನು ಅಗತ್ಯಪಡಿಸುತ್ತದೆ ಹಾಗೂ ಯಾರೇ ಪೋಲಿಂಗ್ ಏಜೆಂಟನು ಅಂಥ ಗೌಪ್ಯತೆಯ ಉಲ್ಲಂಘನೆಯೆಂದು ಪರಿಗಣಿಸಲಾದ ಯಾವುದೇ ಮಾಹಿತಿಯನ್ನು ಯಾರೇ ವ್ಯಕ್ತಿಗೆ ತಿಳಿಸತಕ್ಕದ್ದಲ್ಲ. ಕಾನೂನಿನ ಮೇಲ್ಕಂಡ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು ಮೂರು

ತಿಂಗಳವರೆಗೆ ವಿಸ್ತರಿಸಬಹುದಾದಂಥ ಕಾರಾವಾಸ ಶಿಕ್ಷೆಯಿಂದ ಅಥವಾ ಜುಲ್ಮಾನೆಯಿಂದ ಅಥವಾ ಇವೆರಡರಿಂದಲೂ ದಂಡನೀಯನಾಗುತ್ತಾನೆ.

27.2 ಮತದಾನವನ್ನು ಪ್ರಾರಂಭಿಸುವುದಕ್ಕೆ ಮೊದಲು, ಪ್ರಿಸೈಡಿಂಗ್ ಅಧಿಕಾರಿಯು ಅಲ್ಲಿ ಹಾಜರಿರುವ ಎಲ್ಲರಿಗೂ ಮತದಾನದ ಗೌಪ್ಯತೆಯನ್ನು ಕಾಪಾಡಿಕೊಂಡು ಬರುವ ತಮ್ಮ ಕರ್ತವ್ಯದ ಬಗ್ಗೆ ಮತ್ತು ಮತದಾನದ ಗೌಪ್ಯತೆಯನ್ನು ಉಲ್ಲಂಘಿಸಿದರೆ ವಿಧಿಸಬಹುದಾದ ದಂಡನೆಯ ಬಗ್ಗೆ ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ ಪ್ರಕರಣ 128ರ ಉಪಬಂಧಗಳನ್ನು ವಿವರಿಸತಕ್ಕದ್ದು.

27.3ಮಾನ್ಯ ಸರ್ವೋಚ್ಛ ನ್ಯಾಯಾಲಯದ ಸಲಹೆಯ ಮೇರೆಗೆ, ಆಯೋಗವು, ವೀಕ್ಷಕರು ಅವಶ್ಯಕವೆಂದು ಪರಿಗಣಿಸಬಹುದಾದ ಮತಗಟ್ಟೆಯೊಳಗೆ ನಡೆಯುವ ಮತದಾನ ವ್ಯವಹರಣೆಗಳನ್ನು ಅದಕ್ಕಾಗೆ ಅಧಿಕೃತಗೊಳಿಸಿದ ವ್ಯಕ್ತಿಯ ಮೂಲಕವೇ ವಿಡಿಯೋ ಚಿತ್ರೀಕರಣ ನಡೆಸಬೇಕೆಂದು ಸೂಚಿಸಿದೆ. ಆದಾಗ್ಯೂ, ವಿಡಿಯೋ ಚಿತ್ರೀಕರಣ ಮಾಡುವಾಗ ಮತದಾನದ ಗೌಪ್ಯತೆಯನ್ನು ಉಲ್ಲಂಘಿಸದಿರುವುದನ್ನು ಖಚಿತಪಡಿಸುವ ನಿಟ್ಟಿನಲ್ಲಿ ಸೂಕ್ತ ಎಚ್ಚರಿಕೆ ವಹಿಸತಕ್ಕದ್ದು ಎಂದರೆ, ಮತದಾರರು ಮತ ಚಲಾಯಿಸುವ ಸಂದರ್ಭವನ್ನು ವಿಡಿಯೋ ಚಿತ್ರೀಕರಣ ಮಾಡದಿರುವುದನ್ನು ಖಚಿತ ಪಡಿಸತಕ್ಕದ್ದು. ಸಹಜ ಪ್ರಕ್ರಿಯೆಗೆ ಧಕ್ಕೆಯಾಗದ ಹಾಗೂ ಮತದಾನದ ಗೌಪ್ಯತೆಯನ್ನು ಕಾಪಾಡುವ ದೃಷ್ಟಿಯಿಂದ ಮತಗಟ್ಟೆಯೊಳಗೆ ಪೊಟೋಗ್ರಫಿ/ವಿಡಿಯೋ ಚಿತ್ರೀಕರಣ ಮಾಡಲು ಯಾರೇ ಮಾಧ್ಯಮ ವ್ಯಕ್ತಿಗಳಿಗೆ ಅಥವಾ ಯಾರೇ ಇತರೆ ಅನಧಿಕೃತ ವ್ಯಕ್ತಿಗಳಿಗೆ ಅವಕಾಶ ನೀಡತಕ್ಕದ್ದಲ್ಲ.

**28. ಮತದಾನದ ಪ್ರಾರಂಭ:**

28.1 ಮೇಲೆ ಹೇಳಲಾದ ಪೂರ್ವಸಿದ್ಧತೆಗಳನ್ನು ಪೂರ್ಣಗೊಳಿಸಿದ ನಂತರ ಪ್ರಿಸೈಡಿಂಗ್ ಅಧಿಕಾರಿಯು, ಆ ಎಲ್ಲಾ ಪೂರ್ವಸಿದ್ಧತೆಗಳನ್ನು ಪೂರ್ಣಗೊಳಿಸಿರುವೆನೆಂದು ಗೊತ್ತುಪಡಿಸಿದ ನಮೂನೆ (ಅನುಬಂಧ III ಭಾಗ I)ಯಲ್ಲಿ ಘೋಷಣೆಯನ್ನು ಮಾಡಬೇಕು. ಅವನು, ಮತಗಟ್ಟೆಯಲ್ಲಿ, ಹಾಜರಿರುವ ಎಲ್ಲಾ ವ್ಯಕ್ತಿಗಳಿಗೂ ಕೇಳಿಸುವಂತೆ ಘೋಷಣೆಯನ್ನು ಓದಬೇಕು ಹಾಗೂ ಸಹಿ ಮಾಡಬೇಕು ಮತ್ತು ಅಲ್ಲಿ ಹಾಜರಿರುವ ಪೋಲೀಂಗ್ ಏಜೆಂಟರ ಸಹಿಗಳನ್ನು ಅದರ ಮೇಲೆ ತೆಗೆದುಕೊಳ್ಳಬೇಕು ಮತ್ತು ಅದನ್ನು ಲಗತ್ತಿಸಲು ಅನುಮತಿ ಪಡೆಯಬೇಕು. ಪೋಲೀಂಗ್ ಎಜೆಂಟರು ಮುಕ್ತ ಹಾಗೂ ನ್ಯಾಯಯುತ ಮತದಾನವನ್ನು ಪ್ರಾರಂಭಿಸಲಾಯಿತೆಂದು ಹಾಗೂ ಎಲ್ಲವೂ ತೃಪ್ತಿಕರವಾಗಿ ನಡೆಯಿತೆಂದು ಘೋಷಣೆಯಲ್ಲಿ ನೀವು ಸಹಿ ಮಾಡಬೇಕು. ಈ ಘೋಷಣೆಯಲ್ಲಿ ಸಹಿ ಮಾಡಲು ನಿರಾಕರಿಸಿದ ಯಾರೇ ಪೋಲೀಂಗ್

ಏಜೆಂಟರ ಹೆಸರನ್ನು, ಸದರಿ ಘೋಷಣೆಯಲ್ಲಿ ಈ ಉದ್ದೇಶಕ್ಕಾಗಿ ಒದಗಿಸಿರುವ ಕಂಡಿಕೆಯಲ್ಲಿ ಪ್ರಿಸೈಡಿಂಗ್ ಆಫೀಸರ್ ಬರೆದುಕೊಳ್ಳಬೇಕು.

28.2 ಮತದಾನವನ್ನು, ಈ ಉದ್ದೇಶಕ್ಕಾಗಿ ನಿಗದಿಪಡಿಸಿರುವ ಸಮಯಕ್ಕೆ ಸರಿಯಾಗಿ ಪ್ರಾರಂಭಿಸಬೇಕು. ಅಷ್ಟರೊಳಗೆ, ಪ್ರಿಸೈಡಿಂಗ್ ಆಫೀಸರನ ಪ್ರಾರಂಭಿಕ ಕೆಲಸಗಳ ಪೂರ್ವಸಿದ್ಧತೆಗಳು ಮುಗಿದಿರತಕ್ಕದ್ದು. ಆಕಸ್ಮಿಕವಾಗಿ, ಪ್ರಾರಂಭಿಕ ಕಾರ್ಯಗಳು ಮುಗಿದಿರದಿದ್ದರೆ, ಪ್ರಿಸೈಡಿಂಗ್ ಆಫೀಸರನು ಮತದಾನವನ್ನು ಪ್ರಾರಂಭಿಸುವುದಕ್ಕೆ ನಿಗದಿಪಡಿಸಿರುವ ಸಮಯಕ್ಕೆ ಸುಮಾರು ಮೂವರು ಅಥವಾ ನಾಲ್ವರು ಮತದಾರರನ್ನು ಒಳಗೆ ಬಿಡಲು ಅನುಮತಿಸುವುದು ಹಾಗೂ ಮತದಾನದ ಪ್ರಾರಂಭಿಕ ಕಾರ್ಯಗಳು ಮುಗಿಯುವವರೆಗೆ ಪೋಲಿಂಗ್ ಆಫೀಸರುಗಳು ಆ ಮತದಾರರನ್ನು ಗುರುತಿಸುವ ಇತ್ಯಾದಿ ಕಾರ್ಯಮಾಡುತ್ತಿರಬೇಕು.

28.3 ಯಾವುದೇ ಸಂದರ್ಭದಲ್ಲಿ, ಪ್ರಿಸೈಡಿಂಗ್ ಅದಿಕಾರಿಯು, ಮತದಾರರನ್ನು ಮತದಾನ ಮುಕ್ತಾಯಕ್ಕಾಗಿ ಗೊತ್ತುಪಡಿಸಿದ ಸಮಯಕ್ಕೆ ಮುಂಚೆ ಮತಗಟ್ಟೆಯನ್ನು ತಲುಪಿ ಮತದಾನಕ್ಕಾಗಿ ಸರದಿ ಸಾಲಿನಲ್ಲಿ ನಿಂತಿರುವ ಹೊರತು ಗೊತ್ತುಪಡಿಸಿದ ಮುಕ್ತಾಯದ ಸಮಯವನ್ನು ವಿಸ್ತರಿಸುವ ಹಾಗಿಲ್ಲ. ಈ ಉದ್ದೇಶಕ್ಕಾಗಿ, ಪ್ರಿಸೈಡಿಂಗ್ ಅಧಿಕಾರಿಯು ಮತದಾನ ಮುಕ್ತಾಯಕ್ಕಾಗಿ ಗೊತ್ತುಪಡಿಸಿದ ಸಮಯದಲ್ಲಿ ಮತಗಟ್ಟೆಯಲ್ಲಿ ಹಾಜರಿರುವ ಮತದಾರರಿಗೆ ತಾನು ಕ್ರಮಬದ್ಧವಾಗಿ ಸಹಿ ಮಡಿದ ಚೀಟಿಯನ್ನು ಸರದಿಯ ಕೊನೆಯಿಂದ ಪ್ರಾರಂಭಿಸಿ ಹಂಚತಕ್ಕದ್ದು.

**29. ಮತಗಟ್ಟೆಗೆ ಮತದಾರರ ಪ್ರವೇಶ**

29.1 ಸಾಮಾನ್ಯವಾಗಿ, ಪುರುಷ ಹಾಗೂ ಮಹಿಳಾ ಮತದಾರರಿಗಾಗಿ ಪ್ರತ್ಯೇಕ ಸಾಲುಗಳಿರಬೇಕು. ಸಾಲುಗಳನ್ನು ನಿಯಂತ್ರಿಸುವ ವ್ಯಕ್ತಿಯು ನಿಮ್ಮ ನಿರ್ದೇಶನದಂತೆ ಒಂದು ಸಲಕ್ಕೆ ಮೂರು ಅಥವಾ ನಾಲ್ಕು ಮತದಾರರನ್ನು ಮತಗಟ್ಟೆಯ ಒಳಗೆ ಬಿಡುತ್ತಾರೆ. ಒಳಗೆ ಬರುವುದಕ್ಕೆ ಕಾಯುತ್ತಿರುವ ಇತರೆ ಮತದಾರರು ಹೊರಗಡೆ ಸಾಲಿನಲ್ಲಿ ನಿಂತಿರುವಂತೆ ನೋಡಿಕೊಳ್ಳತಕ್ಕದ್ದು. ಪುರುಷ ಹಾಗೂ ಮಹಿಳಾ ಮತದಾರರ ತಂಡಗಳನ್ನು ಸರದಿಯಂತೆ ಮತಗಟ್ಟೆಯ ಒಳಗೆ ಬಿಡಬೇಕು. ಪುರುಷ ಮತದಾರರಿಗಾಗಲೀ ಅಥವಾ ಮಹಿಳಾ ಮತದಾರರಿಗಾಗಲೀ ಒಂದಕ್ಕಿಂತ ಹೆಚ್ಚಿನ ಸಾಲುಗಳನ್ನು ಮಾಡಲು ಅವಕಾಶಕೊಡಕೂಡದು. ಆದಾಗ್ಯೂ, ಪ್ರಿಸೈಡಿಂಗ್ ಆಫೀಸರ್, ಯುಕ್ತವೆಂದು ಭಾವಿಸಿದಲ್ಲಿ ದುರ್ಬಲ ಮತದಾರರು ಮತ್ತು ಕೈಗೂಸುಗಳನ್ನು ಎತ್ತಿಕೊಂಡಿರುವ ಮಹಿಳಾ ಮತದಾರರಿಗೆ ಸಾಲಿನಲ್ಲಿರುವ ಇತರೆ ಮತದಾರರಿಗಿಂತ ಹೆಚ್ಚಿನ ಆದ್ಯತೆ ನೀಡಬಹುದು. ಪೋಲೀಗ್ ಏಜೆಂಟರು ಇದನ್ನು ಆಕ್ಷೇಪಿಸುವಂತಿಲ್ಲ. ಮತಗಟ್ಟೆಗೆ ಮತಹಾಕಲು ಬರುವ ಮಹಿಳಾ

ಮತದಾರರು ಕೆಲವು ದಿನನಿತ್ಯದ ಕೆಲಸ ಮಾಡಬೇಕಾಗಿರುವುದನ್ನು ದೃಷ್ಟಿಯಲ್ಲಿಟ್ಟುಕೊಂಡು ಪ್ರತಿಯೊಬ್ಬ ಪುರುಷ ಮತದಾರನೊಂದಿಗೆ ಇಬ್ಬರು ಮಹಿಳಾ ಮತದಾರರನ್ನು ಮತದಾನದ ಕೇಂದ್ರಕ್ಕೆ ಹೋಗಲು ಅನುಮತಿಸಬಹುದು. ಪ್ರಿಸೈಡಿಂಗ್ ಅಧಿಕಾರಿಯು, ಹಿರಿಯ ನಾಗರಿಕ ಮತದಾರರು ಮತ್ತು ದೈಹಿಕವಾಗಿ ಅಂಗವಿಕಲರಾಗಿರುವ ಮತದಾರರು ಇತರೆ ಮತದಾರರೊಂದಿಗೆ ಸರದಿಯಲ್ಲಿ ಕಾದು ನಿಲ್ಲದೆ, ಅವರು ಮತಗಟ್ಟೆಯನ್ನು ಪ್ರವೇಶಿಸಿದೊಡನೆ ಆದ್ಯತೆಯನ್ನು ನೀಡಲಾಗಿದೆ ಎಂಬುದನ್ನು ನೀವು ಖಚಿತಪಡಿಸಿಕೊಳ್ಳಬೇಕು ಹಾಗೂ ಅವರಿಗೆ ಮತಗಟ್ಟೆಯಲ್ಲಿ ಅಗತ್ಯವಿರಬಹುದಾದ ಎಲ್ಲ ಅವಶ್ಯಕ ನೆರವನ್ನು ಒದಗಿಸಬೇಕು. ಈ ಉದ್ದೇಶಕ್ಕಾಗಿ, ಅಗತ್ಯವಾದಲ್ಲಿ, ಅಂಥ ವ್ಯಕ್ತಿಗಳಿಗೆ ಪ್ರತ್ಯೇಕ ಸರದಿಯನ್ನು ಮಾಡಿಕೊಳ್ಳುವುದಕ್ಕೆ ವ್ಯವಸ್ಥೆಗಳನ್ನು ಮಾಡತಕ್ಕದ್ದು. ಮತಗಟ್ಟೆಯಲ್ಲಿ ಒಳಗೆ ಗಾಲಿ ಕುರ್ಚಿಯನ್ನು ತೆಗೆದುಕೊಂಡು ಬರುವಂಥ ಮತದಾರರಿಗೆ ಸಂಪೂರ್ಣ ಸೌಲಭ್ಯವನ್ನು ಒದಗಿಸಲಾಗಿದೆಯೇ ಎಂಬುದನ್ನು ನೀವು ಖಚಿತಪಡಿಸಿಕೊಳ್ಳಬೇಕು.

**30. ಮತದಾರರನ್ನು ಗುರುತಿಸುವುದು ಹಾಗೂ ಅಳಿಸಲಾಗದ ಶಾಯಿಯನ್ನು ಹಾಕುವುದು**

30.1 ಮತದಾರರ ಪಟ್ಟಿಯ ಗುರುತುಮಾಡಿದ ಹಾಗೂ ಮತದಾರರ ಗುರುತಿಸುವಿಕೆಯ ಪ್ರಭಾರದಲ್ಲಿರುವ ಮೊದಲ ಪೋಲೀಂಗ್ ಅಧಿಕಾರಿಯು, ಇಆರ್‌ಒ/ ಬಿಎಲ್‌ಒ ಮೂಲಕ ನೀಡಿದ ಮತದಾರರ ಭಾವಚಿತ್ರವಿರುವ ಗುರುತಿನ ಚೀಟಿಯ ಸಹಾಯದೊಂದಿಗೆ ಮತದಾರರ ಗುರುತನ್ನು ಸ್ಥಾಪಿಸಬೇಕು. ಚುನಾವಣಾ ಆಯೋಗವು, ಮತದಾರರ ಭಾವಚಿತ್ರವನ್ನೊಳಗೊಂಡ ಮತದಾರರ ಚೀಟಿಗಳು  ಭಾವಚಿತ್ರದ ಪಟ್ಟಿಯಲ್ಲಿ ಲಭ್ಯವಿದ್ದಲ್ಲಿ, ಜಿಲ್ಲಾಡಳಿತವು ಪಟ್ಟಿಯಲ್ಲಿ ಸೇರಿಸಲಾದ ಎಲ್ಲಾ ಮತದಾರರಿಗೆ ವಿತರಿಸಬೇಕೆಂದು ನಿರ್ದೇಶಿಸಿದೆ. ಮತದಾರನನ್ನು ಗುರುತಿಸುವುದಕ್ಕೆ ಸಂಬಂಧಪಟ್ಟ ಆದೇಶಗಳನ್ನು ಆಯೋಗವು ಹೊರಡಿಸಿದೆ. ಮತದಾರರ ಭಾವಚಿತ್ರವಿರುವ ಚೀಟಿಯು ಗುರುತಿಸುವ ಅನುಮೋದಿತ ದಾಖಲೆಯಾಗಿದೆ. ಆದರೆ, ಮತದಾರನ ಹೆಸರು, ತಂದೆಯ/ತಾಯಿಯ/ಗಂಡನ ಹೆಸರು, ಲಿಂಗ, ವಯಸ್ಸು ಅಥವಾ ವಿಳಾಸ/ಭಾವಚಿತ್ರವಿರುವ ಮತದಾರರ ಗುರುತಿನ ಚೀಟಿಗಳು ಅಥವಾ ಭಾವಚಿತ್ರವಿರುವ ಮತದಾರರ ಗುರುತಿನ ಚೀಟಿಗಳ ಕ್ರಮ ಸಂಖ್ಯೆಗಳಿಗೆ ಸಂಬಂಧಪಟ್ಟ ನಮೂದುಗಳಲ್ಲಿ ಸಣ್ಣಪುಟ್ಟ ವ್ಯತ್ಯಾಸಗಳಿದ್ದರೆ ಅವುಗಳನ್ನು ಕಡೆಗಣಿಸತಕ್ಕದ್ದು ಮತ್ತು ಆ ಚೀಟಿ ಅಥವಾ ಆತನು ಹಾಜರುಪಡಿಸುವ ಪರ್ಯಾಯ ದಸ್ತಾವೇಜಿನ ಮೂಲಕ ಮತದಾರನ ಗುರುತು ಸಾಬೀತುಪಡಿಸುವಷ್ಟರಮಟ್ಟಿಗೆ ಮತ ಚಲಾಯಿಸಲು ಮತದಾರನಿಗೆ ಅವಕಾಶ ನೀಡತಕ್ಕದ್ದು. ಪ್ರಿಸೈಡಿಂಗ್ ಆಫೀಸರ್‌ರವರು,

ಮತದಾರನು ಮತ ಚಲಾಯಿಸಲು ಹೋದ ನಿರ್ದಿಷ್ಟ ಮತಗಟ್ಟೆಗೆ ಸಂಬಂಧಪಟ್ಟ ಮತದಾರರ ಪಟ್ಟಿಯಲ್ಲಿ ಆತನ ಹೆಸರಿರುವುದು ಖಚಿತವಾದರೆ ಇತರ ವಿಧಾನಸಭಾ ಮತಕ್ಷೇತ್ರದ ಚುನಾವಣಾ ರಿಟರ್ನಿಂಗ್ ಆಫೀಸರ್‌ರವರು ನೀಡಿದ ಭಾವಚಿತ್ರವಿರುವ ಮತದಾರರ ಗುರುತಿನ ಚೀಟಿಯನ್ನು ಆತನು ಹಾಜರುಪಡಿಸಿದ್ದರೂ ಸಹ ಅಂಥ ಮತದಾರನಿಗೆ ಆತನ ಮತ ಚಲಾಯಿಸಲು ಅವಕಾಶವನ್ನು ನೀಡತಕ್ಕದ್ದು. ಆದರೆ ಮತದಾರನ ಎಡ ತೋರುಬೆರಳನ್ನು ಪರಿಶೀಲಿಸಿದಾಗ ಆತನು ಒಂದಕ್ಕಿಂತ ಹೆಚ್ಚಿನ ಸ್ಥಳಗಳಲ್ಲಿ ಮತ ಚಲಾಯಿಸದಿರುವುದನ್ನು ಗಮನಿಸಬೇಕು.

30.2 ಅಚ್ಚಳಿಯದ ಶಾಯಿಯನ್ನು ಎಡ ತೋರುಬೆರಳಿನ ಮೊದಲ ಕೀಲು ಜೋಡಣೆಯಿರುವ ಸ್ಥಳದಿಂದ ಉಗುರಿನ ಕೊನೆಯಿಂದ ಉಗುರಿನ ಮೇಲ್ಭಾಗದ ತುದಿಯವರೆಗೆ ಬ್ರಸ್‌ನಿಂದ ಗೆರೆಯಂತೆ ಮತದಾರನ ಎಡಗೈ ತೋರುಬೆರಳಿನ ಮೇಲೆ ಹಾಕತಕ್ಕದ್ದು.

## 31. ಮತಯಂತ್ರಗಳಿಂದ ಮತಗಳನ್ನು ದಾಖಲು ಮಾಡುವ ವಿಧಾನ

31.1 ಪೋಲಿಂಗ್ ಏಜೆಂಟರು, ಇವಿಎಂನ ಮೂಲಕ ಮತಗಳನ್ನು ದಾಖಲು ಮಾಡುವ ವಿಧಾನದ ಬಗ್ಗೆ ಸಂಪೂರ್ಣವಾಗಿ ತಿಳಿದಿರಬೇಕು. ಇದರಿಂದ, ಮತಗಟ್ಟೆಯಲ್ಲಿ ಅನುಸರಿಸುತ್ತಿರುವ ಕಾರ್ಯವಿಧಾನದ ಬಗ್ಗೆ ಅವರು ಅನವಶ್ಯಕ ಆಕ್ಷೇಪಣೆಗಳನ್ನು ಎತ್ತುವುದಕ್ಕೆ ಸಾಧ್ಯವಾಗುವುದಿಲ್ಲ.

31.2 ಮತದಾರರನ್ನು ಗುರುತಿಸುವುದಕ್ಕೆ ಸಂಬಂಧಿಸಿದ ಅಗತ್ಯವಾದ ಪ್ರಕ್ರಿಯೆಗಳನ್ನು ಮುಗಿಸಿದ ನಂತರ, ಮತದಾರನ ಎಡಗೈಯ ತೋರು ಬೆರಳಿಗೆ ಅಚ್ಚಳಿಯದ ಶಾಯಿಯನ್ನು ಹಾಕುವುದು ಮತ್ತು ಮತದಾರರ ನೋಂದಣಿ ರಿಜಿಸ್ಟರ್‌ನ ಮೇಲೆ ಆತನ ಸಹಿ/ಹೆಬ್ಬೆಟ್ಟಿನ ಮುದ್ರೆಯನ್ನೊತ್ತುವುದು (ಮುಂದಿನ ಪ್ಯಾರಾಗಳಲ್ಲಿ ವಿವರವಾಗಿ ವಿವರಿಸಿದೆ) ಸಂಪೂರ್ಣಗೊಂಡ ಮೇಲೆ, ಮತಯಂತ್ರದಲ್ಲಿ ಮತದಾರನು ಮತವನ್ನು ದಾಖಲಿಸಲು ಅವಕಾಶ ನೀಡಿದ ನಂತರ ಮತಯಂತ್ರದ ಕಂಟ್ರೋಲ್ ಯೂನಿಟ್ಟಿನ ಪ್ರಭಾರದಲ್ಲಿರುವ ಪ್ರಿಸೈಡಿಂಗ್ ಆಫೀಸರ್/ ಪೋಲಿಂಗ್ ಆಫೀಸರ್‌ರು ಕಂಟ್ರೋಲ್ ಯೂನಿಟ್ಟಿನ ಮೇಲಿರುವ 'ಬ್ಯಾಲೆಟ್' ಬಟನ್ ಅನ್ನು ಒತ್ತಬೇಕು. ಇದರಿಂದ ಮತದಾರನ ಮತವನ್ನು ದಾಖಲು ಮಾಡಲು ಬ್ಯಾಲೆಟಿಂಗ್ ಯೂನಿಟ್(ಗಳು) ಸಿದ್ಧಗೊಳ್ಳುತ್ತವೆ. ಬ್ಯಾಲೆಟ್ ಬಟನ್ ಅನ್ನು ಒತ್ತಿದಾಗ, ಕಂಟ್ರೋಲ್ ಯೂನಿಟ್ ಮೇಲೆ 'ಬ್ಯುಸಿ' ಎಂಬ ಗುರುತಿನ ದೀಪವು ಕೆಂಪು ಬಣ್ಣದಿಂದ ಪ್ರಜ್ವಲಿಸುತ್ತದೆ. ಅದೇ ಸಮಯದಲ್ಲಿ ವೋಟಿಂಗ್ ಕಂಪಾರ್ಟ್‌ಮೆಂಟಿನಲ್ಲಿ ಇಟ್ಟಿರುವ ಪ್ರತಿಯೊಂದು ಬ್ಯಾಲೆಟಿಂಗ್ ಯೂನಿಟ್ಟಿನ 'ರೆಡಿ' ಎಂಬ ಗುರುತಿನ ದೀಪವು ಹಸಿರು ಬಣ್ಣದಿಂದ ಪ್ರಜ್ವಲಿಸುತ್ತದೆ. ಮತದಾರನು, ತನ್ನ ಮತವನ್ನು ದಾಖಲಿಸುವುದಕ್ಕಾಗಿ, ಬ್ಯಾಲೆಟಿಂಗ್ ಯೂನಿಟ್ಟಿನ ಮೇಲಿರುವ ತಾನು ಆಯ್ಕೆ ಮಾಡಬಯಸುವ

ಅಭ್ಯರ್ಥಿಯ ಹೆಸರು, ಭಾವಚಿತ್ರ ಹಾಗೂ ಚಿಹ್ನೆ ಎದುರಿಗೆ ಒದಗಿಸಿರುವ (ಅಭ್ಯರ್ಥಿಯ ಬಟನ್ ಎಂದು ಕರೆಯಲಾಗಿದೆ) ಬ್ಲೂ ಬಟನ್ ಅನ್ನು ಒತ್ತಬೇಕು. (ಪ್ರತಿಯೊಬ್ಬ ಅಭ್ಯರ್ಥಿಗೆ ಅವರ ಹೆಸರು, ಭಾವಚಿತ್ರ ಹಾಗೂ ಚಿಹ್ನೆಯ ಎದುರಿಗೆ ಪ್ರತ್ಯೇಕವಾಗಿ ಒದಗಿಸಲಾದ ಬ್ಲೂ ಬಟನ್ ಅನ್ನು ಮತದಾರರು ಒತ್ತಿದಾಗ 'ರೆಡಿ' ದೀಪವು ಆರಿಹೋಗುವುದು ಹಾಗೂ ಬ್ಯಾಲೆಟಿಂಗ್ ಯೂನಿಟ್ಟಿನ ಅಭ್ಯರ್ಥಿಯ ಬಟನ್ನಿನ ಪಕ್ಕದಲ್ಲಿ ಒದಗಿಸಿರುವ ಅವರ ಹೆಸರಿನ ಮುಂದಿರುವ ದೀಪವು ಕೆಂಪು ಬಣ್ಣದಲ್ಲಿ ಪ್ರಜ್ವಲಿಸುತ್ತದೆ. ವಿವಿಪ್ಯಾಟ್, ಮತದಾನ ಮಾಡಿದ ಅಭ್ಯರ್ಥಿಯ ಚಿಹ್ನೆ, ಹೆಸರು ಮತ್ತು ಕ್ರಮಸಂಖ್ಯೆಯನ್ನೊಳಗೊಂಡ ಒಂದು ಸಣ್ಣ ಪೇಪರ್ ಸ್ಲಿಪ್ ಅನ್ನು ಮುದ್ರಿಸುತ್ತದೆ. ಅದನ್ನು ಏಳು ಸೆಕೆಂಡುಗಳ ಕಾಲ ವಿವಿಪ್ಯಾಟ್‌ನ ಪಾರದರ್ಶಕ ಕಿಟಕಿಯ ಮೂಲಕ ನೋಡಬಹುದು. ಹಾಜರಿರುವ ಎಲ್ಲರಿಗೂ ಕಂಟ್ರೋಲ್ ಯೂನಿಟ್ಟಿನಿಂದ 'ಬೀಪ್' ಶಬ್ದವು ಕೇಳಿ ಬರುತ್ತದೆ. ಇದಾದ ಕೆಲವು ಕ್ಷಣಗಳ ತರುವಾಯ, ಬ್ಯಾಲೆಟಿಂಗ್ ಯೂನಿಟ್ಟಿನ ಅಭ್ಯರ್ಥಿಯ ಹೆಸರಿನ ಮುಂದಿರುವ ದೀಪದಲ್ಲಿರುವ ಕೆಂಪು ಬೆಳಕು, ಕಂಟ್ರೋಲ್ ಯೂನಿಟ್ಟಿನ ಬೀಪ್ ಲ್ಯಾಂಪ್‌ನಲ್ಲಿನ ಕೆಂಪು ಬೆಳಕು ಮತ್ತು ಬೀಪ್ ಶಬ್ದವು ನಿಂತುಹೋಗುತ್ತದೆ. ಹೀಗೆ ಕಣ್ಣಿಗೆ ಕಾಣುವ ಮತ್ತು ಕಿವಿಗೆ ಕೇಳುವ ಚಿಹ್ನೆಗಳು, ಮತದಾರ ಯಾವ ಅಭ್ಯರ್ಥಿಗೆ ಮತ ನೀಡಲು ಬಟನ್ ಅನ್ನು ಒತ್ತಿರುವನೋ ಅವನಿಗೆ ಮತವು ಕಂಟ್ರೋಲ್ ಯೂನಿಟ್ಟಿನಲ್ಲಿ ದಾಖಲಾಗಿರುವುದನ್ನು ಸೂಚಿಸುವುದು. ಆಗ ಬ್ಯಾಲೆಟಿಂಗ್ ಯೂನಿಟ್ ತನ್ನಿಂದ ತಾನೇ ಲಾಕ್ ಆಗುತ್ತದೆ. ಮುಂದಿನ ಮತದಾರನು ತನ್ನ ಮತವನ್ನು ದಾಖಲು ಮಾಡಲು ಅವಕಾಶ ನೀಡುವುದಕ್ಕಾಗಿ ಮತ್ತೊಮ್ಮೆ ಆ ಕಂಟ್ರೋಲ್ ಯೂನಿಟ್‌ನ 'ಬ್ಯಾಲೆಟ್' ಬಟನ್ ಅನ್ನು ಒತ್ತಿದಾಗ ಮಾತ್ರ ನಂತರದವರ ಮತವನ್ನು ದಾಖಲು ಮಾಡಬಹುದು.

31.3 ವಿದ್ಯುನ್ಮಾನ ಮತಯಂತ್ರದ ಮೂಲಕ ಮತಚಲಾಯಿಸುವ ಕಾರ್ಯವಿಧಾನಕ್ಕೆ ಸಂಬಂಧಪಟ್ಟಂತೆ ಯಾರೇ ಮತದಾರನಿಗೆ ಸರಿಯಾದ ಅರಿವಿಲ್ಲದಿದ್ದ ಸಂದರ್ಭದಲ್ಲಿ, ಪ್ರಿಸೈಡಿಂಗ್ ಆಫೀಸರ್‌ರವರು ಮತದಾರನಿಗೆ ನೆರವಾಗಲು ವೋಟಿಂಗ್ ಕಂಪಾರ್ಟ್‌ಮೆಂಟ್‌ನೊಳಗೆ ಪ್ರವೇಶಿಸದೆ ಮತಗಟ್ಟೆಯಲ್ಲಿ ಇಟ್ಟಿರುವ ಕಾರ್ಡ್‌ಬೋರ್ಡ್ ಇವಿಎಂನ ಮುಖಾಂತರ ಮತಯಂತ್ರದಲ್ಲಿ ಮತ ಚಲಾಯಿಸುವ ಕಾರ್ಯವಿಧಾನವನ್ನು ಪ್ರದರ್ಶಿಸತಕ್ಕದ್ದು. ಪೋಲಿಂಗ್ ಏಜೆಂಟನು ಮತದಾರರಿಗೆ ಸಹಾಯ ಮಾಡಲು ಮತದಾನ ಕಂಪಾರ್ಟ್‌ಮೆಂಟ್‌ನೊಳಗೆ ಹೋಗಬಾರದು.

**32. ಮತಗಟ್ಟೆಯಲ್ಲಿ ಮತದಾನದ ಪ್ರಕ್ರಿಯೆ**

ಮತದಾನದ ಪ್ರಕ್ರಿಯೆಯ ಸಂಕ್ಷಿಪ್ತ ವಿವರ ಈ ಕೆಳಕಂಡಂತಿದೆ:–

32.1 ಮತದಾರನು ಮತಗಟ್ಟೆಯನ್ನು ಪ್ರವೇಶಿಸಿದ ಮೇಲೆ ನೇರವಾಗಿ ಮೊದಲನೇ ಪೋಲಿಂಗ್ ಆಫೀಸರ್ ಬಳಿಗೆ ಹೋಗುತ್ತಾನೆ. ಈ ಆಫೀಸರ್‌ರವರು ಮತದಾರನನ್ನು ಗುರ್ತಿಸುವ ಹಾಗೂ ಮತದಾರರ (ಮಾರ್ಕ್ಡ್) ಅಧಿಕೃತ ಪಟ್ಟಿಯ ಪ್ರಭಾರವನ್ನು ಹೊಂದಿರುತ್ತಾರೆ. ಅವರ ಗುರುತು ಖಚಿತವಾದ ನಂತರ ಹಾಗೂ ಯಾರೇ ಪೋಲಿಂಗ್ ಏಜೆಂಟರಿಂದ ಅವರ ಗುರುತಿನ ಬಗ್ಗೆ ಆಕ್ಷೇಪಣೆ ಕಂಡುಬರದಿದ್ದಲ್ಲಿ ಮತದಾರನ ಎಡಗೈಯ ತೋರು ಬೆರಳಿನ ಮೇಲೆ ಎರಡನೇ ಪೋಲಿಂಗ್ ಆಫೀಸರ್‌ರವರು ಮೇಲಿನ 30.2ನೇ ಪ್ಯಾರಾದಲ್ಲಿ ವಿವರಿಸಿದಂತೆ ಅಚ್ಚಳಿಯದ ಶಾಯಿಯಿಂದ ಗುರುತನ್ನು ಹಾಕುತ್ತಾರೆ. 'ಮತದಾರರ ರಿಜಿಸ್ಟರು' (ನಮೂನೆ 17ಎ)ನ ಪ್ರಭಾರದಲ್ಲಿಯೂ ಸಹ ಇರುವ ಈ ಎರಡನೇ ಪೋಲಿಂಗ್ ಆಫೀಸರರು ಮತದಾರರ ರಿಜಿಸ್ಟರಿನಲ್ಲಿ (ನಮೂನೆ 17ಎ) ನಮೂದುಗಳನ್ನು ಮಾಡಿಕೊಳ್ಳುವುದಕ್ಕೆ ಮೊದಲು ಮತದಾರನು ಮತಗಟ್ಟೆಯನ್ನು ಬಿಡುವುದಕ್ಕೆ ಮುಂಚೆ ಅಚ್ಚಳಿಯದ ಶಾಯಿಯ ಗುರುತು ಒಣಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ರಿಜಿಸ್ಟರಿನ 2ನೇ ಕಾಲಂನಲ್ಲಿರುವಂತೆ ಮತದಾರನ ಕ್ರಮಸಂಖ್ಯೆಯನ್ನು ಬರೆದುಕೊಂಡ ನಂತರ ಅದೇ ರಿಜಿಸ್ಟರ್‌ನ ಮೂರನೇ ಕಾಲಂನಲ್ಲಿ ಮತದಾರನಿಗೆ ಸಂಬಂಧಿಸಿದ ನಮೂದುಗಳ ಎದುರಿಗೆ ಮತದಾರರ ಸಹಿ ಅಥವಾ ಹೆಬ್ಬೆಟ್ಟಿನ ಗುರುತನ್ನು ಆ ಪೋಲಿಂಗ್ ಆಫೀಸರ್‌ರು ಪಡೆಯುತ್ತಾರೆ. ಈ ಕೆಳಗಿನ ನಮೂನೆಯಂತೆ ಮತದಾರರಿಗಾಗಿ ಮತದಾರರ ಸ್ಲಿಪ್ಪನ್ನು ಸಹ ಎರಡನೇ ಪೋಲಿಂಗ್ ಆಫೀಸರ್‌ರವರು ಸಿದ್ಧಪಡಿಸುತ್ತಾರೆ. ನಮೂನೆ 17ಎ (ಮತದಾರರ ರಿಜಿಸ್ಟರ್)ಯ (3)ನೇ ಅಂಕಣದಲ್ಲಿ ಗುರುತು ದಸ್ತಾವೇಜಿನ ಕೊನೆಯ ನಾಲ್ಕು ಸಂಖ್ಯೆಗಳನ್ನು ನಮೂದಿಸತಕ್ಕದ್ದು. ಮತದಾರರು ಎಪಿಕ್ ಅಥವಾ ದೃಢೀಕರಣ ಭಾವಚಿತ್ರವುಳ್ಳ ಮತದಾರರ ಚೀಟಿ ಆಧಾರದ ಮೇಲೆ ಮತ ಚಲಾವಣೆ ಮಾಡಿದ ಸಂದರ್ಭದಲ್ಲಿ, ಸಂಬಂಧಪಟ್ಟ ಅಂಕಣದಲ್ಲಿ ಅನುಕ್ರಮವಾಗಿ ಇಪಿ (ಎಪಿಕ್ ಎಂದು ಸೂಚಿಸುವ) ಹಾಗೂ ವಿಎಸ್ (ಭಾವಚಿತ್ರವುಳ್ಳ ಮತದಾರರ ಚೀಟಿ ಎಂದು ಸೂಚಿಸುವ) ಎಂದು ಬರೆದರೆ ಸಾಕು ಹಾಗೂ ಎಪಿಕ್ ಅಥವಾ ಭಾವಚಿತ್ರವುಳ್ಳ ಮತದಾರರ ಚೀಟಿಯ ಸಂಖ್ಯೆಯನ್ನು ಬರೆಯುವುದು ಅಗತ್ಯವಿರುವುದಿಲ್ಲ. ಆದಾಗ್ಯೂ, ಮತದಾರರು ಆಯೋಗ ಸೂಚಿಸಿದ ಯಾವುದೇ ಪರ್ಯಾಯ ದಸ್ತಾವೇಜುಗಳ ಆಧಾರದ ಮೇಲೆ ಮತ ಚಲಾಯಿಸುವ ಸಂದರ್ಭದಲ್ಲಿ, ಆ ದಸ್ತಾವೇಜಿನ ಕೊನೆಯ ನಾಲ್ಕು ಸಂಖ್ಯೆಗಳನ್ನು ಬರದಿಟ್ಟುಕೊಳ್ಳತಕ್ಕದ್ದು. ಮತದಾರರು ಹಾಜರುಪಡಿಸಿದ ದಸ್ತಾವೇಜಿನ ವಿಧವನ್ನು ಸಹ ಅದರಲ್ಲಿ ನಮೂದಿಸಬೇಕು. ಆತನಿಗೆ

ಸಂಬಂಧಿಸಿದ ನಮೂದಿನ ಮುಂದೆ ಸದರಿ ರಿಜಿಸ್ಟರಿನ ಅಂಕಣ (4)ರಲ್ಲಿ ಮತದಾರರ ಸಹಿ ಅಥವಾ ಹೆಬ್ಬೆಟ್ಟು ಗುರುತನ್ನು ಪಡೆಯಬೇಕು. ಮತದಾರನು ಸಲ್ಲಿಸಿದ ಎಪಿಕ್/ ದಾಖಲೆಯ ಗುರುತುಗಳ ಕೊನೆಯ ನಾಲ್ಕು ಅಂಕಿಗಳನ್ನು ಮತದಾರರ ರಿಜಿಸ್ಟರಿನ (ನಮೂನೆ 17ಎ)ಯ **'ಷರಾ'** ಅಂಕಣದ (ಅಂಕಣ–5)ರಲ್ಲಿ ನಮೂದಿಸಬೇಕು. ಎರಡನೇ ಪೋಲಿಂಗ್ ಅಧಿಕಾರಿಯು ಆನಂತರ, ಮತದಾರನಿಗಾಗಿ ಮತದಾನ ಚೀಟಿಯನ್ನು ಸಿದ್ಧಪಡಿಸವರು.

32.2 ಆನಂತರ ಮತದಾರನು ಮತಯಂತ್ರದ ಕಂಟ್ರೋಲ್ ಯುನಿಟ್‌ನ ಜವಾಬ್ದಾರಿಯನ್ನು ಹೊಂದಿರುವ ಪ್ರಿಸ್ಶೈಡಿಂಗ್ ಅಧಿಕಾರಿ ಅಥವಾ ಮೂರನೆಯ ಪೋಲಿಂಗ್ ಅಧಿಕಾರಿಯ ಬಳಿ ಹೋಗುತ್ತಾರೆ. ಸಂದರ್ಭಾನುಸಾರ, ಪ್ರಿಸ್ಶೈಡಿಂಗ್ ಆಫೀಸರ್‌ರು / ಮೂರನೇ ಪೋಲಿಂಗ್ ಆಫೀಸರ್‌ರು, ಮತದಾರರ ಎಡಗೈಯ ತೋರು ಬೆರಳಿನ ಮೇಲಿರುವ ಅಚ್ಚಳಿಯದ ಶಾಯಿಯ ಗುರುತನ್ನು ಪರಿಶೀಲಿಸಿ ಈ ಮೇಲೆ ಹೇಳಿದ ಮತದಾರರ ಸ್ಲಿಪ್ಪಿನ ಆಧಾರದ ಮೇಲೆ ಮತದಾರ ಮತಯಂತ್ರದಲ್ಲಿ ತನ್ನ ಮತವನ್ನು ಚಲಾಯಿಸಲು ಅನುಮತಿಸುತ್ತಾರೆ. ಮತಯಂತ್ರದ ಮೂಲಕ ಮತವನ್ನು ಚಲಾಯಿಸುವ ಕಾರ್ಯವಿಧಾನವನ್ನು ಈ ಹಿಂದಿನ ಪ್ಯಾರಾಗಳಲ್ಲಿ ವಿವರಿಸಲಾಗಿದೆ.

32.3 ಮತದಾರರ ರಿಜಿಸ್ಟರಿನಲ್ಲಿ ಅವರ ಹೆಸರುಗಳು ನೋಂದಣಿಯಾಗಿರುವ ಕ್ರಮದಲ್ಲಿಯೇ ಮತದಾರರು ಮತಯಂತ್ರದಲ್ಲಿ ತಮ್ಮ ಮತಗಳನ್ನು ಚಲಾಯಿಸಲು ಅನುಮತಿ ನೀಡಲಾಗುತ್ತದೆ. ಯಾವುದೇ ವಿಶೇಷ ಸಂದರ್ಭ ಅಥವಾ ಅನಿರೀಕ್ಷಿತ ಅಥವಾ ಅನಿವಾರ್ಯ ಕಾರಣದಿಂದ, ಯಾವೊಬ್ಬ ಮತದಾರನ ಸಂಬಂಧದಲ್ಲಿ ಅಂತಹ ಖಚಿತ ಕ್ರಮವನ್ನು ಅನುಸರಿಸಲು ಸಾಧ್ಯವಾಗದಿದ್ದರೆ, ಆತನು ಮತ ಚಲಾಯಿಸಿದ ಖಚಿತವಾದ ಕ್ರಮಸಂಖ್ಯೆಯನ್ನು ತೋರಿಸುವ ಒಂದು ಸೂಕ್ತ ನಮೂದನ್ನು ಮತದಾರರ ರಿಜಿಸ್ಟರಿನ ಷರಾ ಅಂಕಣದಲ್ಲಿ ಸಂಬಂಧಪಟ್ಟ ವ್ಯಕ್ತಿಯ ಹೆಸರಿನ ಮುಂದೆ ದಾಖಲಿಸಬೇಕು. ಇದರಿಂದ ಯಾರ ಕ್ರಮಸಂಖ್ಯೆಗಳು ವ್ಯತ್ಯಾಸಗೊಳ್ಳುವುದೋ ಅಂಥ ತರುವಾಯದ ಮತದಾರರ ಸಂಬಂಧದಲ್ಲಿ ಕೂಡ ಅದೇ ರೀತಿಯ ನಮೂದುಗಳನ್ನು ಮಾಡತಕ್ಕದ್ದು.

32.4 ಮತದಾರನ ಎಡಗೈ ತೋರು ಬೆರಳಿನಲ್ಲಿ ಅಚ್ಚಳಿಯದ ಶಾಯಿಯ ಸ್ಪಷ್ಟವಾದ ಗುರುತಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಮತದಾರನ ಎಡ ತೋರು ಬೆರಳನ್ನು ಪರಿಶೀಲಿಸಿ ನೋಡುವ ಕೆಲಸವನ್ನು ಪ್ರಿಸ್ಶೈಡಿಂಗ್ ಆಫೀಸರ್‌ರು ತನ್ನ ತಂಡದ ಮತ್ತೊಬ್ಬ ಸದಸ್ಯರಿಗೆ ವಹಿಸಿಕೊಡಬಹುದು. ಆತನು ಅಂತಹ ಗುರುತು ಸ್ಪಷ್ಟವಾಗಿ ಕಣ್ಣಿಗೆ ಕಾಣುವುದಿಲ್ಲ ಇಲ್ಲವೇ ಅಚ್ಚಳಿಯದ ಶಾಯಿಯನ್ನು ಒರೆಸಿ ಹಾಕಲಾಗಿದೆ ಎಂಬುದನ್ನು ಗುರುತಿಸಿದರೆ ಆತ ಮತದಾರನ ಎಡಗೈ ತೋರು ಬೆರಳಿಗೆ ಮತ್ತೊಮ್ಮೆ ಅಚ್ಚಳಿಯದ ಶಾಯಿಯಿಂದ ಗುರುತು ಮಾಡಬೇಕು.

## 33. ಮತದಾರರ ಗುರುತನ್ನು ಪ್ರಶ್ನಿಸುವುದು

33.1. ಮೇಲೆ ಹೇಳಿರುವಂತೆ, ನಕಲಿ ಮತದಾರರನ್ನು ಕಂಡುಹಿಡಿಯುವುದು ಮತ್ತು ಅಂಥವರಿಂದ ಮತದಾನ ಆಗದಂತೆ ತಡೆಯುವುದರಲ್ಲಿ ಪ್ರಿಸೈಡಿಂಗ್ ಆಫೀಸರ್‌ರವರಿಗೆ ಸಹಾಯ ಮಾಡುವುದು ಪೋಲಿಂಗ್ ಏಜೆಂಟ್‌ನ ಮುಖ್ಯ ಕರ್ತವ್ಯಗಳಲ್ಲಿ ಒಂದು. ಆದ್ದರಿಂದ, ಪೋಲಿಂಗ್ ಏಜೆಂಟನಿಗೆ, ಮತದಾರನೆಂದು ಬರುವ ವ್ಯಕ್ತಿಯು, ಮತದಾರನಲ್ಲವೆಂದು ಆತನಿಗೆ ವೈಯಕ್ತಿಕವಾದ ಪರಿಚಯವಿದ್ದರೆ, ಆತನು ಆ ಮತದಾರನನ್ನು ಪ್ರಶ್ನಿಸಲು ಅಧಿಕಾರ ಇದೆ. ಆದರೆ, ಪೋಲಿಂಗ್ ಏಜೆಂಟ್‌ರು ಗೊತ್ತುಗುರಿಯಿಲ್ಲದೆ ಪ್ರಶ್ನಿಸಕೂಡದು. ಏಕೆಂದರೆ, ಇಂತಹ ಸಂದರ್ಭಗಳಲ್ಲಿ ಕೆಲವು ಮತದಾರರು ಬೇಸರಗೊಂಡು ಮತದಾನ ನೀಡದೇ ಸರತಿ ಸಾಲನ್ನು ಬಿಟ್ಟುಹೋಗುವ ಸಾಧ್ಯತೆಯೂ ಇರುತ್ತದೆ ಮತ್ತು ಮತದಾನವು ಸುಸೂತ್ರವಾಗಿ ಮುಂದುವರಿಯದೇ ವಿಳಂಬಕ್ಕೆ ಎಡೆಮಾಡಿಕೊಡುತ್ತದೆ.

## 34. ಮೃತ, ಮತದಾರರ ಪಟ್ಟಿಯಲ್ಲಿ ಹೆಸರಿಲ್ಲದ ಮತ್ತು ನಕಲಿ ಮತದಾರನೆಂದು ಆಪಾದಿಸಲಾದ ಮತದಾರರ ಪಟ್ಟಿ

34.1 ಭಾರತ ಚುನಾವಣಾ ಆಯೋಗವು, ಮತದಾನದ ದಿನದಂದು ಕೆಲವು ವ್ಯಕ್ತಿಗಳು ಮೃತರಾದ ಅಥವಾ ಸ್ಥಳಾಂತರಗೊಂಡ ಮತದಾರರ ಹೆಸರಿನಲ್ಲಿ ಮತ ಚಲಾಯಿಸಲು ಮೆತದಾನ ಕೇಂದ್ರಕ್ಕೆ ಬಂದಿರುವುದನ್ನು ಗಮನಿಸಿದೆ. ಕಾರ್ಯಕರ್ತರು ಮತ್ತು ಏಜೆಂಟರುಗಳು ಮತಗಳಿಗಾಗಿ ಚುನಾವಣಾ ಪ್ರಚಾರ ನಡೆಸುವಾಗ, ಯಾವ ಮತದಾರರ ಹೆಸರುಗಳು ಮತದಾರರ ಪಟ್ಟಿಯಲ್ಲಿ ಕಂಡುಬಂದಿದೆಯೋ ಆ ಕೆಲವು ವ್ಯಕ್ತಿಗಳು ಮೃತರಾಗಿರುವರೆಂದು ಹೆಚ್ಚು ಅಥವಾ ಕಡಿಮೆ ಕಾಲದಲ್ಲಿ ಖಾಯಂ ಆಗಿ ಆ ಸ್ಥಳವನ್ನು ಬಿಟ್ಟಿದ್ದಾರೆಂಬುದನ್ನೂ ಗುರುತಿಸಿದ್ದಾರೆ. ಕಾರ್ಯಕರ್ತರು ಪ್ರತ್ಯೇಕವಾಗಿ ಪ್ರತಿಯೊಂದು ಮತದಾನ ಕೇಂದ್ರದ ಅಂಥ ಮೃತರ ಗೈರುಹಾಜರಾದ ಅಥವಾ ಸ್ಥಳಾಂತರಗೊಂಡ ಮತ್ತು ನಕಲಿ ಮತದಾರರ ಪಟ್ಟಿಯನ್ನು ಸಿದ್ಧಪಡಿಸುವಂತೆ ಕೇಳಬಹುದು. ಸ್ಪರ್ಧಿಸಿರುವ ಎಲ್ಲಾ ಅಭ್ಯರ್ಥಿಗಳು ಅಂಥ ಮತದಾರರ ಪಟ್ಟಿಯನ್ನು ತೆಗೆದುಕೊಳ್ಳಲು ಸಾಧ್ಯವಾಗದಲ್ಲಿ ಹಾಗೂ ಚುನಾವಣಾ ಕ್ಷೇತ್ರದಲ್ಲಿ ಮತದಾನ ನಡೆಯುವ ಮೊದಲ ದಿನಕ್ಕಿಂತ ಮೊದಲು ಕನಿಷ್ಠ 7 ದಿನಗಳಲ್ಲಿ ರಿಟರ್ನಿಂಗ್ ಅಧಿಕಾರಿಗೆ ಅಂಗೀಕೃತ ಪಟ್ಟಿಯನ್ನು ಒಪ್ಪಿಸುವ ವ್ಯವಸ್ಥೆ ಮಾಡುವರು. ಸ್ಪರ್ಧಿಸಿರುವ ಎಲ್ಲಾ ಅಭ್ಯರ್ಥಿಗಳು ಈ ಪಟ್ಟಿಯನ್ನು ಅಂಗೀಕರಿಸದಿದ್ದರೂ ಸಹ, ಸಾಧ್ಯವಾದಷ್ಟು ಅವರು ಅಂಗೀಕಾರವನ್ನು ಪಡೆದುಕೊಂಡ ನಂತರ ಅಥವಾ ಅದರಲ್ಲಿ ವಿಫಲರಾದವರನ್ನು ಸೇರಿಸಿ, ಆ ಪಟ್ಟಿಯನ್ನು ರಿಟರ್ನಿಂಗ್ ಅಧಿಕಾರಿಗೆ ಪೂರೈಸಬೇಕು.

34.2 ಪೋಲಿಂಗ್ ಏಜೆಂಟ್‌ರ ಬಳಿ ಮತದಾರರ ಪಟ್ಟಿಯ ಪ್ರತಿ ಮತ್ತು ತನ್ನ ಪಕ್ಷದ ಉಮೇದುವಾರನು ಅಥವಾ ಅವನ ಪಕ್ಷವು ಸಿದ್ಧಪಡಿಸಿರಬಹುದಾದಂತಹ ಮೃತರ, ಮತದಾರರ ಪಟ್ಟಿಯಲ್ಲಿ ಹೆಸರಿಲ್ಲದ ಮತ್ತು ಅನುಮಾನಾಸ್ಪದರೆಂದು ಆಪಾದಿಸಲಾದ ಮತದಾರರ ಹೆಸರುಗಳು ಇರುವ ಪಟ್ಟಿಯ ಒಂದು ಪ್ರತಿ ಇರಬೇಕು. ಆ ಪಟ್ಟಿಯ ಒಂದು ಪ್ರತಿಯನ್ನು ಪ್ರಿಸೈಡಿಂಗ್ ಆಫೀಸರ್‌ರಿಗೂ ಸಹ ಸಲ್ಲಿಸಬೇಕು. ಅಂತಹ ಪಟ್ಟಿಯಲ್ಲಿ ನಮೂದಿಸಿರುವ ಹೆಸರಿನ ಯಾರೇ ವ್ಯಕ್ತಿಯು ತಾನು ಮತದಾರನೆಂದು ಹೇಳಿದರೆ, ಪೋಲಿಂಗ್ ಏಜೆಂಟ್‌ನು ಆ ಬಗ್ಗೆ ಪ್ರಿಸೈಡಿಂಗ್ ಆಫೀಸರ್ ಅವರ ಗಮನವನ್ನು ಸೆಳೆಯಬೇಕು. ಇದು ಔಪಚಾರಿಕ ಆಕ್ಷೇಪಣೆ ಎನಿಸುವುದಿಲ್ಲ. ಪ್ರಿಸೈಡಿಂಗ್ ಆಫೀಸರ್‌ರವರು ಆ ವ್ಯಕ್ತಿಗಳ ಗುರುತನ್ನು ಪರೀಕ್ಷಿಸುತ್ತಾರೆ.

34.3 ಮತದಾನದ ಸಮಯದಲ್ಲಿ ನಕಲು ಮತದಾರರನ್ನು ತಡೆಗಟ್ಟುವ ಸಲುವಾಗಿ ಆಯೋಗವು ಈ ಮುಂದಿನ ನಿರ್ದೇಶನಗಳನ್ನು ಹೊರಡಿಸಿದೆ:

(ಎ) ಮತದಾರರ ಪಟ್ಟಿಯಲ್ಲಿ ಹೆಸರಿಲ್ಲದ, ಸ್ಥಳಾಂತರಗೊಂಡ ಮತ್ತು ಮೃತ (ಎಎಸ್‌ಡಿ) ಮತದಾರರ ಪಟ್ಟಿಯನ್ನು ಮತಗಟ್ಟೆವಾರು ಸಿದ್ಧಪಡಿಸಬೇಕು ಮತ್ತು ಮತದಾರರ ಪಟ್ಟಿಯಲ್ಲಿ ಹೆಸರಿಲ್ಲದ, ಸ್ಥಳಾಂತರಗೊಂಡ ಮತ್ತು ಮೃತ ಮತದಾರರ ಪ್ರತ್ಯೇಕ ಪಟಟಿಯನ್ನು ಪ್ರತಿಯೊಬ್ಬ ಪ್ರಿಸೈಡಿಂಗ್ ಅಧಿಕಾರಿಗೂ ಒದಗಿಸಿರುವುದನ್ನು ಖಚಿತಪಡಿಸಬೇಕು.

(ಬಿ) ಮತದಾನದ ದಿನದಂದು ಮತಚಲಾಯಿಸುವ ಸಲುವಾಗ ಅಂಥ ಪಟ್ಟಿಯಲ್ಲಿರುವ ಮತದಾರನು, ಆಯೋಗವು ಅನುಮತಿಸಿದರೆ ಯಾವುದಾದರೊಂದು ಮತದಾರರ ಭಾವಚಿತ್ರವಿರುವ ಗುರುತಿನ ಚೀಟಿಯನ್ನು (ಎಪಿಕ್) ಅಥವಾ ಭಾವಚಿತ್ರವಿರುವ ಮತದಾರರ ಚೀಟಿ ಅಥವಾ ಪರ್ಯಾಯ ಭಾವಚಿತ್ರವಿರುವ ದಾಖಲೆಗಳಲ್ಲಿ ಯಾವುದೇ ಒಂದನ್ನು ಹಾಜರುಪಡಿಸಬೇಕು. ಪ್ರಿಸೈಡಿಂಗ್ ಅಧಿಕಾರಿಯು, ವೈಯಕ್ತಿಕವಾಗಿ ಗುರುತಿಸುವ ದಾಖಲೆಯನ್ನು ಮತ್ತು 17ಎ ನಮೂನೆಯಲ್ಲಿರುವ ಮತದಾರರ ರಿಜಿಸ್ಟರಿನಲ್ಲಿ ಸಂಬಂಧಪಟ್ಟ ಪೋಲಿಂಗ್ ಅಧಿಕಾರಿಯು ಯುಕ್ತವಾಗಿ ದಾಖಲಿಸಿದ ವಿವರಗಳನ್ನು ಪರಿಶೀಲಿಸತಕ್ಕದ್ದು.

(ಸಿ) ಎಎಸ್‌ಡಿ (ಮತದಾರರ ಪಟ್ಟಿಯಲ್ಲಿ ಹೆಸರಿಲ್ಲದ, ಸ್ಥಳಾಂತರಗೊಂಡ ಮತ್ತು ಮೃತ) ಪಟ್ಟಿಯಲ್ಲಿ ನಮೂದಿಸಲಾದ ಮತದಾರನ ಮತದಾನದ ಸಂಬಂಧದಲ್ಲಿ ಗೊಂದಲವುಂಟಾದಲ್ಲಿ, ಅಂಥ ಮತದಾರರ ಹೆಬ್ಬೆಟ್ಟಿನ ಗುರುತನ್ನು ಸಂಪೂರ್ಣವಾಗಿ ಪರಿಶೀಲಿಸಿದ ತರುವಾಯ, ಮತದಾರರ ರಿಜಿಸ್ಟರಿನ (ನಮೂನೆ 17ಎ) ಸಹಿ'/ಹೆಬ್ಬೆಟ್ಟಿನ

ಗುರುತು' ಅಂಕಣದಲ್ಲಿ ಹೆಚ್ಚಿನ ಸಹಿಯನ್ನು ಇದರೊಂದಿಗೆ ಪಡೆಯತಕ್ಕದ್ದು. ಹೆಬ್ಬೆಟ್ಟಿನ ಗುರುತನ್ನು ಅಕ್ಷರಸ್ಥನಾಗಿರುವ ಮತ್ತು ಸಹಿ ಮಾಡಬಹುದಾದ ಮತದಾರನ ಸಂದರ್ಭದಲ್ಲಿ ಇದರೊಂದಿಗೆ ಸಹಿ ಕೂಡ ಇರತಕ್ಕದ್ದು.

(ಡಿ) ಪ್ರಿಸೈಡಿಂಗ್ ಅಧಿಕಾರಿಯವರು ಅಂಥ ಪ್ರಕರಣಗಳ ದಾಖಲೆಯನ್ನು ನಿರ್ವಹಿಸತಕ್ಕದ್ದು ಹಾಗೂ ಪರಿಶೀಲನೆಗಾಗಿ 17ಎ ನಮೂನೆಯಲ್ಲಿ ಇಡಲಾಗಿರುವ ಮತದಾರರ ಪಟ್ಟಿಯಲ್ಲಿ ಹೆಸರಿಲ್ಲದ ಮತ್ತು ಸ್ಥಳಾಂತರಗೊಂಡ ಮತದಾರರ ಪಟ್ಟಿಯ ಹಾಗೆ ಕೆಲವು ಮತದಾರರನ್ನು ಯುಕ್ತವಾಗಿ ಪರಿಶೀಲಿಸಿದ ನಂತರ ಮತ ಹಾಕಲು ಅನುಮತಿಸಿದ ಬಗ್ಗೆ ಮತದಾನದ ಕೊನೆಯಲ್ಲಿ ಪ್ರಮಾಣಪತ್ರವನ್ನು ನೀಡತಕ್ಕದ್ದು.

(ಇ) ಸಾಧ್ಯವಾದಾಗಲೆಲ್ಲಾ ಅಂಥ ಮತದಾರರ ಭಾವಚಿತ್ರವನ್ನು ತೆಗೆಯಬಹುದು ಮತ್ತು ದಾಖಲೆಗಳನ್ನು ಇಡಬಹುದು.

(ಎಫ್) ಚುನಾವಣಾ ಆಯೋಗವು, ಮತದಾನ ಕೇಂದ್ರದಲ್ಲಿ ಮತ ಚಲಾಯಿಸುವ ಸಮಯದಲ್ಲಿ ವಿದೇಶದಲ್ಲಿರುವ ಮತದಾರರ ಗುರುತನ್ನು ಅವರು ಹಾಜರುಪಡಿಸಿದ ಮೂಲ ಪಾಸ್‌ಪೋರ್ಟ್‌ಗಳ ಆಧಾರದ ಮೇಲೆ ಮಾತ್ರವೇ ಅವರು ಮತವನ್ನು ಚಲಾಯಿಸಬೇಕೆಂದು ನಿರ್ದೇಶಿಸಿದೆ.

## 35. ಮತದಾರರ ಗುರುತಿನ ಬಗ್ಗೆ ಔಪಚಾರಿಕವಾಗಿ ಪ್ರಶ್ನಿಸುವುದು

35.1 ಪ್ರಿಸೈಡಿಂಗ್ ಆಫೀಸರ್‌ರವರು ಪಟ್ಟಿಯನ್ನು ಪರಿಗಣಿಸದಿದ್ದರೆ, ಪೋಲಿಂಗ್ ಏಜೆಂಟನು, ಆತ/ಆಕೆಯು ನೀಡಿದ ಸಂಬಂಧಪಟ್ಟ ವ್ಯಕ್ತಿಯು ನಕಲಿ ಮತದಾರನೆಂದು ನಿಮಗೆ ಮನವರಿಕೆಯಾದರೆ ಆ ವ್ಯಕ್ತಿಯ ಗುರುತನ್ನು ಔಪಚಾರಿಕವಾಗಿ ನೀವು ಪ್ರಶ್ನಿಸಬಹುದು.

35.2 ಮೃತರಾದವರ, ಮತದಾರರ ಪಟ್ಟಿಯಲ್ಲಿ ಹೆಸರಿಲ್ಲದ ಮತ್ತು ನಕಲಿ ಮತದಾರನೆಂದು ಆಪಾದಿಸಲಾದ ಮತದಾರರ ಮೇಲ್ಕಂಡ ಪಟ್ಟಿಯಲ್ಲಿ ಮತದಾರನ ಹೆಸರು ನಮೂದಾಗದೇ ಇದ್ದರೂ ಸಹ ಮತದಾರನೆಂದು ಹೇಳುತ್ತಿರುವ ವ್ಯಕ್ತಿಯು ನಿಜವಾದ ಮತದಾರನಲ್ಲವೆಂದು ಪೋಲಿಂಗ್ ಏಜೆಂಟನಿಗೆ ವೈಯಕ್ತಿಕವಾಗಿ ಗೊತ್ತಿದ್ದರೆ, ಆತ/ಆಕೆಯು ಆ ವ್ಯಕ್ತಿಯ ಗುರುತನ್ನು ಔಪಚಾರಿಕವಾಗಿ ಪ್ರಶ್ನಿಸಬಹುದು (ಚಾಲೆಂಜ್ ಮಾಡಬಹುದು).

35.3 ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿತವಾಗಿರುವ ಪ್ರತಿಯೊಬ್ಬ ವ್ಯಕ್ತಿಗೆ ಚುನಾವಣೆಯಲ್ಲಿ ಮತ ನೀಡಲು ಹಕ್ಕಿರುತ್ತದೆ. ಮತದಾರನೆಂದು ಹೇಳುವ ವ್ಯಕ್ತಿಯು ನೀಡುವ ಹೆಸರು ಮತ್ತು ಇತರ ವಿವರಗಳು ಸರಿಯಾಗಿ ಇದ್ದರೆ ಮತ್ತು ನಿರ್ದಿಷ್ಟವಾಗಿ ಈ ಚುನಾವಣೆಗೆ ಆಯೋಗವು

ಅನುಮೋದಿಸಿರುವ ಭಾವಚಿತ್ರವಿರುವ ಚುನಾವಣಾ ಗುರುತಿನ ಚೀಟಿ ಅಥವಾ ಪರ್ಯಾಯ ದಸ್ತಾವೇಜುಗಳಲ್ಲಿ ಯಾವುದಾದರೂ ಒಂದನ್ನು ಹಾಜರುಪಡಿಸಿದರೆ ಆತನೇ ಮತದಾರನೆಂದು ಭಾವಿಸಲಾಗುವುದು. ಆದುದರಿಂದ, ನೀವು ಮತದಾರನ ಗುರುತನ್ನು ಚೆನ್ನಾಗಿ ತಿಳಿದಿದ್ದರೆ ಮಾತ್ರ ಪ್ರಶ್ನಿಸಬೇಕೇ ಹೊರತು ಅನ್ಯಥಾ ಅಲ್ಲ.

**36. ಚಾಲೆಂಜ್ ಫೀಜು (ಆಕ್ಷೇಪಣಾ ಶುಲ್ಕ)**

36.1 ಆಕ್ಷೇಪಿಸುವ ವ್ಯಕ್ತಿಯು ನಗದು 2 ರೂ.ಗಳನ್ನು ಸಲ್ಲಿಸುವವರೆಗೆ ಪ್ರಿಸೈಡಿಂಗ್ ಆಫೀಸರ್‌ರವರು ಪೋಲಿಂಗ್ ಏಜೆಂಟ್‌ನ ಯಾವುದೇ ಆಕ್ಷೇಪಣೆಯನ್ನು ಗಮನಕ್ಕೆ ತೆಗೆದುಕೊಳ್ಳುವುದಿಲ್ಲ. ಹಣವನ್ನು ಸಂದಾಯ ಮಾಡಿದ ನಂತರ, ಅದಕ್ಕೆ ಪ್ರಿಸೈಡಿಂಗ್ ಆಫೀಸರ್‌ರವರು ಚುನಾವಣಾ ಆಯೋಗವು ಗೊತ್ತುಪಡಿಸಿರುವ ನಿಗದಿತ ನಮೂನೆಯಲ್ಲಿ ಪ್ರಶ್ನಿಸಿದ ವ್ಯಕ್ತಿಗೆ ಒಂದು ರಸೀತಿಯನ್ನು ಕೊಡುತ್ತಾರೆ.

**37. ಪ್ರಶ್ನಿಸುವ ಬಗ್ಗೆ ಸಂಕ್ಷಿಪ್ತ ವಿಚಾರಣೆ**

37.1 ಪೋಲಿಂಗ್ ಏಜೆಂಟ್‌ನು ಮತದಾರನ ಗುರುತಿನ ಬಗ್ಗೆ ಔಪಚಾರಿಕವಾಗಿ ಪ್ರಶ್ನಿಸಿದಾಗ ಪ್ರಿಸೈಡಿಂಗ್ ಆಫೀಸರ್‌ರವರು, ಪ್ರಶ್ನೆಗೆ ಗುರಿಯಾದವರಿಗೆ, ಅವನು ಖೋಟಾ ಮತದಾರನಾಗಿ ವರ್ತಿಸಿದರೆ ಅದಕ್ಕೆ ವಿಧಿಸಿರುವ ದಂಡನೆ ಬಗ್ಗೆ ಆಕ್ಷೇಪಣೆಗೆ ಗುರಿಯಾಗಿರುವ ವ್ಯಕ್ತಿಗೆ ಎಚ್ಚರಿಕೆ ನೀಡಿ. ಮತದಾರರ ಪಟ್ಟಿಯಲ್ಲಿರುವ ಸಂಬಂಧಿಸಿದ ನಮೂದನ್ನು ಪೂರ್ತಿಯಾಗಿ ಓದಿ ಹೇಳಿ ಮತ್ತು ಆತನ ಹೆಸರು ಮತ್ತು ವಿಳಾಸವನ್ನು ಆಕ್ಷೇಪಿತ ಮತಗಳ ಪಟ್ಟಿಯಲ್ಲಿ (ಪರಿಶಿಷ್ಟ IV) ನಮೂದಿಸಿ, ಅದರ ಮೇಲೆ ಸಹಿ ಮಾಡಲು ಅಥವಾ ಹೆಬ್ಬೆಟ್ಟಿನ ಗುರುತನ್ನು ಹಾಕಲು ಆತನಿಗೆ ತಿಳಿಸಿ. ಆತನು ಹಾಗೆ ಮಾಡಲು ನಿರಾಕರಿಸಿದರೆ ಪ್ರಿಸೈಡಿಂಗ್ ಆಫೀಸರ್‌ರವರು ಆತನಿಗೆ ಮತ ಚಲಾಯಿಸಲು ಅನುಮತಿ ಕೊಡಬೇಡಬಾರದು.

37.2 ಪ್ರಿಸೈಡಿಂಗ್ ಆಫೀಸರ್‌ರವರು ಪ್ರಶ್ನಿತ ಮತಗಳ ಪಟ್ಟಿಯಲ್ಲಿ ನಮೂದನ್ನು ಪೂರ್ಣಗೊಳಿಸಿದ ನಂತರ ಮತ್ತು ಆ ಪಟ್ಟಿಯಲ್ಲಿ ಸಂಬಂಧಪಟ್ಟ ಅಂಕಣದಲ್ಲಿ, ತಾನು ಮತದಾರ ಎಂದು ಹೇಳುತ್ತಿರುವ ವ್ಯಕ್ತಿಯು ಮತದಾರನಲ್ಲವೆಂದು ರುಜುವಾತುಪಡಿಸಲು ಪುರಾವೆ ಹಾಜರುಪಡಿಸುವಂತೆ ಆಕ್ಷೇಪ ಎತ್ತಿರುವ ವ್ಯಕ್ತಿಯನ್ನು ಮೊದಲು ಕೇಳುವರು. ಆಕ್ಷೇಪ ಎತ್ತಿರುವ ವ್ಯಕ್ತಿಯು, ತನ್ನ ಆಕ್ಷೇಪಣೆಗೆ ಸಮರ್ಥನೆಯಾಗಿ ಮೊದಲ ನೋಟಕ್ಕೆ ಕಂಡು ಬರುವ ಪುರಾವೆಯನ್ನು ಒದಗಿಸಲು ತಪ್ಪಿದಲ್ಲಿ, ಪ್ರಿಸೈಡಿಂಗ್ ಆಫೀಸರ್‌ರವರು ಆಕ್ಷೇಪಣೆಯನ್ನು

ತಳ್ಳಿಹಾಕಿ, ಆಕ್ಷೇಪಣೆಗೆ ಒಳಗಾದ ವ್ಯಕ್ತಿಗೆ ಮತ ಚಲಾಯಿಸಲು ಅನುಮತಿ ನೀಡುತ್ತಾರೆ. ತಾನು ಮತದಾರನೆಂದು ಹೇಳಿಕೊಳ್ಳುವ ವ್ಯಕ್ತಿಯು ನಿಜವಾದ ಮತದಾರನಲ್ಲ ಎಂಬುದು ಮೇಲ್ನೋಟಕ್ಕೆ ಕಂಡು ಬರುವಂಥ ಪುರಾವೆಯನ್ನು ಆಕ್ಷೇಪ ಎತ್ತಿದ ವ್ಯಕ್ತಿಯು ನೀಡಿದರೆ ಆ ಆಕ್ಷೇಪಣೆಯನ್ನು ಅಲ್ಲಗೆಳೆಯಲು ಅಂದರೆ ತಾನು ಮತದಾರ ಎಂದು ಹೇಳುತ್ತಿರುವ ವ್ಯಕ್ತಿ ತಾನೇ ಮತದಾರ ಎಂದು ರುಜುವಾತುಪಡಿಸಲು ಪುರಾವೆ ಹಾಜರುಪಡಿಸುವಂತೆ ಆಕ್ಷೇಪಣೆಗೆ ಒಳಗಾದ ವ್ಯಕ್ತಿಗೆ ಹೇಳಿ ಅಂಥ ಸಾಕ್ಷ್ಯದ ಮೂಲಕ ಆತನು ತನ್ನ ಕ್ಲೇಮು ರುಜುವಾತುಪಡಿಸಿದರೆ ಮತ ಚಲಾಯಿಸಲು ಆತನಿಗೆ ಅವಕಾಶ ಕೊಡಲಾಗುವುದು. ಆತನು ಪುರಾವೆ ಒದಗಿಸಲು ತಪ್ಪಿದರೆ, ಆಕ್ಷೇಪಣೆ ರುಜುವಾತಾಗಿದೆಯೆಂದು ನಿರ್ಣಯಿಸಿ, ವಿಚಾರಣೆ ಮಾಡುತ್ತಿರುವಾಗ ನಿಜವಾದ ಸಂಗತಿಯನ್ನು ಗ್ರಾಮಾಧಿಕಾರಿ, ಆಕ್ಷೇಪಕ್ಕೆ ಗುರಿಯಾಗಿರುವ ಮತದಾರನ ನೆರೆಹೊರೆಯವರು ಹಾಗೂ ಮತಗಟ್ಟೆಯಲ್ಲಿ ಹಾಜರಿರುವ ಇತರೆ ಯಾರೇ ವ್ಯಕ್ತಿಯಿಂದ ತಿಳಿದುಕೊಳ್ಳಬಹುದು. ಸಾಕ್ಷ್ಯವನ್ನು ತೆಗೆದುಕೊಳ್ಳುವಾಗ ಆಕ್ಷೇಪಣೆಗೆ ಒಳಗಾದ ವ್ಯಕ್ತಿಗೆ ಅಥವಾ ಸಾಕ್ಷ್ಯ ನೀಡಬಯಸುವ ಯಾರೆ ಇತರ ವ್ಯಕ್ತಿಗೆ ನೀವು ಪ್ರಮಾಣ ವಚನವನ್ನು ಬೋಧಿಸಬಹುದು.

37.3 ವಿಚಾರಣೆಯು ಮುಗಿದ ನಂತರ ಪ್ರಿಸೈಡಿಂಗ್ ಆಫೀಸರ್ ಅವರು ಪ್ರಶ್ನೆಯು ಸಾಬೀತಾಗಲಿಲ್ಲವೆಂದು ಭಾವಿಸಿದರೆ, ಆ ವ್ಯಕ್ತಿಗೆ ಮತ ನೀಡಲು ಅನುಮತಿ ಕೊಡುತ್ತಾರೆ. ಪ್ರಶ್ನೆಯು ಸಾಬೀತಾಗಿದೆ ಎಂದು ಪರಿಗಣಿಸಿದರೆ ಪ್ರಿಸೈಡಿಂಗ್ ಆಫೀಸರ್ ಅವರು ಆ ವ್ಯಕ್ತಿಯು ಮತ ನೀಡದಂತೆ ನಿಷೇಧಿಸುತ್ತಾರೆ. ಅಂತಹ ಸಂದರ್ಭದಲ್ಲಿ ಮತಗಟ್ಟೆಯು ಯಾವ ಪೊಲೀಸ್ ಠಾಣೆಯ ವ್ಯಾಪ್ತಿಗೊಳಪಡುವುದೋ ಆ ಪೊಲೀಸ್ ಠಾಣಾಧಿಕಾರಿಗೆ ಲಿಖಿತ ದೂರನ್ನು ನೀಡಿ, ನಕಲಿ ಮತದಾರನು ಅಪರಾಧವನ್ನು ಮಾಡಿದ್ದಕ್ಕಾಗಿ ಸಂಬಂಧಪಟ್ಟ ಆ ವ್ಯಕ್ತಿಯ ಮೇಲೆ ಕಾನೂನು ಕ್ರಮ ನಡೆಸಲು ಕರ್ತವ್ಯದ ಮೇಲಿರುವ ಪೊಲೀಸಿನವರ ವಶಕ್ಕೆ ಆ ವ್ಯಕ್ತಿಯನ್ನು ಒಪ್ಪಿಸುವಂತೆ ಪ್ರಿಸೈಡಿಂಗ್ ಆಫೀಸರ್ ಅವರಿಗೆ ಸಹ ಸೂಚಿಸಲಾಗಿದೆ.

## 38. ಆಕ್ಷೇಪಣೆಗೆ ಸಲ್ಲಿಸಿದ ಶುಲ್ಕವನ್ನು ಹಿಂದಿರುಗಿಸುವುದು ಅಥವಾ ಮುಟ್ಟುಗೋಲು ಹಾಕಿಕೊಳ್ಳುವುದು

38.1 ವಿಚಾರಣೆಯು ಮುಗಿದ ನಂತರ, ಮೇಲೆ ಹೇಳಿರುವ (ಪರಿಶಿಷ್ಟ IV) ಚಾಲೆಂಜ್ ಮಾಡಲಾದ (ಆಕ್ಷೇಪಿತ) ಮತಗಳ ಪಟ್ಟಿಯಲ್ಲಿರುವ ಸೂಕ್ತ ಅಂಕಣದಲ್ಲಿ (ಅಂಕಣ 10) ಮತ್ತು ರಸೀದಿ ಪುಸ್ತಕದಲ್ಲಿನ ಸಂಬಂಧಪಟ್ಟ ರಸೀದಿಯ ಪಕ್ಕದ ಪ್ರತಿಯಲ್ಲಿ ಆಕ್ಷೇಪಣೆ ಮಾಡಿದವನ ಸಹಿ ಪಡೆದು ಆತನಿಗೆ ಪ್ರಿಸೈಡಿಂಗ್ ಆಫೀಸರ್‌ರವರು 2/- ರೂ.ಗಳ ಪ್ರಶ್ನಿಸಲು ನೀಡುವ ಶುಲ್ಕ(ಚಾಲೆಂಜ್ ಫೀಜು)ವನ್ನು ಪ್ರಶ್ನಿಸಿದವನಿಗೆ ಹಿಂದಿರುಗಿಸುತ್ತಾರೆ.

38.2 ಅದು ಹುರುಳಿಲ್ಲದ ಆಕ್ಷೇಪಣೆಯೆಂದು ಅಥವಾ ಸದ್ಭಾವನೆಯಿಂದ ಮಾಡಿದ್ದಲ್ಲವೆಂದು ಪ್ರಿಸೈಡಿಂಗ್ ಆಫೀಸರ್ ಅಭಿಪ್ರಾಯಪಟ್ಟ ಹೊರತು, ಅವರು ಪ್ರದರ್ಶಿಸಲು ನೀಡಿದ ಶುಲ್ಕ (ಚಾಲೆಂಜ್ ಫೀಜು)ವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುತ್ತಾರೆ ಮತ್ತು ಅದನ್ನು ಆಕ್ಷೇಪಣೆ ಎತ್ತಿದ ವ್ಯಕ್ತಿಗೆ ಹಿಂದಿರುಗಿಸುವುದಿಲ್ಲ.

**39. ಮತದಾರರ ಪಟ್ಟಿಯಲ್ಲಿ ಲಿಪಿಕ ದೋಷ ಹಾಗೂ ಮುದ್ರಣ ದೋಷಗಳಿಗೆ ಪ್ರಾಮುಖ್ಯತೆ ಕೊಡಬಾರದು**

39.1. ಮತದಾರರ ಪಟ್ಟಿಯಲ್ಲಿ ನಮೂದಿಸಿರುವ ಮತದಾರನಿಗೆ ಸಂಬಂಧಿಸಿದ ವಿವರಗಳು ಕೆಲವು ಬಾರಿ, ಉದಾಹರಣೆಗೆ ಮತದಾರನ ಸರಿಯಾದ ವಯಸ್ಸಿನ ಬಗ್ಗೆ ತಪ್ಪಾಗಿ ಮುದ್ರಿತವಾಗಿರುತ್ತವೆ ಅಥವಾ ಹಳೆಯವಾಗಿರುತ್ತವೆ. ಮತದಾನದಲ್ಲಿ ಮತದಾರನಿಗೆ ಸಂಬಂಧಿಸಿದ ಯಾವುದೇ ನಮೂದನೆಯಲ್ಲಿ ಕೇವಲ ಲಿಪಿಕ ತಪ್ಪುಗಳಿದ್ದರೆ ಅಥವಾ ಮುದ್ರಣ ದೋಷಗಳಿದ್ದರೆ ಅವುಗಳಿಗೆ ಪ್ರಾಮುಖ್ಯತೆ ಕೊಡಬಾರದು. ಆದರೆ, ತಾನು ಮತದಾರನೆಂದು ಹೇಳಿಕೊಳ್ಳುವ ವ್ಯಕ್ತಿಯ ಗುರುತಿನ ಬಗ್ಗೆ ಮತದಾರರ ಪಟ್ಟಿಯಲ್ಲಿ ನಮೂದಾಗಿರುವ ಇತರ ವಿವರಗಳ ಪ್ರಕಾರ ಬೇರೆ ರೀತಿಯಲ್ಲಿ ಪೋಲಿಂಗ್ ಏಜೆಂಟನು ಮನವರಿಕೆ ಮಾಡಿಕೊಳ್ಳಬೇಕು. ಮತದಾರರ ಪಟ್ಟಿಯನ್ನು ಒಂದಕ್ಕಿಂತ ಹೆಚ್ಚು ಭಾಷೆಗಳಲ್ಲಿ ಸಿದ್ಧಪಡಿಸಲಾಗಿದ್ದು, ಒಬ್ಬ ವ್ಯಕ್ತಿಯ ಹೆಸರನ್ನು ಮತದಾರರ ಅಧಿಕೃತ ಪಟ್ಟಿಯ ಪ್ರತಿಯಲ್ಲಿ ಸೇರಿಸಿರದಿದ್ದರೆ, ಆದರೆ ಆತನ ಹೆಸರು ಅದೇ ಪ್ರದೇಶದ ಇತರ ಭಾಷೆಯಲ್ಲಿರುವ ಮತದಾರರ ಪಟ್ಟಿಯಲ್ಲಿ ಇದ್ದರೆ ಅಂಥ ವ್ಯಕ್ತಿಗೆ ಮತ ಚಲಾಯಿಸಲು ಅನುಮತಿಸತಕ್ಕದ್ದು ಎಂದು ಪ್ರಿಸೈಡಿಂಗ್ ಅಧಿಕಾರಿಗೆ ನಿರ್ದೇಶಿಸಲಾಗಿದೆ. ಪೋಲಿಂಗ್ ಏಜೆಂಟರು ಅಂತಹ ಮತದಾರನ ಬಗ್ಗೆ ಯಾವುದೇ ಆಕ್ಷೇಪಣೆಗಳನ್ನು ಮಾಡಬಾರದೆಂದು ಸಲಹೆ ನೀಡಲಾಗಿದೆ.

**40. ಮತದಾರನ ಅರ್ಹತೆಯನ್ನು ಪ್ರಶ್ನಿಸಬಾರದು**

40.1. ಮತದಾರರ ಪಟ್ಟಿಯ ಮಾರ್ಕ್ಡ್ ಕಾಪಿಯಲ್ಲಿ ನಮೂದಾಗಿರುವ ಹೆಸರಿನ ಪ್ರತಿಯೊಬ್ಬ ವ್ಯಕ್ತಿಗೆ ಚುನಾವಣೆಯಲ್ಲಿ ಮತ ನೀಡುವ ಹಕ್ಕು ಇರುತ್ತದೆ. ಎಲ್ಲಿಯವರೆಗೆ ಅಂತಹ ವ್ಯಕ್ತಿಯ ಗುರುತಿನ ಬಗ್ಗೆ ಯಾವುದೇ ಅನುಮಾನವಿರುವುದಿಲ್ಲವೋ ಅಲ್ಲಿಯವರೆಗೆ ಮತದಾರನಾಗಿ ನೋಂದಾಯಿತನಾದ ಅಂತಹ ವ್ಯಕ್ತಿಯ ಅರ್ಹತೆ ಬಗ್ಗೆ ಪ್ರಿಸೈಡಿಂಗ್ ಆಫೀಸರ್‌ರವರ ಮುಂದೆ ಮತಗಟ್ಟೆಯಲ್ಲಿ ಪೋಲಿಂಗ್ ಏಜೆಂಟನು ಪ್ರಶ್ನಿಸುವ ಹಾಗಿಲ್ಲ.

**41. ಕಡಿಮೆ ವಯಸ್ಸಿನ ಮತದಾರರು ಮತದಾನ ಮಾಡದಂತೆ ಮುನ್ನೆಚ್ಚರಿಕೆಗಳು**

41.1 ಮೇಲೆ ಹೇಳಿದಂತೆ ಮತದಾರರ ಪಟ್ಟಿಯಲ್ಲಿ ಮತದಾರನಾಗಿ ಹೆಸರು ದಾಖಲಾಗಿರುವ ವ್ಯಕ್ತಿಯ ಅರ್ಹತೆಯನ್ನು ಪ್ರಶ್ನಿಸುವ ಹಾಗಿಲ್ಲ ಅಥವಾ ಮತಗಟ್ಟೆಯಲ್ಲಿ ಪ್ರಿಸೈಡಿಂಗ್ ಆಫೀಸರ್‌ರು ವಿಚಾರಿಸುವ ಹಾಗಿಲ್ಲ. ಆದರೆ ಪ್ರಿಸೈಡಿಂಗ್ ಆಫೀಸರ್‌ರವರಿಗೆ ಮತದಾರನ ಗುರುತಿನ ಬಗ್ಗೆ ಮತ್ತು ಮತದಾರರ ಪಟ್ಟಿಯಲ್ಲಿ ಆತನ ಹೆಸರನ್ನು ಸೇರಿಸಿರುವ ಸಂಗತಿ ಬಗ್ಗೆ ಮೇಲ್ನೋಟಕ್ಕೆ ಮನವರಿಕೆಯಾದರೂ ಆ ವ್ಯಕ್ತಿಯು, ಮತದಾನಕ್ಕೆ ನಿಗದಿಪಡಿಸಿರುವ ಕನಿಷ್ಠ ವಯಸ್ಸಿಗಿಂತ ಕಡಿಮೆ ವಯಸ್ಸಿನ ವ್ಯಕ್ತಿಯಾಗಿ ಕಂಡುಬಂದರೆ, ಅಂಥ ವ್ಯಕ್ತಿಯಿಂದ ನಿಗದಿತ ನಮೂನೆಯಲ್ಲಿ (ಪರಿಶಿಷ್ಟ –V) ಒಂದು ಘೋಷಣೆಯನ್ನು ಪಡೆಯಬೇಕೆಂದು ಆಯೋಗವು ಪ್ರಿಸೈಡಿಂಗ್ ಆಫೀಸರ್ ಅವರಿಗೆ ಸೂಚನೆ ನೀಡಿದೆ. ಅಂತಹ ಮತದಾರರಿಂದ ಘೋಷಣೆಯನ್ನು ಪಡೆಯುವುದಕ್ಕೆ ಮೊದಲು, ಆ ತಪ್ಪು ಘೋಷಣೆಯನ್ನು ನೀಡಿದರೆ, ದಂಡನೆಗೆ ಗುರಿಯಾಗಬೇಕಾಗುತ್ತದೆ ಎಂಬುದನ್ನು ಆತನಿಗೆ ಮನವರಿಕೆ ಮಾಡಿಕೊಡಲು, ಜನತಾ ಪ್ರಾತಿನಿಧ್ಯ ಅಧಿನಿಯಮ, 1950ರ 31ನೇ ಪ್ರಕರಣದಲ್ಲಿರುವ ದಂಡನೆ ಕುರಿತ ಉಪಬಂಧವನ್ನು ಆತನಿಗೆ ಪ್ರಿಸೈಡಿಂಗ್ ಆಫೀಸರ್ ಅವರು ತಿಳಿಸತಕ್ಕದ್ದು.

41.2 ಮತದಾರರ ಪಟ್ಟಿಯಲ್ಲಿ ಹೆಸರು ಸೇರಿರುವ, ಆದರೆ ಮತದಾನದ ವಯಸ್ಸಿಗಿಂತ ಕಡಿಮೆ ವಯಸ್ಸಿನ ವ್ಯಕ್ತಿಯಂತೆ ತೋರಿಬರುವಂಥ ಮತದಾರರ ಬಗ್ಗೆ ಪೋಲಿಂಗ್ ಏಜೆಂಟರು ಪ್ರಿಸೈಡಿಂಗ್ ಆಫೀಸರ್ ಅವರ ಗಮನಕ್ಕೆ ತಂದರೆ ಪ್ರಿಸೈಡಿಂಗ್ ಆಫೀಸರ್‌ರವರು ಅಂಥ ಮತದಾರರಿಗೆ ಸಂಬಂಧಪಟ್ಟಂತೆ ಮೇಲೆ ಹೇಳಿದ ಕ್ರಮ ಕೈಗೊಳ್ಳಲು ಸಾಧ್ಯವಾಗುತ್ತದೆ.

**42. ಪ್ರಾತಿನಿಧ್ಯದ ಮೂಲಕ ಮತದಾನ (ಒಬ್ಬರ ಪರವಾಗಿ ಬೇರೊಬ್ಬ ಮತ ಚಲಾಯಿಸುವುದು): ವರ್ಗೀಕೃತ ಸೇವಾ ಮತದಾರರು**

42.1 ಅಂಚೆ ಮತಪತ್ರಕ್ಕೆ ಪರ್ಯಾಯ ಆಯ್ಕೆಯಾಗಿ, ಸಶಸ್ತ್ರ ದಳಗಳಿಗೆ ಸೇರಿದ ಸೇವಾ ಮತದಾರರಿಗೆ ಮತ್ತು ಸೇನಾ ಅಧಿನಿಯಮದ ಉಪಬಂಧಗಳು ಅನ್ವಯವಾಗುವ ದಳಕ್ಕೆ ಸೇರಿದ ಸದಸ್ಯರಿಗೆ ಪ್ರಾತಿನಿಧ್ಯದ ಮೂಲಕವಾಗಲಿ ಅಥವಾ ಅಂಚೆ ಮತಪತ್ರಗಳ ಮೂಲಕವಾಗಲಿ ಮತ ನೀಡುವ ಆಯ್ಕೆ ಸೌಲಭ್ಯವನ್ನು ಒದಗಿಸಲಾಗಿರುತ್ತದೆ. ಹೀಗೆ ತಮ್ಮ ಮರವಾಗಿ ಮತ ಚಲಾಯಿಸುವ ತಮ್ಮ ಪ್ರತಿನಿಧಿಯನ್ನು ನೇಮಕ ಮಾಡುವ ಸೇವಾ ಮತದಾರರನ್ನು "ವರ್ಗೀಕೃತ ಸೇವಾ ಮತದಾರರು" (ಸಿವಿಎಸ್‌ಗಳು) ಎಂದು ವರ್ಗೀಕರಿಸಲಾಗುತ್ತದೆ. ಇಂತಹ ವರ್ಗೀಕೃತ ಸೇವಾ ಮತದಾರರು ಸಂಬಂಧಪಟ್ಟ ಮತಕ್ಷೇತ್ರದ ವ್ಯಾಪ್ತಿ ಪ್ರದೇಶದ ಒಬ್ಬ ನಿವಾಸಿಯನ್ನು ಅವರ ಪ್ರತಿನಿಧಿಯಾಗಿ

ನೇಮಕ ಮಾಡುವ ಅಗತ್ಯವಿರುತ್ತದೆ. ಹೀಗೆ ಪ್ರತಿನಿಧಿಯಾಗಿ ನೇಮಕಗೊಂಡ ವ್ಯಕ್ತಿಗೆ ಕನಿಷ್ಠ 18 ವರ್ಷ ವಯಸ್ಸಾಗಿರಬೇಕು ಮತ್ತು ಅವನು ಮತದಾರನಾಗಿ ನೋಂದಣಿಯಾಗುವುದಕ್ಕೆ ಅನರ್ಹನಾಗಿರತಕ್ಕದ್ದಲ್ಲ. ಈ ರೀತಿಯ ನೇಮಕವನ್ನು ನಮೂನೆ 13ಎಫ್ ನಲ್ಲಿ ಮಾಡಿಕೊಳ್ಳಲಾಗುತ್ತದೆ. ಒಮ್ಮೆ ಮಾಡಲಾದ ನೇಮಕವು, ಆ ವ್ಯಕ್ತಿಯನ್ನು ಸೇವಾ ಮತದಾರನನ್ನಾಗಿ ಮಾಡಿದ ವ್ಯಕ್ತಿಯು ಮುಂದುವರಿಸಲು ಬಯಸುವವರೆಗೆ ಅಥವಾ ನೇಮಕವನ್ನು ರದ್ದುಗೊಳಿಸುವವರೆಗೆ ಅಥವಾ ಪ್ರಾತಿನಿಧ್ಯ ಮತದಾರನು ಮರಣ ಹೊಂದುವವರೆಗೆ ಭವಿಷ್ಯದಲ್ಲಿ ನಡೆಯುವ ಎಲ್ಲ ಚುನಾವಣೆಗಳಿಗೆ ಮಾನ್ಯವಾಗಿರತಕ್ಕದ್ದು. ವರ್ಗೀಕೃತ ಸೇವಾ ಮತದಾರನು ಮೊದಲ ಪ್ರಾತಿನಿಧ್ಯ ಮತದಾರನ ಮರಣ ಅಥವಾ ಇನ್ನಿತರ ಕಾರಣಗಳಿಂದಾಗಿ ನೇಮಕವನ್ನು ರದ್ದು ಮಾಡುವ ಮತ್ತು ಹೊಸ ಪ್ರಾತಿನಿಧ್ಯ ಮತದಾರನನ್ನು ನೇಮಿಸುವ ಆಯ್ಕೆಯನ್ನು ಹೊಂದಿರುತ್ತಾನೆ. ಹಾಗೆ ನೇಮಕವನ್ನು ರದ್ದುಗೊಳಿಸುವುದನ್ನು ಹೊಸದಾಗಿ ಸೇರಿಸಲಾದ ನಮೂನೆ 13ಜಿ ನಲ್ಲಿ ಮಾಡಬೇಕು.

42.2 ವರ್ಗೀಕೃತ ಸೇವಾ ಮತದಾರನಿಂದ ಪ್ರಾತಿನಿಧ್ಯ ಮತದಾರನ ನೇಮಕದ ಸೂಚನೆಯನ್ನು ಪಡೆದ ನಂತರ, ರಿಟರ್ನಿಂಗ್ ಆಫೀಸರ್‌ರವರು ಮತದಾರನು ತನ್ನ ಪರವಾಗಿ ಮತವನ್ನು ಚಲಾಯಿಸಲು ಪ್ರಾತಿನಿಧ್ಯ ಮತದಾರನನ್ನು ನೇಮಕ ಮಾಡಿರುತ್ತಾನೆಂಬುದನ್ನು ಸೂಚಿಸಲು ಮತದಾರರ ಪಟ್ಟಿಯ ಕೊನೆಯ ಭಾಗದಲ್ಲಿರುವ ಸೇವಾ ಮತದಾರನ ಹೆಸರಿನ ಎದುರು 'ವಸೇಮ' ('ಸಿಎಸ್‌ವಿ') ಎಂಬ ಅಕ್ಷರಗಳನ್ನು ಗುರುತು ಮಾಡತಕ್ಕದ್ದು. ಮುಂಬರುವ ನಿಕಟ ಚುನಾವಣೆಯಲ್ಲಿ ಪ್ರಾತಿನಿಧ್ಯ ಮತದಾನ ಸೌಲಭ್ಯವನ್ನು ಬಳಸುವುದಕ್ಕೆ ಸಂಬಂಧಪಟ್ಟಂತೆ ಪ್ರಾತಿನಿಧ್ಯ ಮತದಾರನ ನೇಮಕದ ಬಗೆಗಿನ ಸೂಚನೆಯು ಆ ಚುನಾವಣೆಗೆ ನಾಮನಿರ್ದೇಶನವನ್ನು ಮಾಡುವುದಕ್ಕೆ ನಿಗದಿಪಡಿಸಿದ ಕೊನೆಯ ದಿನಾಂಕದೊಳಗಾಗಿ ರಿಟರ್ನಿಂಗ್ ಆಫೀಸರ್‌ರವರಿಗೆ ತಲುಪಬೇಕು. ರಿಟರ್ನಿಂಗ್ ಆಫೀಸರ್‌ರವರು ಆಯೋಗವು ನಿರ್ದಿಷ್ಟಪಡಿಸಿದ ನಮೂನೆ ಮತ್ತು ವಿಧಾನದಲ್ಲಿ ಪೂರ್ಣ ವಿಳಾಸಗಳೊಂದಿಗೆ ವರ್ಗೀಕೃತ ಸೇವಾ ಮತದಾರರ ಮತ್ತು ಅವರ ಪ್ರಾತಿನಿಧ್ಯ ಮತದಾರರ ಪ್ರತ್ಯೇಕ ಪಟ್ಟಿಯನ್ನು ಸಹ ನಿರ್ವಹಿಸತಕ್ಕದ್ದು. ನಾಮನಿರ್ದೇಶನಗಳನ್ನು ಮಾಡುವ ಕೊನೆಯ ದಿನಾಂಕದ ನಂತರ, ರಿಟರ್ನಿಂಗ್ ಆಫೀಸರ್‌ರವರು ಎಲ್ಲ ವರ್ಗೀಕೃತ ಸೇವಾ ಮತದಾರರು ಮತ್ತು ಅವರ ಪ್ರಾತಿನಿಧ್ಯ ಮತದಾರರ ಮತಗಟ್ಟೆವಾರು ಉಪ–ಪಟ್ಟಿಗಳನ್ನು ಸಿದ್ಧಪಡಿಸತಕ್ಕದ್ದು. ಮತಗಟ್ಟೆವಾರು ಉಪ–ಪಟ್ಟಿಯನ್ನು ನಿರ್ವಹಿಸುವುದಕ್ಕಾಗಿ ಆಯೋಗವು ನಿಗದಿಪಡಿಸಿರುವ ನಮೂನೆಯನ್ನು ಅನುಬಂಧ VI ರಲ್ಲಿ ಲಗತ್ತಿಸಲಾಗಿದೆ. ಈ ಉಪ–ಪಟ್ಟಿಗಳನ್ನು ಸಂಬಂಧಪಟ್ಟ ಮತಗಟ್ಟೆಗೆ ಸೇರಿದ ಮತದಾರ ಪಟ್ಟಿಯ ಕೊನೆಯ ಭಾಗದಲ್ಲಿ ಸೇರಿಸತಕ್ಕದ್ದು ಮತ್ತು ಉಪ–

ಪಟ್ಟಿಯೊಂದಿಗಿರುವ ಮತದಾರರ ಪಟ್ಟಿಯ ಆ ಭಾಗವು ಆ ಮತಗಟ್ಟೆಗೆ ಸಂಬಂಧಿಸಿದ ಮತದಾರರ ಪಟ್ಟಿಯ ಅಧಿಕೃತ ಪ್ರತಿಯಾಗಿರತಕ್ಕದ್ದು.

42.3 ಪ್ರಾತಿನಿಧ್ಯ ಮತದಾರನು ವರ್ಗೀಕೃತ ಸೇವಾ ಮತದಾರನು ನೇಮಿಸಿದ ಮತಗಟ್ಟೆಯಲ್ಲಿ, ಆ ಮತಗಟ್ಟೆಯಲ್ಲಿ ಮತ ಚಲಾಯಿಸುವ ಇನ್ನಿತರ ಯಾರೇ ಮತದಾರನ ರೀತಿಯಲ್ಲಿಯೇ ವರ್ಗೀಕೃತ ಸೇವಾ ಮತದಾರನ ಪರವಾಗಿ ಮತವನ್ನು ದಾಖಲು ಮಾಡತಕ್ಕದ್ದು. ಇಲ್ಲಿ ಪ್ರಾತಿನಿಧ್ಯ ಮತದಾರನ ಸಂದರ್ಭದಲ್ಲಿ, 37ನೇ ನಿಯಮದ ಮೇರೆಗೆ ಅಚ್ಚಳಿಯದ ಶಾಯಿಯನ್ನು ಗುರುತು ಮಾಡುವಾಗ ಪ್ರಾತಿನಿಧ್ಯ ಮತದಾರನ ಎಡಗೈಯ ಮಧ್ಯ ಬೆರಳಿನ ಮೇಲೆ ಮಾಡಬೇಕು ಎಂಬುದನ್ನು ಗಮನಿಸತಕ್ಕದ್ದು. ಪ್ರಾತಿನಿಧ್ಯ ಮತದಾರನು ಸಾಮಾನ್ಯವಾಗಿ ಅವನು ಮತ ಚಲಾಯಿಸುವ ಮತಗಟ್ಟೆ ವ್ಯಾಪ್ತಿಯಲ್ಲಿ ಬರುವ ಮತಕ್ಷೇತ್ರದಲ್ಲಿ ಮತದಾರನಾಗಿ ನೋಂದಾಯಿತನಾಗಿದ್ದರೆ ಅವನ ಸ್ವಂತ ಹೆಸರಿನಲ್ಲಿ ಮತ ಚಲಾಯಿಸುವುದರ ಜೊತೆಗೆ ವರ್ಗೀಕೃತ ಸೇವಾ ಮತದಾರನ ಪರವಾಗಿಯೂ ಮತ ಚಲಾಯಿಸಲು ಅಧಿಕಾರ ಹೊಂದಿರುತ್ತಾನೆ.

42.4 ಪ್ರಾತಿನಿಧ್ಯ ಮತದಾರನನ್ನು ನೇಮಕ ಮಾಡಿಕೊಂಡ ವರ್ಗೀಕೃತ ಸೇವಾ ಮತದಾರನಿಗೆ ಅಂಚೆ ಮತ ಪತ್ರವನ್ನು ನೀಡಲಾಗುವುದಿಲ್ಲ.

## 43. ಅಂಧ ಅಥವಾ ಅಶಕ್ತ ಮತದಾರರಿಂದ ಮತದಾನ

43.1 ಇವಿಎಂನ ಬ್ಯಾಲೆಟ್ ಯೂನಿಟ್‌ನ ಮೇಲೆ ತನ್ನ ಆಯ್ಕೆಯ ಅಭ್ಯರ್ಥಿಯ ಬಟನ್ ಅನ್ನು ಒತ್ತುವ ಮೂಲಕ ಸ್ವತಃ ತಾವೇ ಮತದಾನ ಮಾಡಲು ಸಾಮರ್ಥ್ಯವಿರದ ದುರ್ಬಲ ಮತದಾರರ ಜೊತೆಗೆ ಮತಗಟ್ಟೆಯಲ್ಲಿನ ವೋಟಿಂಗ್ ಕಂಪಾರ್ಟ್‌ಮೆಂಟ್‌ನ ಒಳಗೆ ಅಧಿಕೃತ ಸಹಚರನಿಗೆ ಮಾತ್ರ ಅವಕಾಶ ನೀಡತಕ್ಕದ್ದು. ಇದು ದುರ್ಬಲ ಮತದಾರನ ಚಲನವಲನಕ್ಕೆ ಮಾತ್ರ ನೆರವು ನೀಡುವ ಅಗತ್ಯವಿದೆ ಎಂಬುದನ್ನು ಕಂಡು ಬರುವ ದೈಹಿಕ ದುರ್ಬಲ ಸ್ವರೂಪದ ಪ್ರಕರಣಗಳಿಗೆ ಅನ್ವಯವಾಗುವುದು. ಇದು ಮತ ಚಲಾಯಿಸುವುದಕ್ಕಲ್ಲ. ಪ್ರಿಸೈಡಿಂಗ್ ಅಧಿಕಾರಿಯು ಇಂತಹ ಪ್ರಕರಣಗಳಲ್ಲಿ ನಿರ್ಣಯ ತೆಗೆದುಕೊಳ್ಳತಕ್ಕದ್ದು.

ಅಂಧತ್ವ ಅಥವಾ ಇತರ ದೈಹಿಕ ದುರ್ಬಲತೆಯ ಕಾರಣದಿಂದ ಯಾರೇ ಮತದಾರನು ಇವಿಎಂನ ಬ್ಯಾಲೆಟಿಂಗ್ ಯೂನಿಟ್ಟಿನ ಮೇಲೆ ಅಂಟಿಸಿದ ಮತಪತ್ರದಲ್ಲಿನ ಚಿನ್ಹೆಗಳನ್ನು ಗುರುತಿಸಲು ಅಥವಾ ಬೇರೊಬ್ಬರ ಸಹಾಯವಿಲ್ಲದೆಯೇ ಮತ ದಾಖಲು ಮಾಡಲು ಅಸಮರ್ಥನಾಗಿದ್ದಾನೆಂದು ಪ್ರಿಸೈಡಿಂಗ್ ಆಫೀಸರ್ ಅವರಿಗೆ ಮನವರಿಕೆಯಾದರೆ ಆ

ಮತದಾರನಿಗೆ ತನ್ನ ಪರವಾಗಿ ತನ್ನ ಇಚ್ಛೆಯಂತೆಯೇ ಮತವನ್ನು ದಾಖಲ್ಮಾಡಲು ವೋಟಿಂಗ್ ಕಂಪಾರ್ಟ್‌ಮೆಂಟಿನೊಳಕ್ಕೆ 18 ವರ್ಷಗಳಿಗಿಂತ ಕಡಿಮೆಯಿಲ್ಲದ ಒಬ್ಬ ವಯಸ್ಕನನ್ನು ಕರೆದುಕೊಂಡು ಹೋಗಲು ಪ್ರಿಸೈಡಿಂಗ್ ಆಫೀಸರ್‌ರವರು ಅನುಮತಿ ನೀಡುತ್ತಾರೆ. ಆದರೆ ಮತದಾರನ ಅನಕ್ಷರತೆಯು, ಅತನ ಪರವಾಗಿ ಮತ ದಾಖಲು ಮಾಡಲು ಸಹಾಯಕ್ಕಾಗಿ ಸಂಗಡಿಗನಿಗೆ ಅನುಮತಿ ನೀಡುವುದಕ್ಕೆ ಸರಿಯಾದ ಆಧಾರವಾಗುವುದಿಲ್ಲ. ಅಲ್ಲದೆ, ಯಾರೇ ಮತಗಟ್ಟೆ ಸಿಬ್ಬಂದಿಯು ಆತನ ಪರವಾಗಿ ಮತವನ್ನು ದಾಖಲು ಮಾಡುವಲ್ಲಿ ನೆರವು ನೀಡಲು ಸಂಗಡಿಗನಾಗಿ ಹೋಗತಕ್ಕದ್ದಲ್ಲ.

43.2 ದೃಷ್ಟಿ ದೋಷ(ಅಂಧರು) ಹೊಂದಿರುವ ವ್ಯಕ್ತಿಗಳ ಅನುಕೂಲಕ್ಕಾಗಿ, ಪ್ರತಿಯೊಬ್ಬ ಸ್ಪರ್ಧಿಸುವ ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ ನೀಲಿ ಬಣ್ಣದ ಬಟನ್‌ನ ಬಲಭಾಗದ ಮೇಲೆ ಬ್ಯಾಲೆಟ್ ಯೂನಿಟ್‌ನಲ್ಲಿ ಬ್ರೈಲ್ ಚಿಹ್ನೆಗಳಲ್ಲಿರುವ ಸಂಖ್ಯೆಗಳಿಗೆ (1 ರಿಂದ 16) ಅವಕಾಶ ಕಲ್ಪಿಸಲಾಗಿದೆ.

43.3 ಅಭ್ಯರ್ಥಿಯಾಗಲೀ, ಆತನ ಚುನಾವಣಾ ಏಜೆಂಟನಾಗಲಿ ಅಥವಾ ಪೋಲಿಂಗ್ ಏಜೆಂಟನಾಗಲಿ (ಆದರೆ ಆತನಿಗೆ 18 ವರ್ಷಗಳಿಗಿಂತ ಕಡಿಮೆ ವಯಸ್ಸು ಆಗಿರಬಾರದು) ಕುರುಡು ಅಥವಾ ಅಶಕ್ತ ಮತದಾರನ ಸಂಗಡಿಗನಾಗಬಹುದು. ಆದರೆ ಆ ದಿನ ಒಬ್ಬ ಮತದಾರನಿಗೆ ಮಾತ್ರ ಆತನು ಸಂಗಡಿಗನಾಗಬಹುದು. ಸಂಗಡಿಗನಾಗುವ ವ್ಯಕ್ತಿಯು ನಿಗದಿತ ನಮೂನೆಯಲ್ಲಿ (ಪರಿಶಿಷ್ಟ–VI) ಮತದಾರನ ಪರವಾಗಿ ತಾನು ದಾಖಲ್ಮಾಡಿಸುವ ಮತದ ಬಗ್ಗೆ ರಹಸ್ಯ ಕಾಪಾಡಿಕೊಳ್ಳುವನೆಂದು ಮತ್ತು ಆ ದಿನ ಬೇರೆ ಯಾವುದೇ ಮತಗಟ್ಟೆಯಲ್ಲಿ ಬೇರೆ ಯಾರೇ ಮತದಾರನಿಗೆ ಸಂಗಡಿಗನಾಗಿಲ್ಲವೆಂದು ಘೋಷಣೆಯನ್ನು ನೀಡಬೇಕು.

43.4 ನಿಯಮ 49ಎನ್ ನ (1)ನೇ ಉಪ–ನಿಯಮದ ಮೊದಲನೇ ಪರಂತುಕದ ಪ್ರಕಾರ ಒಬ್ಬ ವ್ಯಕ್ತಿಯು ಒಬ್ಬರಿಗಿಂತ ಹೆಚ್ಚಿನ ಮತದಾರನಿಗೆ ಸಹಚರನಾಗುವ ಹಾಗಿಲ್ಲ. ಈ ಉಪ–ಬಂಧಗಳ ಅನುಸರಣೆಯನ್ನು ಖಚಿತಪಡಿಸಿಕೊಳ್ಳಲು ಮತಗಟ್ಟೆಯ ಸಿಬ್ಬಂದಿಗೆ ಅನುಕೂಲವಾಗುವ ಸಲುವಾಗಿ, ಆ ಸಹಚರನಿಗೆ ಬಲ ತೋರುಬೆರಳಿನ ಮೇಲೆ ಅಳಿಸಲಾಗದ ಶಾಯಿಯ ಗುರುತನ್ನು ಸಹ ಹಾಕತಕ್ಕದ್ದು. ಅಂತಹ ಪ್ರಕರಣಗಳಲ್ಲಿ ಮತ ಚಲಾಯಿಸುವ ವ್ಯಕ್ತಿಗೆ ಆತನ ಎಡ ತೋರು ಬೆರಳಿನ ಮೇಲೆಯೇ ಅಳಿಸಲಾಗದ ಶಾಯಿಯ ಗುರುತನ್ನು ಹಾಕತಕ್ಕದ್ದು.

43.5 ನಿಯಮ 49ಎನ್ ನ (2)ನೇ ಉಪ–ನಿಯಮವು ಪ್ರಿಸೈಡಿಂಗ್ ಅಧಿಕಾರಿಯು ಮತದಾರನು ಸಹಚರನ ಸಹಾಯದೊಂದಿಗೆ ಮತ ದಾಖಲಿಸಿದಲ್ಲಿ ಅಂಥ ಪ್ರಕರಣಗಳ ದಾಖಲೆಯನ್ನು ನಮೂನೆ 14ಎಯಲ್ಲಿ ಇಟ್ಟುಕೊಳ್ಳಲು ಅವಕಾಶ ಕಲ್ಪಿಸಿದೆ. ಈ ದಾಖಲೆಯ ಮತ ಚಲಾಯಿಸಲು ಬರುವ ದುರ್ಬಲ ವ್ಯಕ್ತಿಯ ಸಹಾಯಕ್ಕಾಗಿ ವೋಟಿಂಗ್ ಕಂಪಾರ್ಟ್‌ಮೆಂಟ್‌ನೊಳಗೆ ಹೋಗುವ

ಸಹಚರನ ವಿವರಗಳನ್ನು ಒಳಗೊಂಡಿರುತ್ತದೆ. ಸಹಚರನಿಗೆ ದುರ್ಬಲ ಮತದಾರನ ಚಲನವಲನ ಕುರಿತು ಸಹಾಯ ಮಾಡಲು ಮಾತ್ರ ಅವಕಾಶವಿದ್ದು, ವೋಟಿಂಗ್ ಕಂಪಾರ್ಟ್‌ಮೆಂಟ್‌ನೊಳಗೆ ಹೋಗಲು ಅವಕಾಶವಿರದ ಪ್ರಕರಣಗಳು ನಮೂನೆ 14ಎ ಯಲ್ಲಿ  ಸೇರಿರುವುದಿಲ್ಲ.

**44. ಟೆಂಡರ್ಡ್ ಮತಗಳು**

44.1. ತಾನೇ ಮತದಾರನೆಂದು ಹೇಳಿ ಬೇರೊಬ್ಬ ವ್ಯಕ್ತಿಯು ಅದಾಗಲೇ ಮತ ಚಲಾಯಿಸಿ ಹೋದ ತರುವಾಯ ತಾನೇ ನಿಜವಾದ ಮತದಾರನೆಂದು ಹೇಳಿಕೊಂಡು ಮತಗಟ್ಟೆಗೆ ಬರುವ ಒಬ್ಬ ವ್ಯಕ್ತಿ ತನ್ನ ಮತ ಚಲಾಯಿಸಬೇಕೆಂದು ಕೇಳಬಹುದು. ಅಂತಹ ಸಂದರ್ಭದಲ್ಲಿ ಅವಶ್ಯಕವಾದ ಪ್ರಶ್ನೆಗಳನ್ನು ಹಾಕಿ ಉತ್ತರ ಪಡೆದ ಮೇಲೆ ಪ್ರಿಸೈಡಿಂಗ್ ಆಫೀಸರ್‌ರವರಿಗೆ, ಆ ವ್ಯಕ್ತಿಯೇ ನಿಜವಾದ ಮತದಾರನೆಂದು ಆತನ ಗುರುತಿನ ಬಗ್ಗೆ ಮನವರಿಕೆಯಾದರೆ ಪ್ರಿಸೈಡಿಂಗ್ ಆಫೀಸರ್ ಅವರು ಆತನಿಗೆ ಮತಯಂತ್ರದ ಮೂಲಕ ಮತ ಹಾಕಲು ಬಿಡದೆ ಟೆಂಡರ್ಡ್ ಮತಪತ್ರದ ಮೂಲಕ ಮತ ನೀಡಲು ಅವಕಾಶ ನೀಡುತ್ತಾರೆ. ಈ ಉದ್ದೇಶಕ್ಕಾಗಿ ಪ್ರಿಸೈಡಿಂಗ್ ಆಫೀಸರ್ ಅವರು ಟೆಂಡರ್ಡ್ ಮತಗಳ ಪಟ್ಟಿಯಲ್ಲಿ (1961ರ ಚುನಾವಣೆ ನಡೆಸುವ ನಿಯಮಗಳಿಗೆ ಲಗತ್ತಿಸಿದ ನಮೂನೆ 17ಬಿ) ಅವಶ್ಯವಾದ ನಮೂದು ಮಾಡುತ್ತಾರೆ ಮತ್ತು ಅದರಲ್ಲಿ ಮತದಾರನ ಸಹಿ ಅಥವಾ ಹೆಬ್ಬೆಟ್ಟಿನ ಗುರುತು ಪಡೆಯುತ್ತಾರೆ. ಮತಗಟ್ಟೆಯಲ್ಲಿ ಬಳಸಲು ಮತಯಂತ್ರದ ಬ್ಯಾಲೆಟಿಂಗ್ ಯೂನಿಟ್ಟಿನ ಮೇಲೆ ಅಂಟಿಸಿದ ಮತಪತ್ರದ ತರಹದ್ದೇ ಆದ ಮತಪತ್ರವನ್ನು ಅಂತಹ ಮತದಾರನಿಗೆ ನೀಡಲಾಗುತ್ತದೆ ಮತ್ತು ಅಂತಹ ಪ್ರತಿಯೊಂದು ಮತಪತ್ರಗಳ ಹಿಂದೆ "ಟೆಂಡರ್ಡ್ ಮತಪತ್ರ" ಎಂದು ಬರೆದಿರುತ್ತಾರೆ ಅಥವಾ ಮುದ್ರೆ ಒತ್ತಿರುತ್ತಾರೆ. ಮತದಾರನು, ಸಾಂಪ್ರದಾಯಿಕವಾಗಿ ಮತಪತ್ರಗಳಲ್ಲಿ ಗುರುತು ಮಾಡುವ ವ್ಯವಸ್ಥೆ ಮೇರೆಗೆ ಮತಪತ್ರದ ಮೇಲೆ ಬಾಣ ಗುರುತಿನ ರಬ್ಬರ್ ಮುದ್ರೆ ಒತ್ತಿ ಟೆಂಡರ್ಡ್ ಮತಪತ್ರಗಳಲ್ಲಿ ತನ್ನ ಮತ ದಾಖಲಿಸುತ್ತಾನೆ. ವೋಟಿಂಗ್ ಕಂಪಾರ್ಟ್‌ಮೆಂಟಿನಲ್ಲಿ ಮತ ದಾಖಲ್ಮಾಡಿದ ಮೇಲೆ ಆ ಮತಪತ್ರವನ್ನು ಮತದಾರನು ಮಡಚಿದ ನಂತರ ಪ್ರಿಸೈಡಿಂಗ್ ಆಫೀಸರ್‌ರವರಿಗೆ ನೀಡತಕ್ಕದ್ದು. ಅದನ್ನು ಪ್ರಿಸೈಡಿಂಗ್ ಆಫೀಸರ್‌ರವರು ಅದೇ ಉದ್ದೇಶಕ್ಕಾಗಿ ಪ್ರತ್ಯೇಕವಾಗಿ ಇಟ್ಟಿರುವ ಒಂದು ವಿಶೇಷ ಕವರಿನಲ್ಲಿ ಇಡುತ್ತಾರೆ.

**45. ಮತದಾರರು ಮತ ಚಲಾಯಿಸದಿರಲು ನಿರ್ಧರಿಸುವುದು**

45.1 ಒಬ್ಬ ಮತದಾರನು, ತನ್ನ ಮತದಾರರ ಪಟ್ಟಿಯ ಸಂಖ್ಯೆಯನ್ನು ಯುಕ್ತವಾಗಿ ಮತದಾರರ ರಿಜಿಸ್ಟರ್‌ನಲ್ಲಿ (ನಮೂನೆ 17ಎ) ನಮೂದಿಸಿದ ಮತ್ತು ಆ ರಿಜಿಸ್ಟರಿನಲ್ಲಿ ತನ್ನ ಸಹಿ/ಹೆಬ್ಬೆಟ್ಟಿನ ಗುರುತನ್ನು ಹಾಕಿದ ನಂತರ ತನ್ನ ಮತವನ್ನು ದಾಖಲು ಮಾಡದಿರಲು ನಿರ್ಧರಿಸಿದರೆ, ಅವನ ಮತ ದಾಖಲಿಸುವಂತೆ ಅವನನ್ನು ಬಲವಂತಪಡಿಸತಕ್ಕದ್ದಲ್ಲ ಅಥವಾ ಒತ್ತಾಯಿಸತಕ್ಕದ್ದಲ್ಲ. ಪ್ರಿಸೈಡಿಂಗ್ ಆಫೀಸರ್‌ರು ಮತದಾರರ ರಿಜಿಸ್ಟರಿನಲ್ಲಿ ಆತನಿಗೆ ಸಂಬಂಧಿಸಿದ ನಮೂದಿನ ಎದುರಿಗಿನ ಷರಾ ಅಂಕಣದಲ್ಲಿ ಆತ "ಮತ ದಾಖಲು ಮಾಡದೇ ಇರಲು ನಿರ್ಧರಿಸಿದ್ದಾನೆ" ಎಂಬ ತಾತ್ಪರ್ಯದ ಒಂದು ಷರಾವನ್ನು ಬರೆಯತಕ್ಕದ್ದು ಮತ್ತು ಮತದಾರನ ಸಹಿ ಅಥವಾ ಹೆಬ್ಬೆಟ್ಟಿನ ಗುರುತನ್ನು ನಿಯಮ 49ಓ ಅನುಸಾರ ಆ ಷರಾದ ಎದುರು ಪಡೆದುಕೊಳ್ಳತಕ್ಕದ್ದು. ಮತದಾರರ ರಿಜಿಸ್ಟರಿನ 1ನೇ ಅಂಕಣದಲ್ಲಿ ಆ ಮತದಾರನ ಕ್ರಮಸಂಖ್ಯೆಯನ್ನಾಗಲಿ ಅಥವಾ ತರುವಾಯದ ಮತದಾರನ ಕ್ರಮಸಂಖ್ಯೆಯನ್ನಾಗಲಿ ಬದಲಿಸಬೇಕಾದ ಅವಶ್ಯಕತೆ ಇರುವುದಿಲ್ಲ. ಕಂಟ್ರೋಲ್ ಯೂನಿಟ್‌ನ ಮೇಲಿನ "ಬ್ಯಾಲೆಟ್" ಬಟನ್ ಅನ್ನು ಮತದಾರನು ಬ್ಯಾಲೆಟಿಂಗ್ ಯೂನಿಟ್‌ನಲ್ಲಿ ತನ್ನ ಮತವನ್ನು ದಾಖಲಿಸಲು ಒತ್ತಿದ ನಂತರ ಮತ ಚಲಾಯಿಸಲು ನಿರಾಕರಿಸಿದರೆ, ಕಂಟ್ರೋಲ್ ಯೂನಿಟ್‌ನ ಪ್ರಭಾರದಲ್ಲಿರುವ ಪ್ರಿಸೈಡಿಂಗ್ ಆಫೀಸರ್‌ರಾಗಲಿ/ ಮೂರನೇ ಪೋಲಿಂಗ್ ಆಫೀಸರ್‌ರಾಗಲಿ ಮುಂದಿನ ಮತದಾರನು ನೇರವಾಗಿ ವೋಟಿಂಗ್ ಕಂಪಾರ್ಟ್‌ಮೆಂಟಿನೊಳಕ್ಕೆ ಹೋಗಿ ಮತವನ್ನು ದಾಖಲಿಸಲು ನಿರ್ದೇಶನ ನೀಡಬೇಕು ಅಥವಾ ಕಂಟ್ರೋಲ್ ಯೂನಿಟ್‌ನ ಹಿಂಬದಿಯ ಕಂಪಾರ್ಟ್‌ಮೆಂಟ್‌ನಲ್ಲಿನ 'ಪವರ್' ಸ್ವಿಚ್ಚನ್ನು 'ಆಫ್' ಸ್ಥಿತಿಗೆ ತರಬೇಕು. ನಂತರ ಅದನ್ನು 'ಆನ್' ಸ್ಥಿತಿಗೆ ತಂದು, 'ಬ್ಯಾಲೆಟ್' ಬಟನ್ ಅನ್ನು ಒತ್ತಿ ಮುಂದಿನ ಮತದಾರನು ವೋಟಿಂಗ್ ಕಂಪಾರ್ಟ್‌ಮೆಂಟಿನೊಳಕ್ಕೆ ಹೋಗಿ ಅವನ ಮತವನ್ನು ದಾಖಲಿಸಲು ನಿರ್ದೇಶನ ನೀಡಬೇಕು. ಒಂದುವೇಳೆ ಕಂಟ್ರೋಲ್ ಯೂನಿಟ್‌ನ ಮೇಲಿರುವ "ಬ್ಯಾಲೆಟ್" ಬಟನ್ ಅನ್ನು ಬ್ಯಾಲೆಟ್ ಯೂನಿಟ್‌ನಲ್ಲಿ ಮತವನ್ನು ದಾಖಲಿಸಲು ಒತ್ತಿ ತರುವಾಯ ಕೊನೆಯ ಮತದಾರನು ಮತ ಚಲಾಯಿಸಲು ನಿರಾಕರಿಸಿದರೆ, ಕಂಟ್ರೋಲ್ ಯೂನಿಟ್‌ನ ಪ್ರಭಾರದಲ್ಲಿರುವ ಪ್ರಿಸೈಡಿಂಗ್ ಆಫೀಸರ್/ಮೂರನೇ ಪೋಲಿಂಗ್ ಆಫೀಸರ್‌ರವರು ಕಂಟ್ರೋಲ್ ಯೂನಿಟ್‌ನ ಹಿಂಬದಿಯ ಕಂಪಾರ್ಟ್‌ಮೆಂಟ್‌ನಲ್ಲಿನ 'ಪವರ್' ಸ್ವಿಚ್ಚನ್ನು 'ಆಫ್' ಸ್ಥಿತಿಗೆ ತರತಕ್ಕದ್ದು ಮತ್ತು ಕಂಟ್ರೋಲ್ ಯೂನಿಟ್‌ನಿಂದ ವಿವಿಪ್ಯಾಟ್ ಮತ್ತು ಬ್ಯಾಲೆಟಿಂಗ್ ಯೂನಿಟ್(ಗಳು)ನ ಸಂಪರ್ಕವನ್ನು ಕಡಿತಗೊಳಿಸತಕ್ಕದ್ದು. ಕಂಟ್ರೋಲ್ ಯೂನಿಟ್‌ನಿಂದ ವಿವಿಪ್ಯಾಟ್ ಮತ್ತು ಬ್ಯಾಲಟಿಂಗ್ ಯೂನಿಟ್(ಗಳು)ನ ಸಂಪರ್ಕವನ್ನು ಕಡಿತಗೊಳಿಸಿದ ನಂತರ

ಮತ್ತೆ 'ಪವರ್' ಸ್ವಿಚ್ಚನ್ನು 'ಆಫ್' ಸ್ಥಿತಿಗೆ ತರಬೇಕು. ಇದರಿಂದ 'ಬಿಜಿ' ದೀಪವು ಆರಿಹೋಗುತ್ತದೆ ಮತ್ತು 'ಕ್ಲೋಸ್' ಬಟನ್ ಒತ್ತಿದಾಗ ಮತದಾನ ಮುಕ್ತಾಯವಾಗುತ್ತದೆ.

45.2 ಯಾರೇ ಅಭ್ಯರ್ಥಿಗೆ ಮತಹಾಕಲು ಇಚ್ಚಿಸದ ಮತದಾರರು ಅವರ ನಿರ್ಧಾರದ ರಹಸ್ಯವನ್ನು ಉಲ್ಲಂಘಿಸದೆ ಯಾರೇ ಅಭ್ಯರ್ಥಿಗೆ ಮತ ಹಾಕದಿರುವ ತಮ್ಮ ಹಕ್ಕನ್ನು ಚಲಾಯಿಸಬಹುದು. ಮೇಲಿನ ಯಾವುದೇ ಅಲ್ಲ– ನೋಟಾ (NOTA) ವಾಕ್ಯಗಳಲ್ಲಿ ಅದರಲ್ಲಿ ಬರೆದಿರುವ ಬ್ಯಾಲೆಟ್ ಪ್ಯಾನಲ್ ಮತ ಚಲಾಯಿಸುವುದಕ್ಕೆ ಲಭ್ಯವಿರುತ್ತದೆ.

**46. ಪೇಪರ್ ಟ್ರೇಲ್‌ನ ಮೇಲೆ ಮುದ್ರಿತವಾದ ವಿವರಗಳ ಬಗ್ಗೆ ದೂರುಗಳಿದ್ದ ಸಂದರ್ಭದಲ್ಲಿ ಪ್ರಕ್ರಿಯೆ:**

46.1. ಮತದಾರನು ತನ್ನ ಮತವನ್ನು ದಾಖಲಿಸಿದ ತುರುವಾಯ, ವಿವಿಪ್ಯಾಟ್‌ನಿಂದ ಸೃಜಿಸಿದ ಕಾಗದದ ಚೀಟಿಯು ಅವನು ಚಲಾಯಿಸಿದ ಒಂದು ಮತವನ್ನು ಹೊರತುಪಡಿಸಿ ಬೇರೊಬ್ಬ ಉಮೇದುವಾರನ ಹೆಸರು ಅಥವಾ ಚಿಹ್ನೆಯನ್ನು ತೋರಿಸಿದೆಯೆಂದು ಆಪಾದಿಸಿದಲ್ಲಿ, ಪ್ರಿಸೈಡಿಂಗ್ ಆಫೀಸರ್‌ರವರು ಸುಳ್ಳು ಘೋಷಣೆಯನ್ನು ಮಾಡುವುದರ ಬಗೆಗಿನ ಪರಿಣಾಮ ಕುರಿತು ಮತದಾರನಿಗೆ ಎಚ್ಚರಿಕೆಯನ್ನು ನೀಡಿದ ನಂತರ, ಆ ಆಪಾದನೆಯ ಬಗ್ಗೆ ಮತದಾರನಿಂದ ಲಿಖಿತ ಘೋಷಣೆಯನ್ನು ಪಡೆದುಕೊಳ್ಳತಕ್ಕದ್ದು. ಮತದಾರನು ಲಿಖಿತ ಘೋಷಣೆಯನ್ನು ನೀಡಿದಲ್ಲಿ, ಪ್ರಿಸೈಡಿಂಗ್ ಆಫೀಸರ್‌ರವರು 17–ಎ ನಮೂನೆಯಲ್ಲಿ ಆ ಮತದಾರನಿಗೆ ಸಂಬಂಧಿಸಿದಂತೆ ಎರಡನೇ ನಮೂದನ್ನು ಮಾಡತಕ್ಕದ್ದು ಮತ್ತು ಆತನ ಸಮ್ಮುಖದಲ್ಲಿ ಮತ್ತು ಉಮೇದುವಾರರ ಸಮ್ಮುಖದಲ್ಲಿ ಅಥವಾ ಮತಗಟ್ಟೆಯಲ್ಲಿ ಹಾಜರಿರುವ ಪೋಲಿಂಗ್ ಏಜೆಂಟರುಗಳ ಸಮ್ಮುಖದಲ್ಲಿ ಮತಯಂತ್ರದಲ್ಲಿ ಪರೀಕ್ಷೆಯ ಮತವನ್ನು ದಾಖಲಿಸಲು ಮತದಾರನಿಗೆ ಅನುಮತಿಸತಕ್ಕದ್ದು, ವಿವಿಪ್ಯಾಟ್ ಸೃಜಿಸಿದ ಕಾಗದದ ಚೀಟಿಯನ್ನು ಪರಿಶೀಲಿಸತಕ್ಕದ್ದು. ಆ ಆಪಾದನೆಯು ಸತ್ಯವಾದುದೆಂದು ಕಂಡುಬಂದರೆ, ಪ್ರಿಸೈಡಿಂಗ್ ಆಫೀಸರ್‌ರವರು ರಿಟರ್ನಿಂಗ್ ಆಫೀಸರ್‌ರವರಿಗೆ ಆ ಸಂಗತಿಯನ್ನು ಕೂಡಲೆ ವರದಿ ಮಾಡತಕ್ಕದ್ದು, ಆ ಯಂತ್ರದಲ್ಲಿ ಹೆಚ್ಚು ಮತಗಳು ದಾಖಲಾಗುವುದನ್ನು ನಿಲ್ಲಿಸುವುದು ಮತ್ತು ರಿಟರ್ನಿಂಗ್ ಆಫೀಸರ್ ನೀಡಿದ ನಿರ್ದೇಶನುಸಾರ ಕಾರ್ಯನಿರ್ವಹಿಸುವುದು ಆಪಾದನೆಯು ಸುಳ್ಳು ಎಂದು ಕಂಡು ಬಂದರೆ ಮತ್ತು ಮತದಾರನು ದಾಖಲಿಸಿದ ಪರೀಕ್ಷಾ ಮತದೊಂದಿಗೆ ಹಾಗೆ ಹೊಂದಾಣಿಕೆ ಆದರೆ ಆಗ ಪ್ರಿಸೈಡಿಂಗ್ ಆಫೀಸರ್‌ರವರು,–

(i) ಅಂಥ ಪರೀಕ್ಷಾ ಮತವನ್ನು ದಾಖಲಿಸಲಾಗಿರುವ ಉಮೇದುವಾರನ ಕ್ರಮಸಂಖ್ಯೆ ಮತ್ತು ಹೆಸರನ್ನು ಸೂಚಿಸಿ 17–ಎ ನಮೂನೆಯಲ್ಲಿ ಆ ಮತದಾರನಿಗೆ ಸಂಬಂಧಿಸಿದ ಎರಡನೇ ನಮೂದಿನ ಎದುರು ಆ ಬಗ್ಗೆ ಷರಾ ಮಾಡತಕ್ಕದ್ದು;

(ii) ಅಂಥ ಷರಾಗಳ ಎದುರು ಆ ಮತದಾರನ ಸಹಿ ಅಥವಾ ಹೆಬ್ಬೆಟ್ಟಿನ ಗುರುತನ್ನು ಪಡೆದುಕೊಳ್ಳತಕ್ಕದ್ದು; ಹಾಗೂ

(iii) 17–ಸಿ ನಮೂನೆಯ ಭಾಗ–I ರಲ್ಲಿರುವ 5ನೇ ಬಾಬ್ತಿನಲ್ಲಿ ಅಂಥ ಪರೀಕ್ಷಾ ಮತಕ್ಕೆ ಸಂಬಂಧಿಸಿದಂತೆ ಅವಶ್ಯಕ ನಮೂದುಗಳನ್ನು ಮಾಡತಕ್ಕದ್ದು.

## 47. ಮತದಾನದ ಗೌಪ್ಯತೆಯ ಉಲ್ಲಂಘನೆ

47.1 ಮತವನ್ನು ದಾಖಲು ಮಾಡಲು ಅವಕಾಶ ನೀಡಲಾದ ಪ್ರತಿಯೊಬ್ಬ ಮತದಾರನೂ ಮತಗಟ್ಟೆಯಲ್ಲಿ ಮತದಾನದ ಗೌಪ್ಯತೆಯನ್ನು ಕಾಪಾಡುವುದು ಮತ್ತು ಆ ಬಗ್ಗೆ ಗೊತ್ತುಪಡಿಸಿದ ಕಾರ್ಯವಿಧಾನಗಳನ್ನು ಅನುಸರಿಸುವುದು ಅತ್ಯಗತ್ಯ. ಮತದಾನದ ಗೌಪ್ಯತೆಯನ್ನು ಕಾಪಾಡಬೇಕೆಂದು ಮತ್ತು ಮತದಾನದ ಕಾರ್ಯವಿಧಾನವನ್ನು ಅನುಸರಿಸಬೇಕೆಂದು ಪ್ರಿಸೈಡಿಂಗ್ ಆಫೀಸರ್ ಅವರು ಎಚ್ಚರಿಕೆ ನೀಡಿದ ನಂತರ ಯಾರೇ ಮತದಾರನು ಹಾಗೆ ಮಾಡಲು ನಿರಾಕರಿಸಿದಲ್ಲಿ, ಪ್ರಿಸೈಡಿಂಗ್ ಆಫೀಸರ್ ಅಥವಾ ಆತನ ನಿರ್ದೇಶನದ ಮೇರೆಗೆ ಪೋಲಿಂಗ್ ಆಫೀಸರ್ ಆ ವ್ಯಕ್ತಿಗೆ ಮತದಾನ ಮಾಡಲು ಅವಕಾಶ ನೀಡುವುದಿಲ್ಲ. ಆ ಮತದಾರನಿಗೆ ಆದಾಗಲೇ ಮತದಾರ ಚೀಟಿಯನ್ನು ನೀಡಿದ್ದರೆ ಅದನ್ನು ಹಿಂದಕ್ಕೆ ತೆಗೆದುಕೊಳ್ಳತಕ್ಕದ್ದು ಮತ್ತು ರದ್ದುಪಡಿಸತಕ್ಕದ್ದು. ಪ್ರಿಸೈಡಿಂಗ್ ಆಫೀಸರ್‌ರು ಮತದಾರರ ರಿಜಿಸ್ಟರಿನಲ್ಲಿ “ಮತದಾನಕ್ಕೆ ಅವಕಾಶ ಕೊಡಕೂಡದು – ಮತದಾನದ ಕಾರ್ಯವಿಧಾನವನ್ನು ಉಲ್ಲಂಘಿಸಲಾಗಿದೆ” ಎಂದು ಷರಾ ಬರೆಯತಕ್ಕದ್ದು ಮತ್ತು ಅದರಡಿಯಲ್ಲಿ ತನ್ನ ಸಹಿಯನ್ನು ಹಾಕತಕ್ಕದ್ದು. ಆದರೆ ಮತದಾರರ ರಿಜಿಸ್ಟರ್‌ನ ಒಂದನೇ ಅಂಕಣದಲ್ಲಿ ಆ ಮತದಾರನ ಕ್ರಮಸಂಖ್ಯೆಯನ್ನಾಗಲೀ ಅಥವಾ ತರುವಾಯದ ಯಾರೇ ಮತದಾರರ ಕ್ರಮಸಂಖ್ಯೆಯನ್ನಾಗಲೀ ಬದಲಾಯಿಸಬೇಕಾದ ಅವಶ್ಯಕತೆ ಇರುವುದಿಲ್ಲ.

**48. ಮತದಾನ ನಡೆಯುತ್ತಿರುವಾಗ ಮತದಾನ ಕಂಪಾರ್ಟ್‌ಮೆಂಟಿನೊಳಗೆ ಪ್ರಿಸೈಡಿಂಗ್ ಆಫೀಸರ್‌ನು ಪ್ರವೇಶಿಸುವುದು**

48.1 ಕೆಲವು ವೇಳೆ, ಪರದೆ ಹಾಕಿರುವ ಮತದಾನ ಕಂಪಾರ್ಟ್‌ಮೆಂಟ್‌ನಲ್ಲಿ ಇರುವಂತಹ ಬ್ಯಾಲೆಟಿಂಗ್ ಯೂನಿಟ್(ಗಳು) ಮತ್ತು ವಿವಿಪ್ಯಾಟ್ ಸರಿಯಾಗಿ ಕೆಲಸ ಮಾಡುತ್ತಿಲ್ಲ ಅಥವಾ ವೋಟಿಂಗ್ ಕಂಪಾರ್ಟ್‌ಮೆಂಟಿನೊಳಗೆ ಪ್ರವೇಶ ಮಾಡಿದ ಮತದಾರನು ಬ್ಯಾಲೆಟಿಂಗ್ ಯೂನಿಟ್(ಗಳು) ಮತ್ತು ವಿವಿಪ್ಯಾಟ್ ಅನ್ನು ಕೆಡಿಸುತ್ತಿದ್ದಾನೆಂದು ಅಥವಾ ಅನ್ಯಥಾ ಹಸ್ತಕ್ಷೇಪ ಮಾಡುತ್ತಿದ್ದಾನೆಂದು ಅಥವಾ ಬೇಕಾದ್ದಕ್ಕಿಂತಲೂ ಬಹಳ ಅವಧಿಯವರೆಗೆ ಆತ/ಆಕೆ ಮತದಾನ ಕಂಪಾರ್ಟ್‌ಮೆಂಟಿನೊಳಗೆ ಇದ್ದಾನೆಂದು ಪ್ರಿಸೈಡಿಂಗ್ ಆಫೀಸರ್‌ಗೆ ಸಂಶಯ ಬರಬಹುದು ಅಥವಾ ಸಂಶಯ ಪಡಲು ಆತನಿಗೆ ಕಾರಣಗಳಿರಬಹುದು. ಅಂಥ ಸಂದರ್ಭಗಳಲ್ಲಿ 49ಜಿ ನಿಯಮದ ಮೇರೆಗೆ ಮತದಾನ ಕಂಪಾರ್ಟ್‌ಮೆಂಟಿನೊಳಗೆ ಪ್ರವೇಶಿಸಲು ಮತ್ತು ಬ್ಯಾಲೆಟಿಂಗ್ ಯೂನಿಟ್(ಗಳು) ಹಾಗೂ ವಿವಿಪ್ಯಾಟ್‌ನ್ನು ಯಾವುದೇ ರೀತಿಯಲ್ಲಿ ಕೆಡಿಸದಂತೆ ಅಥವಾ ಅದರಲ್ಲಿ ಹಸ್ತಕ್ಷೇಪವಾಗದಂತೆ ನೋಡಿಕೊಳ್ಳಲು ಮತ್ತು ಮತದಾನವು ಸರಾಗವಾಗಿ ಹಾಗೂ ಕ್ರಮಬದ್ಧವಾಗಿ ನಡೆಯುವಂತೆ ನೋಡಿಕೊಳ್ಳಲು ತಾನು ಅವಶ್ಯವೆಂದು ಭಾವಿಸುವುದಾದಂತಹ ಕ್ರಮಗಳನ್ನು ಕೈಗೊಳ್ಳುವುದಕ್ಕೆ ಪ್ರಿಸೈಡಿಂಗ್ ಆಫೀಸರ್‌ನು ಹಕ್ಕನ್ನು ಹೊಂದಿರುತ್ತಾನೆ.

48.2 ಪ್ರಿಸೈಡಿಂಗ್ ಆಫೀಸರ್‌ನು ಮತದಾನ ಕಂಪಾರ್ಟ್‌ಮೆಂಟನ್ನು ಪ್ರವೇಶಿಸಿದಾಗಲೆಲ್ಲಾ ಹಾಜರಿರುವ ಪೋಲಿಂಗ್ ಏಜೆಂಟ್‌ರು ತನ್ನೊಡನೆ ಬರಲು ಇಚ್ಛಿಸಿದಲ್ಲಿ ಅವರಿಗೆ ಅವಕಾಶ ನೀಡತಕ್ಕದ್ದು.

48.3 ಮತದಾರನು ಮತದಾನದ ಕಂಪಾರ್ಟ್‌ಮೆಂಟಿನೊಳಗೆ ಇವಿಎಂ ಅಥವಾ ವಿವಿಪ್ಯಾಟ್ ಕೈಯಾಡಿಸುತ್ತಿರುವನೆಂದು ಮತ್ತು ದೀರ್ಘಕಾಲ ಮತದಾನದ ಕಂಪಾರ್ಟ್‌ಮೆಂಟಿನೊಳಗೆ ಉಳಿದಿರುವನೆಂದು ಸಂಶಯ ಉಂಟಾದರೆ, ಪ್ರಿಸೈಡಿಂಗ್ ಆಫೀಸರ್ ಅದಕ್ಕೆ ಸಂಬಂಧಿಸಿದಂತೆ ಪರಿಶೀಲಿಸಲು ಮತ್ತು ಪೋಲಿಂಗ್ ಏಜೆಂಟ್‌ರ ಗೊಂದಲವನ್ನು ನಿವಾರಿಸಲು ಪೋಲಿಂಗ್ ಕಂಪಾರ್ಟ್‌ಮೆಂಟಿನೊಳಗೆ ತಾವು ಹೋಗುವಾಗ ಅಲ್ಲಿರುವ ಒಬ್ಬ ಪೋಲಿಂಗ್ ಏಜೆಂಟ್‌ರಿಗೆ ತಮ್ಮ ಸಂಗಡ ಬರುವಂತೆ ಸೂಚಿಸುತ್ತಾರೆ.

**49. ಮತದಾನದ ಮುಕ್ತಾಯದ ಸಮಯದಲ್ಲಿ ಹಾಜರಿರುವ ವ್ಯಕ್ತಿಗಳಿಂದ ಮತದಾನ**

49.1 ಪ್ರಿಸೈಡಿಂಗ್ ಆಫೀಸರ್ ಅವರು ಮತದಾನದ ಮುಕ್ತಾಯಕ್ಕೆ ಗೊತ್ತುಪಡಿಸಿರುವ ಸಮಯಕ್ಕೆ ಸರಿಯಾಗಿ ಮತಗಟ್ಟೆಯನ್ನು ಮುಚ್ಚತಕ್ಕದ್ದು ಮತ್ತು ಆ ತರುವಾಯ ಯಾವ ಮತದಾರರನ್ನೂ ಮತಗಟ್ಟೆಯ ಒಳಗಡೆ ಪ್ರವೇಶಿಸಲು ಅನುಮತಿ ಕೊಡುವುದಿಲ್ಲ. ಆದರೆ ಮತಗಟ್ಟೆ

ಮುಚ್ಚುವುದಕ್ಕೂ ಮೊದಲು ಅಲ್ಲಿ ಹಾಜರಿರುವ ಎಲ್ಲಾ ಮತದಾರರಿಗೆ, ಆ ಉದ್ದೇಶಕ್ಕಾಗಿ ಮತದಾನವು ಗೊತ್ತುಪಡಿಸಿದ ಮುಕ್ತಾಯದ ಅವಧಿಯನ್ನೂ ಮೀರಿ ಮುಂದುವರಿಯಬೇಕಾಗಿ ಬಂದರೂ ಕೂಡ, ಅವರುಗಳಿಗೆ ತಮ್ಮ ಮತವನ್ನು ಹಾಕಲು ಅವಕಾಶ ನೀಡುತ್ತಾರೆ. ಈ ಮೇಲಿನ ಉದ್ದೇಶಕ್ಕಾಗಿ, ನಿರ್ದಿಷ್ಟಪಡಿಸಿದ ಮುಕ್ತಾಯದ ಅವಧಿಯಲ್ಲಿ ಸಾಲಿನಲ್ಲಿ ನಿಂತು ಮತದಾನ ಮಾಡಲು ಕಾಯುತ್ತಿರುವ ಎಲ್ಲ ಮತದಾರರಿಗೆ ಕ್ರ.ಸಂ. 1 ಇತ್ಯಾದಿ ಕ್ರಮಸಂಖ್ಯೆಗಳನ್ನುಳ್ಳ ಹಾಗೂ ಪ್ರಿಸೈಡಿಂಗ್ ಆಫೀಸರ್ ಅವರು ಪೂರ್ಣ ಸಹಿ ಮಾಡಿದ ಚೀಟಿಯನ್ನು ಕೊಡುತ್ತಾರೆ. ಆನಂತರ ಅವರು ಯಾವ ವ್ಯಕ್ತಿಯೂ ಸಾಲಿನಲ್ಲಿ ಸೇರಿಕೊಳ್ಳಲು ಅನುಮತಿ ಕೊಡುವುದಿಲ್ಲ. ಸಾಲಿನಲ್ಲಿ ಸೇರಿಸಿಕೊಳ್ಳುವುದನ್ನು ತಡೆಯಲು ಸಾಲಿನ ತೀರಾ ಕೊನೆಯಲ್ಲಿ ನಿಂತಿರುವ ವ್ಯಕ್ತಿಗೆ ಮೊದಲನೇ ಕ್ರಮಸಂಖ್ಯೆಯ ಚೀಟಿಯನ್ನು ಕೊಟ್ಟು ಉಳಿದವರಿಗೆ ನಂತರದ ಕ್ರಮಸಂಖ್ಯೆಯ ಚೀಟಿಗಳನ್ನು ಕೊಡಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

**50. ಮತದಾನದ ಮುಕ್ತಾಯ**

50.1 ಕೊನೆಯ ಮತದಾರನು ತನ್ನ ಮತವನ್ನು ದಾಖಲು ಮಾಡಿದ ತರುವಾಯ ಆ ಯಂತ್ರದಲ್ಲಿ ಇನ್ನಾವುದೇ ಮತವನ್ನು ದಾಖಲು ಮಾಡಲು ಸಾಧ್ಯವಾಗದ ರೀತಿಯಲ್ಲಿ ಪ್ರಿಸೈಡಿಂಗ್ ಆಫೀಸರ್ ಮತದಾನವನ್ನು ಮುಕ್ತಾಯಗೊಳಿಸತಕ್ಕದ್ದು. ಈ ಉದ್ದೇಶಕ್ಕಾಗಿ ಪ್ರಿಸೈಡಿಂಗ್ ಆಫೀಸರ್ ಬ್ಯಾಲೆಟಿಂಗ್ ಯೂನಿಟ್‌ನ ಸಂಪರ್ಕವನ್ನು(ಗಳನ್ನು) ಕಂಟ್ರೋಲ್ ಯೂನಿಟ್(ಗಳು) ಮತ್ತು ವಿವಿಪ್ಯಾಟ್‌ನಿಂದ ಬೇರ್ಪಡಿಸಿ ಕಂಟ್ರೋಲ್ ಯೂನಿಟ್‌ನಲ್ಲಿರುವ 'ಕ್ಲೋಸ್' ಎಂಬ ಬಟನನ್ನು ಒತ್ತತಕ್ಕದ್ದು ಮತ್ತು ಪವರ್ ಸ್ವಿಚ್ ಅನ್ನು 'ಆಫ್' ಸ್ಥಿತಿಗೆ ತರತಕ್ಕದ್ದು. ಕ್ಲೋಸ್ ಬಟನ್ ಅನ್ನು ಒತ್ತಿದಾಗ, ಕಂಟ್ರೋಲ್ ಯೂನಿಟ್‌ನ ಡಿಸ್‌ಪ್ಲೇ ಪ್ಯಾನಲ್‌ಗಳು "ಮತದಾನ ಮುಕ್ತಾಯ" ಎಂದು ತೋರಿಸುತ್ತದೆ. ಆನಂತರ ಮತಯಂತ್ರವು ಇನ್ನ್ಯಾವುದೇ ಹೆಚ್ಚಿನ ಮತವನ್ನು ಸೇರಿಸಿಕೊಳ್ಳುವುದಿಲ್ಲ.

50.2 ಯಂತ್ರದಲ್ಲಿ ದಾಖಲಾದ ಒಟ್ಟು ಮತಗಳ ಸಂಖ್ಯೆಯನ್ನು ಪ್ರಿಸೈಡಿಂಗ್ ಆಫೀಸರ್‌ರು ನಮೂನೆ 17ಸಿ ಯಲ್ಲಿರುವ ದಾಖಲಾದ ಮತಗಳ ಲೆಕ್ಕದಲ್ಲಿ ಕೂಡಲೇ ಬರೆದುಕೊಳ್ಳತಕ್ಕದ್ದು.

**ಪ್ರಿಸೈಡಿಂಗ್ ಆಫೀಸರ್ ಅವರು ದಾಖಲಾದ ಮತಗಳ ಸಂಖ್ಯೆಯ ಪ್ರತಿಯನ್ನು (ನಮೂನೆ 17ಸಿ) ಒದಗಿಸುವುದು**

50.3 1961ರ ಚುನಾವಣೆ ನಡೆಸುವ ನಿಯಮದ 49ಎಸ್ ನಿಯಮದಲ್ಲಿ ಪ್ರಿಸೈಡಿಂಗ್ ಆಫೀಸರ್ ಅವರು ಮತದಾನ ಮುಕ್ತಾಯವಾದಾಗ ಮತಯಂತ್ರದಲ್ಲಿ ದಾಖಲಾದ ಮತಗಳ ಲೆಕ್ಕವನ್ನು 17ಸಿ ನಮೂನೆಯಲ್ಲಿ ಸಿದ್ಧಪಡಿಸಬೇಕೆಂದು ಹೇಳಿರುವುದನ್ನು ನೀವು ಗಮನಿಸಬೇಕು. 17ಸಿ

ನಮೂನೆಯ ಮಾದರಿಯನ್ನು ಪರಿಶಿಷ್ಟ VIII ರಲ್ಲಿ ಕೊಡಲಾಗಿದೆ. ಮೇಲ್ಕಂಡ ನಿಯಮದ ಮೇರೆಗೆ ಮತದಾನ ಮುಕ್ತಾಯವಾದ ಸಮಯದಲ್ಲಿ ಪ್ರಿಸ್ಯೆಡಿಂಗ್ ಆಫೀಸರ್ ಅವರು ಹಾಜರಿರುವ ಪ್ರತಿಯೊಬ್ಬ ಪೋಲಿಂಗ್ ಏಜೆಂಟರಿಗೆ ಅಂತಹ ಮತಪತ್ರದ ಲೆಕ್ಕದ ದೃಢೀಕೃತ ಪ್ರತಿಯನ್ನು ಆ ಬಗ್ಗೆ ಅವರಿಗೆ ಸ್ವೀಕೃತಿ ಪಡೆದುಕೊಂಡು ಒದಗಿಸಬೇಕೆಂದು ಅಗತ್ಯಪಡಿಸಲಾಗಿದೆ. ಆದುದರಿಂದ ಪೋಲಿಂಗ್ ಏಜೆಂಟರು ಮತಪತ್ರಗಳ ಲೆಕ್ಕದ ಒಂದು ದೃಢೀಕೃತ ಯಥಾಪ್ರತಿಯನ್ನು ಪ್ರಿಸ್ಯೆಡಿಂಗ್ ಆಫೀಸರ್‌ರಿಂದ ಪಡೆದಿದ್ದೀರಿ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ಏಕೆಂದರೆ, ಅಂಥ ಮತಪತ್ರಗಳ ಲೆಕ್ಕವು ಮತ ಎಣಿಕೆ ಮಾಡುವಾಗ ಅವರ ಅಭ್ಯರ್ಥಿಗಳಿಗೆ ಅತ್ಯಗತ್ಯವಾಗಿ ಬೇಕಾಗಿರುತ್ತದೆ. ಪ್ರಿಸ್ಯೆಡಿಂಗ್ ಆಫೀಸರ್‌ರವರಿಂದ ಮತಪತ್ರದ ಲೆಕ್ಕದ ಪ್ರತಿಯನ್ನು ಸ್ವೀಕರಿಸಿದ ಪ್ರತಿಯೊಬ್ಬ ಪೋಲಿಂಗ್ ಏಜೆಂಟನು, ಆಯೋಗವು ನಿಗದಿಪಡಿಸಿದ ಮತ್ತು ಪ್ರಿಸ್ಯೆಡಿಂಗ್ ಆಫೀಸರ್‌ರವರು ಮತದಾನ ಮುಕ್ತಾಯವಾದಾಗ ಮಾಡಿದ ಘೋಷಣಾ ಪತ್ರಕ್ಕೆ (ಪರಿಶಿಷ್ಟ ಖಖಖ ಭಾಗ III) ತನ್ನ ಪೂರ್ಣ ಸಹಿ ಮಾಡಬೇಕು. ಮತಪತ್ರಗಳ ಲೆಕ್ಕದ ಪ್ರತಿಯನ್ನು ತೆಗೆದುಕೊಳ್ಳಲು ಯಾರಾದರೂ ಪೋಲಿಂಗ್ ಏಜೆಂಟ್ ನಿರಾಕರಿಸಿದರೆ ಪ್ರಿಸ್ಯೆಡಿಂಗ್ ಆಫೀಸರ್‌ರವರು ಅಂತಹವರ ಹೆಸರನ್ನು ಆ ಘೋಷಣೆಯಲ್ಲಿ ಬರೆದುಕೊಳ್ಳತಕ್ಕದ್ದು.

**ಮತದಾನ ಮುಕ್ತಾಯವಾದ ತರುವಾಯ ಮತಯಂತ್ರವನ್ನು ಸೀಲು ಮಾಡುವುದು**

50.4 ಮತದಾನ ಮುಕ್ತಾಯವಾಗಿ ಮತಯಂತ್ರದಲ್ಲಿ ದಾಖಲಾದ ಮತಗಳ ಲೆಕ್ಕವನ್ನು ನಮೂನೆ 17ಸಿ ನಲ್ಲಿ ತಯಾರಿಸಿದ ಮತ್ತು ಅದರ ಪ್ರತಿಗಳನ್ನು ಹಾಜರಿರುವ ಪೋಲಿಂಗ್ ಏಜೆಂಟರಿಗೆ ಒದಗಿಸಿದ ತರುವಾಯ ಪ್ರಿಸ್ಯೆಡಿಂಗ್ ಆಫೀಸರ್ ಅವರು ಮತಯಂತ್ರವನ್ನು ಎಣಿಕೆ: ಸಂಗ್ರಹಣಾ ಕೇಂದ್ರಕ್ಕೆ ಸಾಗಿಸುವುದಕ್ಕಾಗಿ ಸೀಲು ಮಾಡಿ ಭದ್ರಪಡಿಸತಕ್ಕದ್ದು.

50.5 ಮತಯಂತ್ರವನ್ನು ಸೀಲು ಮಾಡಿ ಭದ್ರಪಡಿಸುವುದಕ್ಕಾಗಿ, ಬ್ಯಾಲೆಟಿಂಗ್ ಯೂನಿಟ್ (ಗಳು) ಮತ್ತು ಕಂಟ್ರೋಲ್ ಯೂನಿಟ್ ಮತ್ತು ವಿವಿಪ್ಯಾಟ್‌ಗಳ ನಡುವಿನ ಸಂಪರ್ಕವನ್ನು ಬೇರ್ಪಡಿಸತಕ್ಕದ್ದು ಮತ್ತು ಕಂಟ್ರೋಲ್ ಯೂನಿಟ್‌ನ ಪವರ್ ಸ್ವಿಚ್‌ನ್ನು OFF ಮಾಡತಕ್ಕದ್ದು. ಬ್ಯಾಲೆಟಿಂಗ್ ಯೂನಿಟ್‌ಗಳು ಮತ್ತು ಕಂಟ್ರೋಲ್ ಯೂನಿಟ್ ಮತ್ತು ವಿವಿಪ್ಯಾಟ್‌ಗಳನ್ನು ಅವುಗಳ ಕ್ಯಾರಿಯಿಂಗ್ ಕೇಸುಗಳಲ್ಲಿ ಹಾಕಿ ಇರಿಸತಕ್ಕದ್ದು. ಆ ತರುವಾಯ ಈ ಕ್ಯಾರಿಯಿಂಗ್ ಕೇಸುಗಳನ್ನು ಅವುಗಳ ಎರಡೂ ಬದಿಗಳಲ್ಲೂ, ಚುನಾವಣೆ ಹಾಗೂ ಮತಗಟ್ಟೆಗಳ ವಿವರವನ್ನು

ತೋರಿಸುವ ವಿಳಾಸದ ಟ್ಯಾಗಿನ ಮೇಲೆ ಪ್ರಿಸೈಡಿಂಗ್ ಆಫೀಸರ್‌ರ ಸೀಲು ಹಾಕಿ ಮೊಹರು ಮಾಡತಕ್ಕದ್ದು.

50.6 ಹಾಜರಿದ್ದು ತಮ್ಮ ಸೀಲುಗಳನ್ನು ಹಾಕಲು ಇಚ್ಛಿಸುವ ಅಭ್ಯರ್ಥಿಗಳು ಅಥವಾ ಅವರ ಪೋಲಿಂಗ್ ಏಜೆಂಟರುಗಳು ಕ್ಯಾರಿಯಿಂಗ್ ಕೇಸುಗಳ ಮೇಲೆ ಸೀಲು ಹಾಕಲು ಅವಕಾಶ ನೀಡತಕ್ಕದ್ದು.

50.7 ಮತದಾನದ ಅಂತ್ಯದಲ್ಲಿ ತಾನು ಮಾಡಲಿರುವ ಘೋಷಣೆಯಲ್ಲಿ ಪರಿಶಿಷ್ಟ IV ರ ಭಾಗ IV ನೋಡಿ ಪ್ರಿಸೈಡಿಂಗ್ ಆಫೀಸರ್‌ರು ಬ್ಯಾಲೆಟಿಂಗ್ ಯೂನಿಟ್‌ಗಳು ಮತ್ತು ಕಂಟ್ರೋಲ್ ಯೂನಿಟ್‌ನ ಕ್ಯಾರಿಯಿಂಗ್ ಕೇಸುಗಳ ಮೇಲೆ ತಮ್ಮ ಸೀಲನ್ನು ಹಾಕಿರುವಂತಹ ಅಭ್ಯರ್ಥಿಗಳ/ಪೋಲಿಂಗ್ ಏಜೆಂಟ್‌ಗಳ ಹೆಸರುಗಳನ್ನು ಬರೆಯತಕ್ಕದ್ದು.

**ಚುನಾವಣಾ ಕಾಗದಪತ್ರಗಳನ್ನು ಮೊಹರು ಮಾಡುವುದು–ಪೋಲಿಂಗ್ ಏಜೆಂಟರು ಅವುಗಳಿಗೆ ತಮ್ಮ ಮೊಹರುಗಳನ್ನು ಹಾಕುವುದು**

50.8 ಮತದಾನ ಮುಕ್ತಾಯವಾದ ನಂತರ ಪ್ರಿಸೈಡಿಂಗ್ ಆಫೀಸರ್‌ರವರು, ನಿಯಮಗಳ ಮತ್ತು ಚುನಾವಣಾ ಆಯೋಗದ ಸೂಚನೆಗಳ ಪ್ರಕಾರ ಎಲ್ಲಾ ಚುನಾವಣಾ ಕಾಗದ ಪತ್ರಗಳನ್ನು ಪ್ರತ್ಯೇಕ ಪ್ಯಾಕೆಟ್ಟುಗಳಲ್ಲಿಟ್ಟು ಮೊಹರು ಮಾಡುತ್ತಾರೆ. ಮತಗಟ್ಟೆಯಲ್ಲಿ ಹಾಜರಿರುವ ಪೋಲಿಂಗ್ ಏಜೆಂಟರಿಗೂ ಸಹ ಈ ಮುಂದಿನ ದಸ್ತಾವೇಜುಗಳು ಇರುವ ಲಕೋಟೆಗಳ ಮೇಲೆ ಹಾಗೂ ಪ್ಯಾಕೆಟ್‌ಗಳ ಮೇಲೆ ಪ್ರಿಸೈಡಿಂಗ್ ಆಫೀಸರ್‌ರ ಮೊಹರಿನ ಜೊತೆಗೆ ತಮ್ಮ ಮೊಹರುಗಳನ್ನು ಹಾಕಲು ಅನುಮತಿ ಕೊಡಲಾಗುತ್ತದೆ:–

(i) ಮತದಾರರ ಪಟ್ಟಿಯ ಅಧಿಕೃತ ಪ್ರತಿ (ಮಾರ್ಕ್ಡ್ ಕಾಪಿ);

(ii) ಮತದಾರರ ರಿಜಿಸ್ಟರು;

(iii) ಮತದಾರರ ಚೀಟಿಗಳು (ವೋಟರ್ಸ್ ಸ್ಲಿಪ್ಸ್);

(iv) ಟೆಂಡರ್ಡ್ ಮತಪತ್ರಗಳು ಮತ್ತು ನಮೂನೆ 17ಬಿ ನಲ್ಲಿರುವ ಟೆಂಡರ್ಡ್ ಮತಗಳ ಪಟ್ಟಿ;

(v) ಬಳಸದೇ ಇರುವ ಟೆಂಡರ್ಡ್ ಮತಗಳು;

(vi) ಆಕ್ಷೇಪಿಸಿದ (ಚಾಲೆಂಜ್ಡ್) ಮತಗಳ ಪಟ್ಟಿ;

(vii) ಬಳಸದ ಮತ್ತು ಹರಿದುಹೋದ ಕಾಗದದ ಸೀಲುಗಳೇನಾದರೂ ಇದ್ದರೆ, ಅವು;

(viii) ಪೋಲಿಂಗ್ ಏಜೆಂಟರ ನೇಮಕ ಪತ್ರಗಳು; ಮತ್ತು

(ix) ಮೊಹರು ಮಾಡಿದ ಪ್ಯಾಕೆಟ್‌ನಲ್ಲಿ ಇಡಲು ರಿಟರ್ನಿಂಗ್ ಆಫೀಸರ್ ಸೂಚಿಸಿರುವ ಇತರೆ ಯಾವುವೇ ಕಾಗದ ಪತ್ರಗಳು.

50.9 ಪೋಲಿಂಗ್ ಏಜೆಂಟನ ಅಭ್ಯರ್ಥಿಯ ಹಿತದೃಷ್ಟಿಯಿಂದ, ಚುನಾವಣಾ ಕಾಗದಪತ್ರಗಳನ್ನಿಟ್ಟಿರುವ ಪ್ಯಾಕೆಟ್ಟುಗಳ ಮೇಲೆ ಆತ/ಆಕೆಯು ತಮ್ಮ ಮೊಹರನ್ನು ಹಾಕುವುದು ಒಳ್ಳೆಯದು.

**51. ಸಂಗ್ರಹಣೆ ಮತ್ತು ದಾಸ್ತಾನು ಕೇಂದ್ರಕ್ಕೆ ಮತಯಂತ್ರ ಮತ್ತು ಚುನಾವಣಾ ಕಾಗದಗಳನ್ನು ಸಾಗಿಸುವುದು**

51.1 ಮತಯಂತ್ರ ಮತ್ತು ಎಲ್ಲಾ ಚುನಾವಣಾ ಕಾಗದ ಪತ್ರಗಳನ್ನು ಸೀಲು ಮಾಡಿ ಭದ್ರಪಡಿಸಿದ ಮೇಲೆ ಪ್ರಿಸೈಡಿಂಗ್ ಆಫೀಸರ್‌ರು ಅವನ್ನು ಸಂಗ್ರಹಣಾ ದಾಸ್ತಾನು ಕೇಂದ್ರಕ್ಕೆ ವಶಾವಣೆ ಮಾಡುತ್ತಾರೆ ಅಥವಾ ವಶಾವಣೆ ಮಾಡುವಂತೆ ಮಾಡುತ್ತಾರೆ.

**52. ಪೋಲೀಂಗ್ ಏಜೆಂಟರು ಮತಯಂತ್ರಗಳನ್ನು ಕೊಂಡೊಯ್ಯುವ ವಾಹನಗಳ ಜೊತೆಯಲ್ಲಿ ಹೋಗುವುದು**

52.1 ಇವಿಎಂ ಮತ್ತು ವಿವಿಪ್ಯಾಟ್ ಮತ್ತು ಚುನಾವಣೆ ಪತ್ರಗಳನ್ನು ಸಂಗ್ರಹಣೆ/ದಾಸ್ತಾನು ಕೇಂದ್ರಕ್ಕೆ ಕೊಂಡೊಯ್ಯುವ ವಾಹನದ ಜೊತೆಯಲ್ಲಿ ಹೋಗಲು ಪೋಲಿಂಗ್ ಏಜೆಂಟರಾದ ನಿಮಗೆ ಅನುಮತಿ ನೀಡಲಾಗಿದೆ. ಆದರೆ, ಆತ/ಆಕೆ ತನ್ನದೇ ಸಾರಿಗೆ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕು ಮತ್ತು ಮತಯಂತ್ರ ಹಾಗೂ ಚುನಾವಣಾ ಕಾಗದ ಪತ್ರಗಳನ್ನು ಕೊಂಡೊಯ್ಯುತ್ತಿರುವ ವಾಹನದಲ್ಲಿ ಪ್ರಯಾಣ ಮಾಡಲು ನಿಮಗೆ ಅವಕಾಶ ಇರುವುದಿಲ್ಲ.

**53. ದೊಂಬಿ, ಮತಗಟ್ಟೆಯನ್ನು ಬಲವಂತವಾಗಿ ವಶಪಡಿಸಿಕೊಳ್ಳುವುದು, ಮುಂತಾದ ಕಾರಣಗಳಿಗಾಗಿ ಮತದಾನದ ಮುಂದೂಡುವಿಕೆ**

53.1 ವಾಡಿಕೆಯಂತೆ ಮತದಾನವು ಮುಕ್ತಾಯವಾಗುವುದಕ್ಕೂ ಮೊದಲು, ದೊಂಬಿಯಾದಲ್ಲಿ ಅಥವಾ ಯಾವುದೇ ಹಿಂಸಾಚಾರಕ್ಕೆ ಅಥವಾ ಮತಗಟ್ಟೆ ವಶಪಡಿಸಿಕೊಳ್ಳುವುದಕ್ಕೆ ಯಾವುದೇ ಪ್ರಯತ್ನ ಆದಲ್ಲಿ, ಅಂಥ ಪರಿಸ್ಥಿತಿಯು ಪ್ರಿಸೈಡಿಂಗ್ ಆಫೀಸರ್‌ರ ನಿಯಂತ್ರಣಕ್ಕೆ ಮೀರಿದ್ದು, ಇದರಿಂದಾಗಿ ಮತದಾನವನ್ನು ಮುಂದುವರಿಸಲು ಸಾಧ್ಯವಾಗದಿದ್ದಲ್ಲಿ ಪ್ರಿಸೈಡಿಂಗ್ ಆಫೀಸರ್‌ರವರು ಮತದಾನವನ್ನು ಮುಂದೂಡಬಹುದು ಅಥವಾ ನಿಲ್ಲಿಸಬಹುದು. ಮತಯಂತ್ರವನ್ನು ಕಾನೂನು ವಿರುದ್ಧವಾಗಿ ಕೆಡಿಸಿ ಹಾಕಿದರೆ ಅಥವಾ ಯಾವುದೇ ನೈಸರ್ಗಿಕ ವಿಕೋಪ ಅಥವಾ ಇತರ

ಸಾಕಷ್ಟು ಕಾರಣದಿಂದಾಗಿ ಮತಗಳನ್ನು ದಾಖಲು ಮಾಡಿಕೊಳ್ಳುವುದು ಅಸಾಧ್ಯವಾದರೆ ಆಗಲೂ ಆತ ಮತದಾನವನ್ನು ಮುಂದೂಡಬಹುದು ಅಥವಾ ನಿಲ್ಲಿಸಿಬಿಡಬಹುದು. ಸ್ವಲ್ಪ ಕಾಲದಲ್ಲಿ ಬಿದ್ದು ನಿಂತು ಹೋಗುವ ಮಳೆ, ಬಲವಾಗಿ ಬೀಸುವ ಗಾಳಿ ಅಥವಾ ಮತಗಟ್ಟೆ ಸುತ್ತ ಸಣ್ಣಪುಟ್ಟ ಗಲಭೆಗಳನ್ನು ಮತದಾನ ಮುಂದೂಡಲು ಸಾಕಷ್ಟು ಕಾರಣವೆಂದು ಪರಿಗಣಿಸಬಾರದು. ಆದಾಗ್ಯೂ, ಎರಡು ಗಂಟೆಗಳು ಕಳೆದರೂ ಮತದಾನ ಪ್ರಾರಂಭವಾಗಲು ಸಾಧ್ಯವಾಗದ ಮತದಾನ ಕೇಂದ್ರಗಳಲ್ಲಿ ಮತದಾನ ಮುಂದೂಡಿಕೆಯ ಬಗ್ಗೆ ಆದೇಶ ಹೊರಡಿಸಬಹುದೆಂದು ಆಯೋಗವು ತೀರ್ಮಾನಿಸಿದೆ. ಮೇಲ್ಕಂಡ ಕಾರಣಗಳಿಗಾಗಿ ಮತದಾನದ ಕಾರ್ಯವಿಧಾನಗಳನ್ನು ತಾತ್ಕಾಲಿಕವಾಗಿ ನಿಲ್ಲಿಸಿದ್ದರೆ ಅದು ವಿಧ್ಯುಕ್ತವಾಗಿ ಮತದಾನದ ಮುಂದೂಡುವಿಕೆ ಎಂದಾಗುವುದಿಲ್ಲ. ವಿಧ್ಯುಕ್ತವಾಗಿ ಮತದಾನವನ್ನು ಮುಂದೂಡಿದರೆ ಅಥವಾ ನಿಲ್ಲಿಸಿದ್ದರೆ ಪ್ರಿಸೈಡಿಂಗ್ ಆಫೀಸರ್‌ರು ಹಾಜರಿರುವ ಎಲ್ಲರಿಗೂ ತರುವಾಯದಲ್ಲಿ ಅಧಿಸೂಚಿಸುವ ದಿನಾಂಕದಂದು ಮತದಾನ ನಡೆಯುವುದೆಂದು ಪ್ರಕಟಿಸುತ್ತಾರೆ. ಆ ತರುವಾಯ ಅವರು ವಾಡಿಕೆಯಂತೆ ಮತದಾನ ಮುಕ್ತಾಯವಾಗಿದೆ ಎಂಬ ರೀತಿಯಲ್ಲಿ ಪೋಲಿಂಗ್ ಏಜೆಂಟ್‌ರ ಸಮ್ಮುಖದಲ್ಲಿ ಮತಯಂತ್ರ ಮತ್ತು ಚುನಾವಣಾ ದಾಖಲೆಗಳನ್ನು ಸೀಲು ಮಾಡಿ ಭದ್ರಪಡಿಸುತ್ತಾರೆ.

**54. ಮತಗಟ್ಟೆಯ ಒಳಗಡೆ ಅಥವಾ ಅದರ ಸಮೀಪದಲ್ಲಿ ಅಶಿಸ್ತಿನ ನಡತೆ**

54.1 ಮತಗಟ್ಟೆಯ ಒಳಗಡೆ ಅಥವಾ ಅದರ ಸಮೀಪದಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ, ಶಿಸ್ತಿನಿಂದ ನಡೆದುಕೊಳ್ಳುವುದು ಮತ್ತು ಪ್ರಿಸೈಡಿಂಗ್ ಆಫೀಸರ್‌ರವರ ಕಾನೂನು ಸಮ್ಮತ ನಿರ್ದೇಶನಗಳನ್ನು ಪಾಲಿಸಬೇಕಾದದ್ದು ಅತ್ಯಗತ್ಯ. ಪೋಲಿಂಗ್ ಏಜೆಂಟರಾದ ನೀವು, ಮತಗಟ್ಟೆಯಲ್ಲಿ ಕಟ್ಟುನಿಟ್ಟಿನ ಶಿಸ್ತಿನಿಂದಿರಬೇಕು ಮತ್ತು ಸರಿಯಾಗಿ ನಡೆದುಕೊಳ್ಳಬೇಕು. ಯಾರೇ ವ್ಯಕ್ತಿಯು ಅನುಚಿತವಾಗಿ ನಡೆದುಕೊಂಡರೆ ಅಥವಾ ದುರ್ನಡತೆ ಎಸಗಿದರೆ ಅಥವಾ ಪ್ರಿಸೈಡಿಂಗ್ ಆಫೀಸರ್‌ರವರ ಕಾನೂನು ಸಮ್ಮತ ನಿರ್ದೇಶನಗಳನ್ನು ಪಾಲಿಸಲು ತಪ್ಪಿದರೆ ಪ್ರಿಸೈಡಿಂಗ್ ಆಫೀಸರ್‌ರವರಿಗೆ ಅಂತಹ ವ್ಯಕ್ತಿಗಳನ್ನು ಮತಗಟ್ಟೆಯ ಹೊರಕ್ಕೆ ಕಳುಹಿಸುವ ಅಧಿಕಾರ ಇದೆ. ಅಂತಹ ಯಾರೇ ವ್ಯಕ್ತಿಯು ಪ್ರಿಸೈಡಿಂಗ್ ಆಫೀಸರ್‌ರವರ ಅನುಮತಿ ಇಲ್ಲದೆ ಮತಗಟ್ಟೆಯನ್ನು ಪುನಃ ಪ್ರವೇಶಿಸಿದರೆ ಅಂತಹವರನ್ನು ಬಂಧಿಸಬಹುದು ಮತ್ತು ಮೂರು ತಿಂಗಳವರೆಗೆ ವಿಸ್ತರಿಸಬಹುದಾದಂತಹ ಸೆರೆಮನೆ ವಾಸವನ್ನು ಅಥವಾ ಜುಲ್ಮಾನೆಯನ್ನು ಅಥವಾ ಎರಡನ್ನೂ ವಿಧಿಸಬಹುದಾದಂತಹ

ಚುನಾವಣಾ ಅಪರಾಧಕ್ಕಾಗಿ ಕಾನೂನು ಕ್ರಮ ಜರುಗಿಸಬಹುದು (ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ ಪ್ರಕರಣ 132).

**55. ಮತಗಟ್ಟೆಗಳಿಂದ ಮತಯಂತ್ರವನ್ನು ತೆಗೆದುಕೊಂಡು ಹೋಗುವುದು ಅಥವಾ ಅದನ್ನು ಹಾಳು ಮಾಡುವುದು ಅಪರಾಧ**

55.1 ಯಾವುದೇ ಚುನಾವಣೆಯಲ್ಲಿ ಯಾರೇ ವ್ಯಕ್ತಿಯು, ಮತಗಟ್ಟೆಯಿಂದ ಇವಿಎಂ ಅನ್ನು ಮೋಸದಿಂದ ಅಥವಾ ಅನಧಿಕೃತವಾಗಿ ತೆಗೆದುಕೊಂಡು ಹೋದರೆ ಅಥವಾ ತೆಗೆದುಕೊಂಡು ಹೋಗಲು ಪ್ರಯತ್ನಿಸಿದರೆ ಅಥವಾ ಅಂತಹ ಕೆಲಸಕ್ಕೆ ಉದ್ದೇಶಪೂರ್ವಕವಾಗಿ ಸಹಕರಿಸಿದರೆ ಅಥವಾ ಆ ದುಷ್ಕಾರ್ಯದಲ್ಲಿ ನೆರವಾದರೆ ಅಂತಹ ವರ್ತನೆಯು ಚುನಾವಣಾ ಅಪರಾಧವಾಗುತ್ತದೆ. ಆ ಅಪರಾಧವು ಸಂಜ್ಞೇಯವಾದುದಾಗುತ್ತದೆ ಮತ್ತು ಒಂದು ವರ್ಷದ ಅವಧಿಯವರೆಗೆ ವಿಸ್ತರಿಸಬಹುದಾದಂತಹ ಸೆರೆಮನೆ ವಾಸ ಅಥವಾ ರೂ.500ರವರೆಗೆ ವಿಸ್ತರಿಸಬಹುದಾದಂತಹ ಜುಲ್ಮಾನೆಯನ್ನು ಅಥವಾ ಇವೆರಡನ್ನೂ ವಿಧಿಸಬಹುದಾದಂತಹ ಅಪರಾಧವಾಗುತ್ತದೆ. (ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 135ನೇ ಪ್ರಕರಣ ಮತ್ತು 61ಎ ಪ್ರಕರಣದ ವಿವರಣೆ)

55.2 ಅದೇ ರೀತಿ, ಸೂಕ್ತ ಅನುಮತಿ ಇಲ್ಲದೆ ಅನಧಿಕೃತವಾಗಿ ಯಾವುದೇ ಇವಿಎಂ ಅನ್ನು ಸ್ವೀಕರಿಸುವುದು ಅಥವಾ ಹೊಂದಿರುವುದು ಅಥವಾ ಯಾವುದೇ ಇವಿಎಂ ಅನ್ನು ಹಾಳು ಮಾಡುವುದು ಸಹ ಸಂಜ್ಞೇಯ ಚುನಾವಣಾ ಅಪರಾಧವಾಗುತ್ತದೆ ಮತ್ತು ಆರು ತಿಂಗಳವರೆಗೆ ವಿಸ್ತರಿಸಬಹುದಾದಂತಹ ಸೆರೆವಾಸವನ್ನು ಅಥವಾ ಜುಲ್ಮಾನೆಯನ್ನು ಅಥವಾ ಎರಡನ್ನೂ ವಿಧಿಸಬಹುದಾದಂತಹ ಅಪರಾಧವಾಗುತ್ತದೆ. (ಅದೇ ಅಧಿನಿಯಮದ ಪ್ರಕರಣ 136)

**56. ಪ್ರಚಾರ ಮಾಡುವುದಕ್ಕೆ ನಿಷೇಧ**

56.1 ಮತಗಟ್ಟೆಯಿಂದ 100 ಮೀಟರುಗಳ ಒಳಗೆ ಪ್ರಚಾರ ಮಾಡುವುದು ಒಂದು ಅಪರಾಧವಾಗುತ್ತದೆ. ಹಾಗೆ ಮಾಡುವ ಯಾರೇ ವ್ಯಕ್ತಿಯನ್ನು ವಾರೆಂಟ್ ಇಲ್ಲದೆಯೇ ಪೊಲೀಸಿನವರು ಬಂಧಿಸಬಹುದು ಮತ್ತು 1951ರ ಜನತಾ ಪ್ರಾತಿನಿಧ್ಯ ಅಧಿನಿಯಮದ 130ನೇ ಪ್ರಕರಣದ ಮೇರೆಗೆ ಅವರ ಮೇಲೆ ಕಾನೂನು ಕ್ರಮ ಕೈಗೊಳ್ಳಬಹುದು. ಅದೇ ರೀತಿ, ಆಯೋಗದ ನಿರ್ದೇಶನದಂತೆ, ಮತದಾನದ ದಿನ ಮತಗಟ್ಟೆಯಿಂದ 200 ಮೀಟರುಗಳ ಒಳಗೆ ಉಮೇದುವಾರರು ಯಾವುದೇ ಕ್ಯಾಂಪುಗಳನ್ನು ಹಾಕುವುದನ್ನು ನಿಷೇಧಿಸಲಾಗಿದೆ ಮತ್ತು ಅಂತಹ ನಿರ್ದೇಶನಗಳನ್ನು ಉಲ್ಲಂಘಿಸಿ ಕ್ಯಾಂಪುಗಳನ್ನು ಹಾಕಿದರೆ ಸಂಬಂಧಪಟ್ಟ ಅಧಿಕಾರಿಗಳು ಅವುಗಳನ್ನು ತೆಗೆದುಹಾಕುತ್ತಾರೆ.

# ಪರಿಶಿಷ್ಟ – I

(ಪ್ಯಾರಾ 7.1)

## ನಮೂನೆ 10

(ನಿಯಮ 13(2)ನ್ನು ನೋಡಿ)

ಪೋಲಿಂಗ್ ಏಜೆಂಟರ ನೇಮಕಾತಿ*

** ಗೆ ನಡೆಯುವ ಚುನಾವಣೆಯಲ್ಲಿ ಮೇಲ್ಕಂಡ ಚುನಾವಣೆಯಲ್ಲಿ ಅಭ್ಯರ್ಥಿಯಾಗಿರುವ/ ಅಭ್ಯರ್ಥಿಯ ಚುನಾವಣಾ ಏಜೆಂಟ್ ಆಗಿರುವ + ಎಂಬ ನಾನು ಸ್ಥಳದಲ್ಲಿ ನಡೆಯುವ ಮತದಾನಕ್ಕಾಗಿ ನಿಗದಿಪಡಿಸಿರುವ ಮತಗಟ್ಟೆ ಸಂಖ್ಯೆ:

ಇಲ್ಲಿಗೆ ಪೋಲಿಂಗ್ ಏಜೆಂಟ್ ಆಗಿ ಹಾಜರಿರಲು · ಸ್ಥಳದ ಇವರನ್ನು ಈ ಮೂಲಕ ಪೋಲಿಂಗ್ ಏಜೆಂಟ್ ಆಗಿ ನೇಮಕ ಮಾಡಿದ್ದೇನೆ.

ಸ್ಥಳ :-----------

ದಿನಾಂಕ:----------- ಅಭ್ಯರ್ಥಿ/ಚುನಾವಣಾ ಏಜೆಂಟ್‌ರ ಸಹಿ

ನಾನು ಅಂತಹ ಪೋಲಿಂಗ್ ಏಜೆಂಟ್ ಆಗಿ ಕಾರ್ಯನಿರ್ವಹಿಸಲು ಒಪ್ಪಿದ್ದೇನೆ.

ಸ್ಥಳ : -----------

ದಿನಾಂಕ: ------------ ಪೋಲಿಂಗ್ ಏಜೆಂಟ್‌ರ ಸಹಿ

## ಪ್ರಿಸೈಡಿಂಗ್ ಆಫೀಸರ್ ಸಮ್ಮುಖದಲ್ಲಿ ಪೋಲಿಂಗ್ ಏಜೆಂಟರ ಸಹಿ ಮಾಡಬೇಕಾಗಿರುವ ಘೋಷಣೆ ಪತ್ರ

ನಾನು ಓದಿದ/ ನನಗೆ ಓದಿ ಹೇಳಿದ, ಜನತಾ ಪ್ರಾತಿನಿಧ್ಯ ಅಧಿನಿಯಮ, 1951 ರ 128ನೇ ಪ್ರಕರಣದಲ್ಲಿ ನಿಷೇಧಿಸಿರುವ ಯಾವುದೇ ಕೆಲಸವನ್ನು ಮೇಲ್ಕಂಡ ಚುನಾವಣೆಯಲ್ಲಿ ಮಾಡುವುದಿಲ್ಲವೆಂದು ಈ ಮೂಲಕ ನಾನು ಘೋಷಿಸುತ್ತೇನೆ.

ದಿನಾಂಕ: . . . . . . . . ಪೋಲಿಂಗ್ ಏಜೆಂಟ್‌ರ ಸಹಿ

ನನ್ನ ಸಮಕ್ಷಮ ಸಹಿ ಮಾಡಲಾಗಿದೆ.

ದಿನಾಂಕ: . . . . . . . . ಪ್ರಿಸೈಡಿಂಗ್ ಆಫೀಸರ್

* ಮತಗಟ್ಟೆಯಲ್ಲಿ ಅಥವಾ ಮತದಾನಕ್ಕೆ ನಿಗದಿಪಡಿಸಿರುವ ಸ್ಥಳದಲ್ಲಿ ಹಾಜರುಪಡಿಸುವುದಕ್ಕಾಗಿ ಇದನ್ನು ಪೋಲಿಂಗ್ ಏಜೆಂಟನಿಗೆ ಕೊಡಬೇಕು.

** ಈ ಮುಂದಿನವುಗಳಲ್ಲಿ ಸೂಕ್ತವಾಗಿರುವ ಯಾವುದಾದರೂ ಒಂದನ್ನು ಇಲ್ಲಿ ಬರೆಯಬೇಕು.

(1) . . . . . . . . . . . . . . . ಚುನಾವಣಾ ಕ್ಷೇತ್ರದಿಂದ ಲೋಕಸಭೆಗೆ

(2) . . . . . . . . . . . . . . . ಚುನಾವಣಾ ಕ್ಷೇತ್ರದಿಂದ ವಿಧಾನಸಭೆಗೆ

(3) . . . . . . . . . . . . . . . (ರಾಜ್ಯ)ದ ವಿಧಾನಸಭೆಯ ಚುನಾಯಿತ ಸದಸ್ಯರಿಂದ ರಾಜ್ಯಸಭೆಗೆ

(4) . . . . . . . . . . . . (ಕೇಂದ್ರಾಡಳಿತ ಪ್ರದೇಶ) ದ ಮತದಾರ ಗಣದ ಸದಸ್ಯರಿಂದ ರಾಜ್ಯ ಸಭೆಗೆ

(5) ವಿಧಾನಸಭಾ ಸದಸ್ಯರಿಂದ ವಿಧಾನ ಪರಿಷತ್ತಿಗೆ

(6) . . . . . . . . . . . . . . . ಚುನಾವಣಾ ಕ್ಷೇತ್ರದಿಂದ ವಿಧಾನ ಪರಿಷತ್ತಿಗೆ

\+ ಸೂಕ್ತವಲ್ಲದ ಪರ್ಯಾಯ ಪದಗಳನ್ನು ಹೊಡೆದುಹಾಕಿ.

\# 1951 ರ ಜನತಾ ಪ್ರಾತಿನಿಧ್ಯ ಅಧಿನಿಯಮದ 128 ನೇ ಪ್ರಕರಣ :–

“128 ಮತದಾನ ರಹಸ್ಯವನ್ನು ಕಾಪಾಡುವುದು:– (1) ಚುನಾವಣೆಯಲ್ಲಿ ದಾಖಲು ಮಾಡುವ ಅಥವಾ ಮತಗಳನ್ನು ಎಣಿಸುವ ಸಂಬಂಧ ಯಾವುದೇ ಕೆಲಸವನ್ನು ನಿರ್ವಹಿಸುವ ಪ್ರತಿಯೊಬ್ಬ ಅಧಿಕಾರಿಯು, ಗುಮಾಸ್ತನು, ಏಜೆಂಟನು ಅಥವಾ ಇತರ ವ್ಯಕ್ತಿಯು ಮತದಾನದ ರಹಸ್ಯವನ್ನು ಕಾಪಾಡತಕ್ಕದ್ದು ಮತ್ತು ಕಾಪಾಡಲು ಸಹಾಯ ಮಾಡತಕ್ಕದ್ದು ಮತ್ತು ಅಂತಹ ರಹಸ್ಯವನ್ನು ಭಂಗಗೊಳಿಸುವ ಉದ್ದೇಶದ ಯಾವುದೇ ಮಾಹಿತಿಯನ್ನು ಯಾರೇ ವ್ಯಕ್ತಿಗಳಿಗೆ ತಿಳಿಸಬಾರದು. (ಕೆಲವು ಉದ್ದೇಶದಿಂದ ಯಾವುದೇ ಕಾನೂನಿನ ಮೇರೆಗೆ ಅಥವಾ ಅದರಿಂದ ಅಧಿಕಾರ ನೀಡಿದಾಗ ಹೊರತು).

(2) ಯಾವುದೇ ವ್ಯಕ್ತಿಯು, ಉಪ–ಪ್ರಕರಣ (1) ರ ನಿಬಂಧನೆಗಳನ್ನು ಉಲ್ಲಂಘಿಸಿದರೆ ಅವನು, ಮೂರು ತಿಂಗಳ ಅವಧಿಯವರೆಗೆ ವಿಸ್ತರಿಸಬಹುದಾದಂತಹ ಕಾರಾಗೃಹ ವಾಸ ಅಥವಾ ಜುಲ್ಮಾನೆ ಅಥವಾ ಎರಡೂ ಶಿಕ್ಷೆಯಿಂದ ದಂಡಿತನಾಗತಕ್ಕದ್ದು.

**ಪರಿಶಿಷ್ಟ – I(ಎ)**

(ಪ್ಯಾರಾ 7.2 ಮತ್ತು 7.4ನ್ನು ನೋಡಿ)

**ಅಭ್ಯರ್ಥಿಗಳ ಮತ್ತು ಅವರ ಚುನಾವಣಾ ಏಜೆಂಟರ ಮಾದರಿ ಸಹಿಗಳ ಸಂಬಂಧದ ನಮೂನೆ**

* ಸಾರ್ವತ್ರಿಕ : ದ್ವಿವಾರ್ಷಿಕ : ಉಪ ಚುನಾವಣೆ ------------- (ತಿಂಗಳು : ವರ್ಷ)

* ವಿಧಾನಸಭಾ ಕ್ಷೇತ್ರ ಸಂಖ್ಯೆ ಮತ್ತು ಹೆಸರು -------------

* ಲೋಕಸಭಾ ಕ್ಷೇತ್ರ

ವಿಧಾನ ಪರಿಷತ್ತು

(* ಅನ್ವಯವಾಗದಿರುವುದನ್ನು ಹೊಡೆದುಹಾಕಿ)

ಮತದಾನದ ಸಮಯದಲ್ಲಿ ಪೋಲಿಂಗ್ ಏಜೆಂಟರ ನೇಮಕ ಪತ್ರದಲ್ಲಿ, ಪ್ರಿಸೈಡಿಂಗ್ ಆಫೀಸರ್‌ರವರು, ಅಭ್ಯರ್ಥಿಗಳ ಹಾಗೂ ಅವರ ಚುನಾವಣಾ ಏಜೆಂಟರ ಸಹಿಗಳನ್ನು ಹೋಲಿಸಿ ನೋಡುವ ಉದ್ದೇಶಕ್ಕಾಗಿ ಸ್ಪರ್ಧಿಸುವ ಅಭ್ಯರ್ಥಿಗಳ ಹಾಗೂ ಅವರ ಚುನಾವಣಾ ಏಜೆಂಟರ ಮಾದರಿ ಸಹಿಗಳನ್ನು ಈ ಕೆಳಗೆ ಕೊಡಲಾಗಿದೆ:–

ಮಾದರಿ ಸಹಿ:

| | | | | |
|---|---|---|---|---|
| 1. | ಶ್ರೀ/ಶ್ರೀಮತಿ/ಕು (ಅಭ್ಯರ್ಥಿ ಸಂ.1) | – | ಶ್ರೀ/ಶ್ರೀಮತಿ/ಕು | – |
| 2. | ಶ್ರೀ/ಶ್ರೀಮತಿ/ಕು (ಅಭ್ಯರ್ಥಿ ಸಂ.2) | – | ಶ್ರೀ/ಶ್ರೀಮತಿ/ಕು | – |
| 3. | ಶ್ರೀ/ಶ್ರೀಮತಿ/ಕು (ಅಭ್ಯರ್ಥಿ ಸಂ.3) | – | ಶ್ರೀ/ಶ್ರೀಮತಿ/ಕು | – |
| | ಇತ್ಯಾದಿ. | | | |
| | ಇತ್ಯಾದಿ. | | | |

ಸ್ಥಳ :. . . . . . .

ದಿನಾಂಕ:. . . . . . .

ಸಹಿ
(ಮೊಹರು)
ರಿಟರ್ನಿಂಗ್ ಅಧಿಕಾರಿ

**ಪರಿಶಿಷ್ಟ – II**

(ಪ್ಯಾರಾ 8.1 ನ್ನು ನೋಡಿ)

(ನಿಯಮ 14(1) ನೋಡಿ)

ನಮೂನೆ 11

ಪೋಲಿಂಗ್ ಏಜೆಂಟರ ನೇಮಕವನ್ನು ರದ್ದುಮಾಡುವುದು

.................................................... ಚುನಾವಣೆ*.

ಇವರಿಗೆ,

ಪ್ರಿಸೈಡಿಂಗ್ ಅಧಿಕಾರಿ,

ಮೇಲಿನ ಚುನಾವಣೆಯಲ್ಲಿ ಅಭ್ಯರ್ಥಿಯಾದ .................................................... (ಇವರ ಚುನಾವಣಾ ಏಜೆಂಟ್ .................................................... ಆದ) ನಾನು ನನ್ನ : ಅವರ ಪೋಲಿಂಗ್ ಏಜೆಂಟರ ನೇಮಕವನ್ನು ಈ ಮೂಲಕ ರದ್ದುಮಾಡುತ್ತೇನೆ.

ಸ್ಥಳ :. . . . . . .

ದಿನಾಂಕ:. . . . . . . ರದ್ದುಗೊಳಿಸುವ ವ್ಯಕ್ತಿಯ ಸಹಿ

*ಈ ಮುಂದಿನವುಗಳಲ್ಲಿ ಸೂಕ್ತವಾದ ಒಂದು ಪರ್ಯಾಯವನ್ನು ಅಲ್ಲಿ ಸೇರಿಸಿರಿ:

1) . . . . . . . . . . . . . . . ಚುನಾವಣಾ ಕ್ಷೇತ್ರದಿಂದ ಲೋಕಸಭೆಗೆ
2) . . . . . . . . . . . . . . . ಚುನಾವಣಾ ಕ್ಷೇತ್ರದಿಂದ ವಿಧಾನಸಭೆಗೆ
3) . . . . . . . . . . . . . . . . (ರಾಜ್ಯ)ದ ವಿಧಾನಸಭೆಯ ಚುನಾಯಿತ ಸದಸ್ಯರಿಂದ ರಾಜ್ಯಸಭೆಗೆ
4) . . . . . . . . . . . . (ಕೇಂದ್ರಾಡಳಿತ ಪ್ರದೇಶ) ದ ಮತದಾರ ಗಣದ ಸದಸ್ಯರಿಂದ ರಾಜ್ಯ ಸಭೆಗೆ
5) ವಿಧಾನಸಭಾ ಸದಸ್ಯರಿಂದ ವಿಧಾನ ಪರಿಷತ್ತಿಗೆ
6) . . . . . . . . . . . . . . . ಚುನಾವಣಾ ಕ್ಷೇತ್ರದಿಂದ ವಿಧಾನ ಪರಿಷತ್ತಿಗೆ

ವಿ.ಸೂ. ಅಗತ್ಯಾನುಸಾರವಾಗಿ (––) ಗುರುತಿನಲ್ಲಿರುವುದನ್ನು ಬಿಟ್ಟುಬಿಡಿ.

## ಪರಿಶಿಷ್ಟ – III

## ಪ್ರಿಸೈಡಿಂಗ್ ಅಧಿಕಾರಿಯವರ ಘೋಷಣೆ

ಭಾಗ – I (ಪ್ಯಾರಾ 28.1)

ಮತದಾನವು ಪ್ರಾರಂಭವಾಗುವ ಮೊದಲು ಪ್ರಿಸೈಡಿಂಗ್ ಆಫೀಸರ್ ಅವರಿಂದ ಘೋಷಣೆ

. . . . . . . . . . . . . . . ಸಂಸತ್ತಿನ ವಿಧಾನಸಭಾ ಕ್ಷೇತ್ರಕ್ಕಾಗಿ ನಡೆಯುವ ಚುನಾವಣೆ

ಮತಗಟ್ಟೆಯ ಕ್ರಮಸಂಖ್ಯೆ ಮತ್ತು ಹೆಸರು . . . . . . . . . . . . . . . . .

ಮತದಾನದ ದಿನಾಂಕ . . . . . . . . . . . . . . .

ನಾನು ಈ ಮೂಲಕ ಘೋಷಿಸುವುದೇನೆಂದರೆ,

1) ಹಾಜರಿರುವ ಪೋಲಿಂಗ್ ಏಜೆಂಟ್ ಮತ್ತಿತರರಿಗೆ :–

ಎ) ಅಣಕು ಮತದಾನ ನಡೆಸಿ ಮತಯಂತ್ರ ಚೆನ್ನಾಗಿ ಕೆಲಸ ಮಾಡುತ್ತಿದೆ ಮತ್ತು ಅದರಲ್ಲಿ ಈಗಾಗಲೇ ಯಾವುದೇ ಮತವನ್ನು ದಾಖಲು ಮಾಡಿಲ್ಲ ಎಂಬುದನ್ನು;

ಬಿ) ಮತದಾನ ಸಮಯದಲ್ಲಿ ಬಳಸುವ ಮತದಾರರ ಅಧಿಕೃತ ಪಟ್ಟಿಯ (ಮಾರ್ಕ್ಡ್ ಕಾಪಿ) ಪ್ರತಿಯಲ್ಲಿ ಅಂಚೆ ಮತಪತ್ರಗಳು ಮತ್ತು ಚುನಾವಣಾ ಕರ್ತವ್ಯ ಪ್ರಮಾಣ ಪತ್ರಗಳಿಗೆ ಉಪಯೋಗಿಸುವ ಗುರುತುಗಳನ್ನು ಬಿಟ್ಟು ಇತರ ಯಾವುದೇ ಗುರುತಿಲ್ಲವೆಂದು;

ಸಿ) ಮತದಾನದ ಸಮಯದಲ್ಲಿ ಬಳಸುವ ಮತದಾರರ ರಿಜಿಸ್ಟರಿನಲ್ಲಿ (ನಮೂನೆ 17ಎ) ಯಾರೇ ಮತದಾರರ ಸಂಬಂಧದಲ್ಲಿ ಯಾವುದೇ ನಮೂನೆ ಇಲ್ಲ ಎಂಬುದನ್ನು – ಪ್ರತ್ಯಕ್ಷವಾಗಿ ತೋರಿಸಿರುತ್ತೇನೆ.

2) ಮತಯಂತ್ರದ ಕಂಟ್ರೋಲ್ ಯೂನಿಟ್ಟಿನ ಫಲಿತಾಂಶದ ಭಾಗವನ್ನು ಭದ್ರಪಡಿಸಲು ಬಳಸಿದ ಕಾಗದದ ಸೀಲುಗಳ ಮೇಲೆ ನನ್ನ ಸ್ವಹಸ್ತಾಕ್ಷರದ ಸಹಿ ಹಾಕಿರುತ್ತೇನೆಂದು ಮತ್ತು ಅದರ ಮೇಲೆ, ಹಾಜರಿದ್ದ ಸಹಿ ಹಾಕಲು ಇಚ್ಛಿಸುವ ಪೋಲಿಂಗ್ ಏಜೆಂಟರ ಸಹಿಗಳನ್ನು ಪಡೆದುಕೊಂಡಿರುತ್ತೇನೆ.

3) ನಾನು, ವಿಶೇಷ ಟ್ಯಾಗಿನ ಮೇಲೆ ಕಂಟ್ರೋಲ್ ಯೂನಿಟ್‌ನ ಕ್ರಮಸಂಖ್ಯೆಯನ್ನು ಬರೆದಿದ್ದೇನೆ ಮತ್ತು ವಿಶೇಷ ಟ್ಯಾಗಿನ ಹಿಂಬದಿ ಮೇಲೆ ನನ್ನ ಸಹಿಯನ್ನು ಹಾಕಿದ್ದೇನೆ ಮತ್ತು ಅದರ ಮೇಲೆ, ಹಾಜರಿದ್ದ ಹಾಗೂ ಸಹಿ ಹಾಕಲು ಇಚ್ಛಿಸಿದ ಅಭ್ಯರ್ಥಿಗಳು/ ಪೋಲಿಂಗ್ ಏಜೆಂಟರುಗಳ ಸಹಿಗಳನ್ನು ಸಹ ಪಡೆದಿದ್ದೇನೆ.

4) ನಾನು, ಸ್ಟ್ರಿಪ್‌ಸೀಲ್‌ನ ಮೇಲೆ ನನ್ನ ಸಹಿಯನ್ನು ಹಾಕಿದ್ದೇನೆ ಮತ್ತು ಅದರ ಮೇಲೆ, ಹಾಜರಿದ್ದ ಹಾಗೂ ಸಹಿ ಹಾಕಲು ಇಚ್ಛಿಸಿದ ಅಭ್ಯರ್ಥಿಗಳು/ ಪೋಲಿಂಗ್ ಏಜೆಂಟರುಗಳ ಸಹಿಗಳನ್ನು ಸಹ ಪಡೆದಿದ್ದೇನೆ.

5) ನಾನು, ವಿಶೇಷ ಟ್ಯಾಗಿನ ಮೇಲೆ ಮೊದಲೇ ಮುದ್ರಿಸಿದ್ದ ಕ್ರಮಸಂಖ್ಯೆಯನ್ನು ಓದಿ ಹೇಳಿದ್ದೇನೆ ಮತ್ತು ಹಾಜರಿದ್ದ ಅಭ್ಯರ್ಥಿಗಳು/ಪೋಲಿಂಗ್ ಏಜೆಂಟರುಗಳಿಗೆ ಕ್ರಮಸಂಖ್ಯೆಯನ್ನು ಬರೆದುಕೊಳ್ಳುವಂತೆ ತಿಳಿಸಿದ್ದೇನೆ.

ಸಹಿ:-----------

ಪ್ರಿಸೈಡಿಂಗ್ ಅಧಿಕಾರಿ

ಪೋಲಿಂಗ್ ಏಜೆಂಟ್‌ರ ಸಹಿ :

1. .....................(................... ಅಭ್ಯರ್ಥಿ) 2. .....................(................... ಅಭ್ಯರ್ಥಿ)
3. .....................(................... ಅಭ್ಯರ್ಥಿ) 4. .....................(................... ಅಭ್ಯರ್ಥಿ)
5. .....................(................... ಅಭ್ಯರ್ಥಿ) 6. .....................(.................. ಅಭ್ಯರ್ಥಿ)
7. .....................(................... ಅಭ್ಯರ್ಥಿ) 8. .....................(................... ಅಭ್ಯರ್ಥಿ)
9. .....................(................... ಅಭ್ಯರ್ಥಿ)

ಈ ಮುಂದಿನ ಪೋಲಿಂಗ್ ಏಜೆಂಟ್ (ಏಜೆಂಟರು) ಈ ಘೋಷಣಾ ಪತ್ರದ ಮೇಲೆ ತಮ್ಮ ಸಹಿ ಮಾಡಲು ನಿರಾಕರಿಸಿದ್ದಾರೆ:

1. .....................(................... ಅಭ್ಯರ್ಥಿ)
2. .....................(................... ಅಭ್ಯರ್ಥಿ)
3. .....................(................... ಅಭ್ಯರ್ಥಿ)
4. .....................(................... ಅಭ್ಯರ್ಥಿ)

ದಿನಾಂಕ:------------

ಸಹಿ-----------

ಪ್ರಿಸೈಡಿಂಗ್ ಅಧಿಕಾರಿ

## ಭಾಗ– II

## ಹೆಚ್ಚಿನ ಮತಯಂತ್ರವನ್ನೇನಾದರೂ ಉಪಯೋಗಿಸುವ ಸಮಯದಲ್ಲಿ ಪ್ರಿಸೈಡಿಂಗ್ ಅಧಿಕಾರಿಯು ಮಾಡಬೇಕಾದ ಘೋಷಣೆ, ಯಾವುದಾದರೂ ಇದ್ದರೆ,

------------------ ಲೋಕಸಭೆ / ವಿಧಾನಸಭಾ ಕ್ಷೇತ್ರಕ್ಕೆ ಚುನಾವಣೆ.

ನಾನು ಈ ಮೂಲಕ:

(1) ನಾನು, ಹಾಜರಿದ್ದ ಪೋಲಿಂಗ್ ಏಜೆಂಟರು ಮತ್ತು ಇತರ ವ್ಯಕ್ತಿಗಳಿಗೆ,–

(ಎ) ಮತಯಂತ್ರ ಸಂಪೂರ್ಣವಾಗಿ ಕಾರ್ಯನಿರ್ವಹಿಸುವ ಸ್ಥಿತಿಯಲ್ಲಿದೆ ಮತ್ತು ಅದರಲ್ಲಿ ಈ ಮೊದಲು ಯಾವ ಮತವನ್ನು ದಾಖಲಿಸಿಲ್ಲವೆಂದು ಅಣಕು ಮತದಾನ ನಡೆಸುವ ಮೂಲಕ;

– ಪ್ರಾತ್ಯಕ್ಷಿಕೆ ನಡೆಸಿರುವೆನೆಂದು

(ಬಿ) ಮತದಾನದ ಸಮಯದಲ್ಲಿ ಬಳಸಲಾಗುವ ಮತದಾರರ ಪಟ್ಟಿಯ ಗುರುತು ಮಾಡಿದ ಪ್ರತಿಯು, ಅಂಚೆ ಮತಪತ್ರಗಳು ಮತ್ತು ಚುನಾವಣಾ ಕರ್ತವ್ಯದ ಪ್ರಮಾಣಪತ್ರಗಳನ್ನು ನೀಡುವುದಕ್ಕೆ ಬಳಸುವ ಗುರುತುಗಳನ್ನಲ್ಲದೆ ಬೇರಾವ ಗುರುತುಗಳನ್ನೂ ಒಳಗೊಂಡಿಲ್ಲವೆಂದು;

(ಸಿ) ಮತದಾನದ ಸಮಯದಲ್ಲಿ ಬಳಸಲಾಗುವ ಮತದಾರರ ರಿಜಿಸ್ಟರು (ನಮೂನೆ 17ಎ) ಯಾರೇ ಮತದಾರನ ಸಂಬಂಧದಲ್ಲಿ ಯಾವುವೇ ನಮೂದನ್ನು ಒಳಗೊಂಡಿರುವುದಿಲ್ಲವೆಂದು;

(2) ಮತಯಂತ್ರದ ಕಂಟ್ರೋಲ್ ಯೂನಿಟ್‌ನ ಫಲಿತಾಂಶ ಭಾಗವನ್ನು (ರಿಸಲ್ಟ್ ಸೆಕ್ಷನ್) ಭದ್ರಪಡಿಸುವುದಕ್ಕೆ ಬಳಸಿದ ಪೇಪರ್ ಸೀಲಿನ (ಸೀಲುಗಳ) ಮೇಲೆ ನನ್ನ ಸ್ವಂತ ಸಹಿಯನ್ನು ಹಾಕಿದ್ದೇನೆಂದು ಮತ್ತು ಹಾಜರಿರುವಂಥ ಹಾಗೂ ಅದಕ್ಕೆ ಸಹಿ ಮಾಡಲು ಇಚ್ಛಿಸುವಂಥ ಪೋಲಿಂಗ್ ಏಜೆಂಟರ ಸಹಿಗಳನ್ನು ಅದರ ಮೇಲೆ ಪಡೆದಿದ್ದೇನೆಂದು;

(2) ವಿಶೇಷ ಟ್ಯಾಗಿನ ಮೇಲೆ ಕಂಟ್ರೋಲ್ ಯೂನಿಟ್‌ನ ಕ್ರಮ ಸಂಖ್ಯೆಯನ್ನು ಬರೆದಿರುವೆನೆಂದು ಹಾಗೂ ವಿಶೇಷ ಟ್ಯಾಗಿನ ಹಿಂಭಾಗದಲ್ಲಿ ನನ್ನ ಸಹಿ ಹಾಕಿರುವೆನೆಂದು ಮತ್ತು ಹಾಜರಿದ್ದ ಹಾಗೂ ತಮ್ಮ ಸಹಿಯನ್ನು ಹಾಕಲು ಇಚ್ಛಿಸಿದಂಥ ಅಭ್ಯರ್ಥಿಗಳು / ಪೋಲಿಂಗ್ ಏಜೆಂಟರ ಸಹಿಗಳನ್ನು ಸಹ ಅದರ ಮೇಲೆ ಪಡೆದಿರುವೆನೆಂದು;

(3) ಸ್ಟ್ರಿಪ್ ಸೀಲಿನ ಮೇಲೆ ನನ್ನ ಸಹಿಯನ್ನು ಹಾಕಿರುವೆನೆಂದು ಹಾಗೂ ಹಾಜರಿದ್ದ ಮತ್ತು ತಮ್ಮ ಸಹಿಯನ್ನು ಹಾಕಲು ಇಚ್ಛಿಸುವಂಥ ಅಭ್ಯರ್ಥಿಗಳು/ ಪೋಲಿಂಗ್ ಏಜೆಂಟರ ಸಹಿಗಳನ್ನು ಸಹ ಅದರ ಮೇಲೆ ಪಡೆದಿರುವೆನೆಂದು;

(4) ವಿಶೇಷ ಟ್ಯಾಗಿನ ಪೂರ್ವಮುದ್ರಿತ ಕ್ರಮಸಂಖ್ಯೆಯನ್ನು ಗಟ್ಟಿಯಾಗಿ ಓದಿ ಹೇಳಿದೆ ಮತ್ತು ಹಾಜರಿದ್ದ ಅಭ್ಯರ್ಥಿಗಳು / ಪೋಲಿಂಗ್ ಏಜೆಂಟರು ಕ್ರಮಸಂಖ್ಯೆಯನ್ನು ಬರೆದುಕೊಳ್ಳಬೇಕೆಂದು ಹೇಳಿರುವೆನೆಂದು

– ಘೋಷಿಸುತ್ತೇನೆ.

ಪೋಲಿಂಗ್ ಏಜೆಂಟ್‌ರ ಸಹಿ

ಸಹಿ:-----------

ಪ್ರಿಸೈಡಿಂಗ್ ಅಧಿಕಾರಿ

1. -------------- (ಅಭ್ಯರ್ಥಿಯ ಏಜೆಂಟ್)
2. -------------- (ಅಭ್ಯರ್ಥಿಯ ಏಜೆಂಟ್)
3. -------------- (ಅಭ್ಯರ್ಥಿಯ ಏಜೆಂಟ್)
4. -------------- (ಅಭ್ಯರ್ಥಿಯ ಏಜೆಂಟ್)
5. -------------- (ಅಭ್ಯರ್ಥಿಯ ಏಜೆಂಟ್)
6. -------------- (ಅಭ್ಯರ್ಥಿಯ ಏಜೆಂಟ್)
7. -------------- (ಅಭ್ಯರ್ಥಿಯ ಏಜೆಂಟ್)
8. -------------- (ಅಭ್ಯರ್ಥಿಯ ಏಜೆಂಟ್)
9. -------------- (ಅಭ್ಯರ್ಥಿಯ ಏಜೆಂಟ್)

ಈ ಮುಂದಿನ ಪೋಲಿಂಗ್ ಏಜೆಂಟ್‌ನು (ರು) ಈ ಘೋಷಣೆಗೆ ತನ್ನ (ತಮ್ಮ) ಸಹಿ (ಗಳನ್ನು) ಹಾಕಲು ನಿರಾಕರಿಸಿರುವನು / ನಿರಾಕರಿಸಿರುವರು

1. -------------- (ಅಭ್ಯರ್ಥಿಯ ಏಜೆಂಟ್)
2. -------------- (ಅಭ್ಯರ್ಥಿಯ ಏಜೆಂಟ್)
3. -------------- (ಅಭ್ಯರ್ಥಿಯ ಏಜೆಂಟ್)
4. -------------- (ಅಭ್ಯರ್ಥಿಯ ಏಜೆಂಟ್)

ದಿನಾಂಕ:------------

ಸಹಿ-----------

ಪ್ರಿಸೈಡಿಂಗ್ ಅಧಿಕಾರಿ

## ಭಾಗ– III

### ಮತದಾನದ ಕೊನೆಯಲ್ಲಿ ಮಾಡುವ ಘೋಷಣೆ

ನಾನು ಮತದಾನದ ಕೊನೆಯಲ್ಲಿ ಮತಗಟ್ಟೆಯಲ್ಲಿ ಹಾಜರಿದ್ದ ಮತ್ತು ಈ ಮುಂದೆ ಸಹಿ ಮಾಡಿರುವ ಪೋಲಿಂಗ್ ಏಜೆಂಟರಿಗೆ, 1961ರ ಚುನಾವಣೆ ನಡೆಸುವ ನಿಯಮಗಳ ನಿಯಮ 49ಎಸ್(2)ರನ್ವಯ ನಮೂನೆ 17(ಎ)ನಲ್ಲಿ 'ಭಾಗ–Iರಲ್ಲಿ ದಾಖಲಾದ ಮತಗಳ ಲೆಕ್ಕ'ದಲ್ಲಿನ ನಮೂದುಗಳ ಪ್ರತಿಯೊಂದರ ದೃಢೀಕೃತ ನಕಲನ್ನು ಒದಗಿಸಿದ್ದೇನೆ.

ಸಹಿ---------------

ಪ್ರಿಸೈಡಿಂಗ್ ಅಧಿಕಾರಿ

ದಿನಾಂಕ: --------

ಸಮಯ: --------

ದಾಖಲಾದ ಮತಗಳ ಲೆಕ್ಕದಲ್ಲಿನ (ನಮೂನೆ–17ಸಿ ಯ ಭಾಗ I) ನಮೂದುಗಳ ದೃಢೀಕೃತ ನಕಲನ್ನು ಸ್ವೀಕರಿಸಿದ್ದೇನೆ.

ಪೋಲಿಂಗ್ ಏಜೆಂಟರ ಸಹಿ:

1. ------ (------ಅಭ್ಯರ್ಥಿ) 2. ------- (-------ಅಭ್ಯರ್ಥಿ)

3. ------ (-------ಅಭ್ಯರ್ಥಿ) 4. ------- (-------ಅಭ್ಯರ್ಥಿ)

5. ------ (------ಅಭ್ಯರ್ಥಿ) 6. ------- (-------ಅಭ್ಯರ್ಥಿ)

7. ------ (-------ಅಭ್ಯರ್ಥಿ) 8. ------- (-------ಅಭ್ಯರ್ಥಿ)

9. ------ (-------ಅಭ್ಯರ್ಥಿ)

ಮತದಾನದ ಕೊನೆಯಲ್ಲಿ ಮತಗಟ್ಟೆಯಲ್ಲಿ ಹಾಜರಿದ್ದ ಈ ಮುಂದಿನ ಮತಗಟ್ಟೆ ಏಜೆಂಟರುಗಳು ನಮೂನೆ 17ಸಿ ಭಾಗ 1ರ ದೃಢೀಕೃತ ಪ್ರತಿಯನ್ನು ಸ್ವೀಕರಿಸಲು ಮತ್ತು ಹಾಗೆ ಸ್ವೀಕರಿಸಿದ ಬಗ್ಗೆ ಸ್ವೀಕೃತಿಯನ್ನು ನೀಡಲು ನಿರಾಕರಿಸಿದ ಕಾರಣ ಸದರಿ ನಮೂನೆಯ ದೃಢೀಕೃತ ಪ್ರತಿಯನ್ನು ಅವರಿಗೆ ಕೊಟ್ಟಿರುವುದಿಲ್ಲ.

1. ------ (------ಅಭ್ಯರ್ಥಿ)
2. ------- (-------ಅಭ್ಯರ್ಥಿ)
3. ------ (-------ಅಭ್ಯರ್ಥಿ)
4. ------- (-------ಅಭ್ಯರ್ಥಿ)
5. ------ (------ಅಭ್ಯರ್ಥಿ)
6. ------- (-------ಅಭ್ಯರ್ಥಿ)
7. ------ (-------ಅಭ್ಯರ್ಥಿ)
8. ------- (-------ಅಭ್ಯರ್ಥಿ)
9. ------- (-------ಅಭ್ಯರ್ಥಿ)

ದಿನಾಂಕ: --------------

ಸಮಯ: --------------

ಸಹಿ-----------

ಪ್ರಿಸೈಡಿಂಗ್ ಅಧಿಕಾರಿ

## ಭಾಗ –IV

## ಮತಯಂತ್ರವನ್ನು ಮೊಹರು ಮಾಡಿದ ತರುವಾಯ ಘೋಷಣೆ

ಮತಯಂತ್ರದ ಕಂಟ್ರೋಲ್ ಯೂನಿಟ್‌ನ್ನು ಮತ್ತು ಬ್ಯಾಲೆಟ್ ಯೂನಿಟ್‌ಗಳನ್ನು ಸಾಗಿಸುವ ಪೆಟ್ಟಿಗೆಗಳ ಮೇಲೆ ನಾನು ನನ್ನ ಮೊಹರುಗಳನ್ನು ಹಾಕಿದ್ದೇನೆ ಮತ್ತು ಮತದಾನ ಮುಕ್ತಾಯವಾದಾಗ ಮತಗಟ್ಟೆಯಲ್ಲಿ ಹಾಜರಿದ್ದ ಮತಗಟ್ಟೆ ಏಜೆಂಟರಿಗೆ ತಮ್ಮ ಮೊಹರುಗಳನ್ನು ಹಾಕಲು ಅವಕಾಶ ನೀಡಿದ್ದೇನೆ.

ಸಹಿ------

ಪ್ರಿಸೈಡಿಂಗ್ ಅಧಿಕಾರಿ

ದಿನಾಂಕ: ---------------

ಸಮಯ: ---------------

ಈ ಮುಂದಿನ ಮತಗಟ್ಟೆ ಏಜೆಂಟರು ತಮ್ಮ ಮೊಹರುಗಳನ್ನು ಹಾಕಿರುತ್ತಾರೆ.

ಮತಗಟ್ಟೆ ಏಜೆಂಟ್‌ರ ಸಹಿ:

1. ------ (------ಅಭ್ಯರ್ಥಿ) 2. ------- (-------ಅಭ್ಯರ್ಥಿ)

3. ------ (-------ಅಭ್ಯರ್ಥಿ ) 4. ------- (-------ಅಭ್ಯರ್ಥಿ)

5. ------ (------ಅಭ್ಯರ್ಥಿ) 6. ------- (-------ಅಭ್ಯರ್ಥಿ)

ಈ ಮುಂದಿನ ಮತಗಟ್ಟೆ ಏಜೆಂಟರು ತಮ್ಮ ಮೊಹರು ಹಾಕಲು ನಿರಾಕರಿಸಿರುತ್ತಾರೆ ಅಥವಾ ಮೊಹರು ಹಾಕಲು ಇಚ್ಛಿಸಲಿಲ್ಲ.

1. ------ (------ಅಭ್ಯರ್ಥಿ) 2. ------- (-------ಅಭ್ಯರ್ಥಿ)

3. ------ (-------ಅಭ್ಯರ್ಥಿ) 4. ------- (-------ಅಭ್ಯರ್ಥಿ)

ದಿನಾಂಕ: --------------- ಸಹಿ-------

ಪ್ರಿಸೈಡಿಂಗ್ ಅಧಿಕಾರಿ

# ಪರಿಶಿಷ್ಟ – IV

(ಪ್ಯಾರಾ 38.1 ಅನ್ನು ನೋಡಿ)

ನಮೂನೆ 14

ಆಕ್ಷೇಪಿತ ಮತಗಳ ಪಟ್ಟಿ

(ನಿಯಮ 36(2)(ಸಿ) ಯನ್ನು ನೋಡಿ)

------------------------------ ಚುನಾವಣಾ ಕ್ಷೇತ್ರದಿಂದ* ----------ಗೆ

ಚುನಾವಣೆ

ಮತಗಟ್ಟೆ ----------------------------

| ಕ್ರಮ ಸಂಖ್ಯೆ | ಮತದಾರನ ಹೆಸರು | ಮತದಾರರ ಪಟ್ಟಿಯ ಭಾಗ | ಆ ಭಾಗದಲ್ಲಿ ಮತದಾರರ ಹೆಸರು | ಆಕ್ಷೇಪಿತ ವ್ಯಕ್ತಿಯ ಸಹಿ ಅಥವಾ ಹೆಬ್ಬೆಟ್ಟಿನ ಗುರುತು | ಆಕ್ಷೇಪಿತ ವ್ಯಕ್ತಿಯ ವಿಳಾಸ | ಗುರುತಿಸಿರುವ ವ್ಯಕ್ತಿ ಯಾರಾದರೂ ಇದ್ದಲ್ಲಿ ಅವರ ಹೆಸರು | ಆಕ್ಷೇಪಕಾರನ ಹೆಸರು | ಪ್ರಿಸೈಡಿಂಗ್ ಅಧಿಕಾರಿಯ ಆದೇಶ | ಠೇವಣಿಯ ಮರುಪಾವತಿಯನ್ನು ಸ್ವೀಕರಿಸುವ ಆಕ್ಷೇಪಕಾರ ಹೆಸರು ಮತ್ತು ಸಹಿ |
|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 |
| | | | | | | | | | |

ದಿನಾಂಕ: --------

ಪ್ರಿಸೈಡಿಂಗ್ ಅಧಿಕಾರಿಯವರ ಸಹಿ

* ಇಲ್ಲಿ ಚುನಾವಣೆಯ ಸೂಕ್ತ ವಿವರಗಳನ್ನು ಬರೆಯಬೇಕು.

## ಪರಿಶಿಷ್ಟ – V

(ಪ್ಯಾರಾ 41.1ನ್ನು ನೋಡಿ)

ಮತದಾರನು ಮಾಡುವ ಘೋಷಣೆಯ ನಮೂನೆ

----------------- ಒಂದನೆ ಜನವರಿಯಂದು ನನ್ನ ವಯಸ್ಸು 18ಕ್ಕಿಂತ ಹೆಚ್ಚಾಗಿತ್ತೆಂದು ಈ ಮೂಲಕ ನಾನು ಪ್ರಮಾಣಪೂರ್ವಕವಾಗಿ ಘೋಷಿಸುತ್ತೇನೆ ಮತ್ತು ದೃಢೀಕರಿಸುತ್ತೇನೆ. ಮತದಾರರ ಪಟ್ಟಿಯಲ್ಲಿ ಯಾವುದೇ ಹೆಸರನ್ನು ಸೇರಿಸುವುದು ಅಥವಾ ಸಿದ್ಧಪಡಿಸುವುದು, ಮತದಾರರ ಪಟ್ಟಿಯ ಪರಿಷ್ಕರಣೆಯ ಅಥವಾ ತಿದ್ದುಪಡಿಯ ಸಂಬಂಧದಲ್ಲಿ ಮಾಡುವ ಯಾವುದೇ ತಪ್ಪು ಘೋಷಣೆಗೆ 1950ರ ಜನತಾ ಪ್ರಾತಿನಿಧ್ಯ ಅಧಿನಿಯಮದ ಪ್ರಕರಣ 31ರ ದಂಡನೆಯ ಉಪಬಂಧಗಳ ಬಗ್ಗೆ ನನಗೆ ತಿಳಿದಿದೆ.

ಮತದಾರನ ಸಹಿ ಹೆಬ್ಬೆಟ್ಟಿನ ಗುರುತು --------

ತಂದೆ ತಾಯಿ ಗಂಡನ ಹೆಸರು -----------------

ಮತದಾರರ ಪಟ್ಟಿಯ ಭಾಗದ ಸಂಖ್ಯೆ --------------

ಮತದಾರನ ಕ್ರಮ ಸಂಖ್ಯೆ -----------------

ದಿನಾಂಕ---------

ನನ್ನ ಮುಂದೆ, ಮೇಲ್ಕಂಡ ಹೆಸರಿನ ಮತದಾರನು ಸಹಿ ಮಾಡಿದ್ದಾನೆ ಮತ್ತು ಮೇಲಿನ ಘೋಷಣೆಯನ್ನು ಮಾಡಿದ್ದಾನೆ ಎಂದು ಪ್ರಮಾಣೀಕರಿಸಿದ್ದೇನೆ.

------------

ಪ್ರಿಸೈಡಿಂಗ್ ಆಫೀಸರ್ ಸಹಿ

ಮತಗಟ್ಟೆ ಸಂಖ್ಯೆ ಮತ್ತು ಹೆಸರು -----------

ದಿನಾಂಕ: ----------

# ಪರಿಶಿಷ್ಟ – VI

(ಪ್ಯಾರಾ 42.2)

ವರ್ಗೀಕರಿಸಲಾದ ಸೇವಾ ಮತದಾರರು ಮತ್ತು ಪ್ರತಿನಿಧಿಗಳ ಮತಗಟ್ಟೆವಾರು ಉಪ–ಪಟ್ಟಿ

(ಚುನಾವಣೆ ನಡೆಸುವ ನಿಯಮಗಳು, 1961ರ ನಿಯಮ 27ಪಿ (3)ನ್ನು ನೋಡಿ)

1. ಚುನಾವಣಾ ಕ್ಷೇತ್ರದ ಸಂಖ್ಯೆ ಮತ್ತು ಹೆಸರು:
2. ಮತದಾರರ ಪಟ್ಟಿಯ ಭಾಗ ಸಂಖ್ಯೆ:

| ಕ್ರ. ಸಂ. | ವರ್ಗೀಕೃತ ಸೇವಾ ಮತ ದಾರನ ಹೆಸರು (ಸಿ.ಎಸ್.ವಿ) | ಆತನು ಸೇರಿರುವ ದಳದ ಹೆಸರು ಮತ್ತು ಸೇವಾ ಐಡಿ ಸಂಖ್ಯೆ | ವಯಸ್ಸು | ತಂದೆಯ/ ಗಂಡನ/ ತಾಯಿಯ ಹೆಸರು | ವಿಳಾಸ | ಮತ ದಾರರ ಪಟ್ಟಿಯ ಕೊನೆಯ ಭಾಗ ದಲ್ಲಿರುವ ಆತನ ಹೆಸರಿನ ಕ್ರ.ಸಂ. | ಪ್ರತಿ– ನಿಧಿಯ ಹೆಸರು | ಪ್ರತಿ– ನಿಧಿಯ ವಯಸ್ಸು | ತಂದೆಯ/ ಗಂಡನ/ ತಾಯಿಯ ಹೆಸರು | ಪ್ರತಿನಿಧಿಯ ಪೂರ್ತಿ ವಿಳಾಸ |
|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 |
| | | | | | | | | | | |
| | | | | | | | | | | |
| | | | | | | | | | | |
| | | | | | | | | | | |

# ಪರಿಶಿಷ್ಟ– VII

(ಪ್ಯಾರಾ 43.3 ನೋಡಿ)

ಅಂಧ ಅಥವಾ ಅಶಕ್ತ ಮತದಾರರ ಸಂಗಡಿಗರಿಂದ ಘೋಷಣೆ

---------------------- ವಿಧಾನಸಭಾ ಚುನಾವಣಾ ಕ್ಷೇತ್ರ

(--------------------- ಸಂಸತ್ತಿನ ಚುನಾವಣಾ ಕ್ಷೇತ್ರದ ಒಳಗೆ ಬರುತ್ತದೆ)

ಮತಗಟ್ಟೆಯ ಕ್ರಮಸಂಖ್ಯೆ ಮತ್ತು ಹೆಸರು -------------------------

---------------------* ಸ್ಥಳದಲ್ಲಿ ವಾಸ ಮಾಡುತ್ತಿರುವ ------------ರವರ ಮಗನಾದ ------------------ ವರ್ಷ ವಯಸ್ಸಿನ --------------- ಎಂಬ ನಾನು, ಈ ಮೂಲಕ ಘೋಷಿಸುವುದೇನೆಂದರೆ:

ಎ) ನಾನು, ಇಂದು -------------------- ದಿನಾಂಕದಂದು ಯಾವುದೇ ಮತಗಟ್ಟೆಯಲ್ಲಿ ಯಾರೇ ಇತರ ಮತದಾರನಿಗೆ ಸಂಗಡಿಗನಾಗಿ ಬಂದಿರಲಿಲ್ಲ; ಮತ್ತು

ಬಿ) ---------------- ಇವರ ಪರವಾಗಿ ನಾನು ದಾಖಲು ಮಾಡಿರುವ ಮತದ ಬಗ್ಗೆ ನಾನು ಗೌಪ್ಯತೆಯನ್ನು ಕಾಪಾಡುತ್ತೇನೆ.

ದಿನಾಂಕ ------------- -------------

ಸಂಗಡಿಗನ ಸಹಿ

* ಪೂರ್ಣ ವಿಳಾಸವನ್ನು ನೀಡಬೇಕು.

\+ ಮತದಾರನ ಹೆಸರು, ಭಾಗದ ಸಂಖ್ಯೆ ಮತ್ತು ಕ್ರಮಸಂಖ್ಯೆ

() ಏಕಕಾಲದಲ್ಲಿ ಚುನಾವಣೆಗಳು ನಡೆಯುವಾಗ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಭರ್ತಿ ಮಾಡಬೇಕು.

# ಪರಿಶಿಷ್ಟ –VIII

(ಪ್ಯಾರಾ 26.1ನ್ನು ನೋಡಿ)

ನಮೂನೆ –17ಸಿ

[49ಎಸ್ ಮತ್ತು 56ಸಿ (2) ನಿಯಮಗಳನ್ನು ನೋಡಿ]

ಭಾಗ– I: ದಾಖಲಾದ ಮತಗಳ ಲೆಕ್ಕ

––––––––––––––– : ರಾಜ್ಯ: ಕೇಂದ್ರಾಡಳಿತ ಪ್ರದೇಶದ ಲೋಕಸಭೆ/ ವಿಧಾನಸಭೆಗೆ ಚುನಾವಣೆ

ಮತಗಟ್ಟೆ ಸಂಖ್ಯೆ ಮತ್ತು ಹೆಸರು : ––––––––––––––––

ಮತಗಟ್ಟೆಯಲ್ಲಿ ಬಳಸಲಾದ ಮತಯಂತ್ರದ ಗುರುತಿನ ಸಂಖ್ಯೆ : ––––––––––––––

ಕಂಟ್ರೋಲ್ ಯೂನಿಟ್: –––––––––––––––––––––

ಬ್ಯಾಲೆಟಿಂಗ್ ಯೂನಿಟ್ಟು: ––––––––––––––––

ಪ್ರಿಂಟರ್ (ಬಳಸಿದ್ದಲ್ಲಿ): –––––––––––––––

1. ಮತಗಟ್ಟೆಗೆ ವಹಿಸಿದ ಮತದಾರರ ಒಟ್ಟು ಸಂಖ್ಯೆ
2. ಮತದಾರರ ರಿಜಿಸ್ಟರಿನಲ್ಲಿ ದಾಖಲಾದಂತೆ
   ಮತದಾರರ ಒಟ್ಟು ಸಂಖ್ಯೆ (ನಮೂನೆ 17ಎ)
3. ನಿಯಮ 49ಒ ಮೇರೆಗೆ ಮತವನ್ನು ದಾಖಲು
   ಮಾಡದೇ ಇರಲು ನಿರ್ಧರಿಸಿದ ಮತದಾರರ ಸಂಖ್ಯೆ
4. ನಿಯಮ 49ಎಂ ಮೇರೆಗೆ ಮತಹಾಕಲು ಅವಕಾಶ
   ನೀಡದೇ ಇರುವ ಮತದಾರರ ಸಂಖ್ಯೆ

5. ಅಗತ್ಯಪಡಿಸಿದ 49ಎಂಎ(ಡಿ) ನಿಯಮದ ಅಡಿಯಲ್ಲಿ ದಾಖಲಾದ ಪರೀಕ್ಷಾರ್ಥ ಮತಗಳನ್ನು ಕಳೆಯಬೇಕಾಗಿದ್ದು –.

(ಎ) ಕಳೆಯಬೇಕಾದ ಒಟ್ಟು ಪರಿಕ್ಷಾರ್ಥ ಮತಗಳ ಸಂಖ್ಯೆ:

| ಒಟ್ಟು ಸಂಖ್ಯೆ | ನಮೂನೆ 17 (ಎ)ಯಲ್ಲಿ ಕ್ರಮಸಂಖ್ಯೆ | ಮತದಾರನ(ರ) |
|---|---|---|
| -------- | | |
| | ------------ | ------ |

(ಬಿ) ಯಾವ ಅಭ್ಯರ್ಥಿಗೆ ಪರೀಕ್ಷಾರ್ಥ ಮತಗಳನ್ನು ಹಾಕಲಾಗಿದೆ

| ಕ್ರಮ ಸಂಖ್ಯೆ | ಅಭ್ಯರ್ಥಿಯ ಹೆಸರು | ಮತಗಳ ಸಂಖ್ಯೆ |
|---|---|---|
| --------- | ------------ | ------------ |
| --------- | ------------ | ------------ |

6. ಮತಯಂತ್ರದ ಪ್ರಕಾರ ದಾಖಲಾಗಿರುವ ಮತಗಳ ಒಟ್ಟು ಸಂಖ್ಯೆ--------------

7. ಬಾಬು 2ರಲ್ಲಿ ತೋರಿಸಲಾದಂತಹ ಒಟ್ಟು ಮತಗಳ ಸಂಖ್ಯೆಯಲ್ಲಿ ಬಾಬು–3ರಲ್ಲಿನ ಮತಗಳನ್ನು ದಾಖಲಿಸದಿರಲು ನಿರ್ಧರಿಸಿರುವ ಮತದಾರರ ಸಂಖ್ಯೆಯನ್ನು ಮತ್ತು ಬಾಬು 4ರಲ್ಲಿನ ಮತದಾರರ ಸಂಖ್ಯೆಯನ್ನು ಕಳೆದರೆ (2–3–4) ಬರುವ ಸಂಖ್ಯೆಗೆ ಬಾಬು 6ರಲ್ಲಿ ತೋರಿಸಲಾದಂಥ ಒಟ್ಟು ಮತಗಳ ಸಂಖ್ಯೆಯು ತಾಳೆಯಾಗುತ್ತದೆಯೇ ಅಥವಾ ವ್ಯತ್ಯಾಸವೇನಾದರೂ ಕಂಡು ಬಂದಿದೆಯೇ?

8. ನಿಯಮ 49ಪಿ ಅನ್ವಯ ಟೆಂಡರ್ಡ್ ಮತಪತಗಳನ್ನು ನೀಡಲಾದ ಮತದಾರರ ಸಂಖ್ಯೆ

9. ಟೆಂಡರ್ಡ್ ಮತಪತ್ರಗಳ ಸಂಖ್ಯೆ

| | ಕ್ರಮ ಸಂಖ್ಯೆ | | |
|---|---|---|---|
| | ಒಟ್ಟು | ಯಿಂದ | ಗೆ |
| (ಎ) ಬಳಕೆಗಾಗಿ ಸ್ವೀಕರಿಸಿದ್ದು | ------------ | | |
| (ಬಿ) ಮತದಾರರಿಗೆ ನೀಡಿದ್ದು | ------------ | | |
| (ಸಿ) ಬಳಸದೇ ಹಿಂದಿರುಗಿಸಿದ್ದು | ------------ | | |

10. ಪೇಪರ್ ಸೀಲ್‌ಗಳ ಲೆಕ್ಕ :

1. ಬಳಕೆಗೆ ಒದಗಿಸಲಾದ ಪೇಪರ್ ಸೀಲ್‌ಗಳ ಸಂಖ್ಯೆ ಒಟ್ಟು ಸಂಖ್ಯೆ -----

ಕ್ರ. ಸಂಖ್ಯೆ --------- ಯಿಂದ -------- ಗೆ

2. ಬಳಸಲಾದ ಪೇಪರ್ ಸೀಲ್‌ಗಳ ಸಂಖ್ಯೆ ಒಟ್ಟು ಸಂಖ್ಯೆ ----

ಕ್ರ. ಸಂಖ್ಯೆ --------- ಯಿಂದ -------- ಗೆ

3. ಬಳಸದೇ ರಿಟರ್ನಿಂಗ್ ಅಧಿಕಾರಿಗೆ ಹಿಂದಿರುಗಿಸಿದ ಪೇಪರ್ ಸೀಲ್‌ಗಳ ಸಂಖ್ಯೆ ಒಟ್ಟು ಸಂಖ್ಯೆ----

4. ಹಾನಿಗೊಳಗಾದ ಪೇಪರ್ ಸೀಲ್ ಯಾವುದಾದರೂ ಇದ್ದರೆ, ಒಟ್ಟು ಸಂಖ್ಯೆ -----

ಕ್ರ. ಸಂಖ್ಯೆ --------- ಯಿಂದ -------- ಗೆ

ಮತಗಟ್ಟೆ ಏಜೆಂಟರ ಸಹಿ

1. ----------
2. ----------
3. ----------
4. ----------
5. -----------
6. ------------

ದಿನಾಂಕ:--------

ಸ್ಥಳ:----------

ಪ್ರಿಸೈಡಿಂಗ್ ಅಧಿಕಾರಿಯ ಸಹಿ

ಮತಗಟ್ಟೆ ಸಂಖ್ಯೆ ------------

## ಭಾಗ II–

## ಎಣಿಕೆಯ ಫಲಿತಾಂಶ

| ಅಭ್ಯರ್ಥಿಗಳ ಕ್ರಮ ಸಂಖ್ಯೆ | ಅಭ್ಯರ್ಥಿಗಳ ಹೆಸರು | ಕಂಟ್ರೋಲ್ ಯೂನಿಟ್‌ನಲ್ಲಿ ಪ್ರದರ್ಶಿತವಾದ ಮತಗಳ ಸಂಖ್ಯೆ | ಭಾಗ Iರ 5ನೇ ಬಾಬಿನ ಅನ್ವಯ ತೆಗೆದುಹಾಕಲಾದ ಪರೀಕ್ಷಾರ್ಥ ಮತಗಳ ಸಂಖ್ಯೆ | ಸಿಂಧುವಾದ ಮತ ಸಂಖ್ಯೆ (3–4) |
|---|---|---|---|---|
| (1) | (2) | (3) | (4) | (5) |
| 1 | | | | |
| 2 | | | | |
| 3 | | | | |
| 4 | | | | |
| 5 | | | | |
| ಎನ್ | ಮೇಲ್ಕಂಡ ಯಾರಿಗೂ ಮತ ಇಲ್ಲ (NOTA) | | | |
| ಒಟ್ಟು | | | | |

ಇಲ್ಲಿ ತೋರಿಸಿದ ಮತಗಳ ಒಟ್ಟು ಸಂಖ್ಯೆಯು ಭಾಗ Iರ 6ನೇ ಬಾಬಿನಲ್ಲಿ ತೋರಿಸಲಾದ ಒಟ್ಟು ಮತಗಳ ಸಂಖ್ಯೆಯೊಂದಿಗೆ ಹೋಲಿಕೆಯಾಗುತ್ತದೆಯೇ ಅಥವಾ ಎರಡೂ ಒಟ್ಟು ಸಂಖ್ಯೆಗಳ ನಡುವೆ ಯಾವುದಾದರೂ ವ್ಯತ್ಯಾಸ ಕಂಡುಬಂದಿದೆಯೇ

ಸ್ಥಳ ———————————

ದಿನಾಂಕ ——————————

ಎಣಿಕೆ ಮೇಲ್ವಿಚಾರಕರ ಸಹಿ

**ಅಭ್ಯರ್ಥಿ/ ಚುನಾವಣಾ ಏಜೆಂಟ್ / ಎಣಿಕೆ ಏಜೆಂಟನ ಹೆಸರು** **ಪೂರ್ಣ ಸಹಿ**

1
2
3
4
5
6
7

ಸ್ಥಳ: ———————————
ದಿನಾಂಕ ——————————

ರಿಟರ್ನಿಂಗ್ ಅಧಿಕಾರಿಯ ಸಹಿ

# ಅನುಬಂಧ –IX
## (ಪ್ಯಾರಾ 20.3)
## ಅಣಕು ಮತದಾನ ಪ್ರಮಾಣಪತ್ರ

---------------- ವಿಧಾನಸಭಾ ಕ್ಷೇತ್ರದ (ಅಥವಾ ---------------- ಲೋಕಸಭಾ ಕ್ಷೇತ್ರದ ಅಡಿಯಲ್ಲಿ ಬರುವ ------------------ ವಿಧಾನಸಭಾ ಕ್ಷೇತ್ರ) ------------------- ಸಂಖ್ಯೆಯ ಮತಗಟ್ಟೆಯಲ್ಲಿ ಪ್ರಿಸೈಡಿಂಗ್ ಆಫೀಸರ್ ಆಗಿರುವ --------------------- ಎಂಬ ನಾನು ಭಾರತ ಚುನಾವಣಾ ಆಯೋಗವು ನೀಡಿರುವ ಸೂಚನೆಗಳನ್ನು ಅನುಸರಿಸಿ ಮತದಾನದ ದಿನದಂದು ಅಂದರೆ,-------------------- ದಿನವಾದ ಈ ದಿನ ಬೆಳಿಗ್ಗೆ ------------------ ಗಂಟೆಯಲ್ಲಿ (ದಿನಾಂಕ) ಈ ಕೆಳಗಿನವುಗಳನ್ನು ಬಳಸಿ ಅಣಕು ಮತದಾನವನ್ನು ನಡೆಸಿದ್ದೇನೆಂದು ಪ್ರಮಾಣೀಕರಿಸುತ್ತೇನೆ.

ಸಿಯುನ ಕ್ರಮ ಸಂಖ್ಯೆ (ಸಿಯುನ ಹಿಂಭಾಗದಲ್ಲಿ ಮುದ್ರಿಸಲಾದಂತೆ)

ಬಿಯುನ ಕ್ರಮ ಸಂಖ್ಯೆ (ಬಿಯುನ ಹಿಂಭಾಗದಲ್ಲಿ ಮುದ್ರಿಸಲಾದಂತೆ)

ವಿವಿಪ್ಯಾಟ್‌ನ ಕ್ರಮ ಸಂಖ್ಯೆ (ವಿವಿಪ್ಯಾಟ್‌ನ ಮೇಲೆ ಮುದ್ರಿಸಲಾದಂತೆ)

1. ನೋಟಾ ಸೇರಿದಂತೆ ಪ್ರತಿಯೊಬ್ಬ ಅಭ್ಯರ್ಥಿಗಳಿಗಾಗಿ ಚಲಾಯಿಸಲಾದ ಒಟ್ಟು ಮತಗಳು ----------------
2. ಬಟನ್ ಅನ್ನು ಒತ್ತಿದಾಗ ಬೀಪ್ ಶಬ್ದ ಕೇಳಿಸುತ್ತದೆ ಮತ್ತು ಸೂಕ್ತ ಅಭ್ಯರ್ಥಿ/ ನೋಟಾ ಬಟನ್ನಿನ ವಿರುದ್ಧ ಇರುವ ಎಲ್‌ಇಡಿ ಲೈಟ್ ಹೊತ್ತಿಕೊಳ್ಳುತ್ತಿದೆ ಎಂದು ಪರಿಶೀಲಿಸಲಾಗಿದೆ.
3. ಅಣಕು ಮತದಾನದ ಸಮಯದಲ್ಲಿ ಮತದಾನ ಮಾಡಲ್ಪಟ್ಟ ಮತಗಳ ಅಭ್ಯರ್ಥಿವಾರು ವಿವರಗಳು ಮತ್ತು ಅದರ ಫಲಿತಾಂಶಗಳು ಈ ಮುಂದಿನಂತಿವೆ:

| ಕ್ರ. ಸಂ | ಅಭ್ಯರ್ಥಿಯ ಹೆಸರು | ಅಣಕು ಮತದಾನದ ಸಮಯದಲ್ಲಿ ಬಂದ ಮತಗಳ ಸಂಖ್ಯೆ | ಫಲಿತಾಂಶವನ್ನು ಪರೀಕ್ಷಿಸಿದಾಗ ಸಿಯುನಲ್ಲಿ ಪ್ರದರ್ಶಿತಗೊಂಡ ಮತಗಳ ಸಂಖ್ಯೆ | ಅಣಕು ಮತದಾನದ ಫಲಿತಾಂಶವನ್ನು ಪರಿಶೀಲಿಸಿ, ಎಣಿಸಿದುದ್ದರ ಅನ್ವಯ ಮುದ್ರಿತ ಕಾಗದದ ಚೀಟಿಗಳ ಸಂಖ್ಯೆ | ಚಲಾಯಿಸಲಾದ ಮತಗಳು ಮತ್ತು ಪ್ರದರ್ಶಿತಗೊಂಡ ಫಲಿತಾಂಶ ಹಾಗೂ ಮುದ್ರಿತ ಕಾಗದ ಚೀಟಿಗಳು (ವಿವಿಪ್ಯಾಟ್ ಅನ್ನು ಬಳಸಿದ್ದಲ್ಲಿ) ಪರಸ್ಪರ ತಾಳೆಯಾಗುವುದೇ ಎಂದು ಎಣಿಸಿ (ಹೌದು/ಇಲ್ಲ) |
|---|---|---|---|---|---|
| 1. | | | | | |
| 2. | | | | | |
| | | ನೋಟಾ | | | |
| | | ಒಟ್ಟು | | | |

4. ಅಣಕು ಮತದಾನದ ನಂತರ ನಾನು ವಿದ್ಯುನ್ಮಾನ ಮತಯಂತ್ರದಲ್ಲಿನ ಸ್ಮೃತಿಕೋಶವನ್ನು ಅಳಿಸಿಹಾಕಿದ್ದೇನೆ ಮತ್ತು ವಿವಿಪ್ಯಾಟ್‌ನ ಮುದ್ರಿತ ಕಾಗದದ ಚೀಟಿಗಳನ್ನು ಸಹ ತೆಗೆದಿದ್ದೇನೆ ಹಾಗೂ ಅದರಲ್ಲಿರುವ ಸ್ಮೃತಿಕೋಶವು ಸಂಪೂರ್ಣವಾಗಿ ಖಾಲಿಯಾಗಿರುವುದನ್ನು ಮತ್ತು ಒಟ್ಟು ಬಟನ್ ಒತ್ತಿದಾಗ ಅದರಲ್ಲಿ ಚಲಾಯಿಸಿದ ಒಟ್ಟು ಮತಗಳನ್ನು '0' ಎಂದು ತೋರಿಸುತ್ತಿದ್ದುದನ್ನು ಪರೀಕ್ಷಿಸಿದ್ದೇನೆ.
5. ಅಂಥ ಏಜೆಂಟರ ಹೆಸರುಗಳ ಎದುರು ಯಾವ ಅಭ್ಯರ್ಥಿಯ ಹೆಸರುಗಳನ್ನು ನಮೂದಿಸಲಾಗಿದೆಯೋ ಆ ಅಭ್ಯರ್ಥಿಯನ್ನು ಪ್ರತಿನಿಧಿಸುವ ಈ ಕೆಳಕಂಡ ಪೋಲಿಂಗ್ ಏಜೆಂಟರು ಅಣಕು ಮತದಾನದ ಸಮಯದಲ್ಲಿ ಹಾಜರಿದ್ದರು ಮತ್ತು ನಾನು ಅವರ ಸಹಿಗಳನ್ನು ಪಡೆದುಕೊಂಡಿದ್ದೇನೆ.
6. ವಾಸ್ತವವಾದ ಮತದಾನದ ಆರಂಭದಲ್ಲಿ ಸಿಯುನಲ್ಲಿ ಪ್ರದರ್ಶಿತವಾದ ಮತದಾನದ ಪ್ರಾರಂಭದ ದಿನಾಂಕ ಮತ್ತು ಸಮಯವನ್ನು ಪರಿಶೀಲಿಸಿದ್ದೇನೆ.

| ಕ್ರ. ಸಂ. | ಪೋಲಿಂಗ್ ಏಜೆಂಟನ ಹೆಸರು | ಪಕ್ಷದ ಹೆಸರು | ಅಭ್ಯರ್ಥಿಯ ಹೆಸರು | ಪೋಲಿಂಗ್ ಏಜೆಂಟರ ಸಹಿ |
|---|---|---|---|---|
| | | | | |
| | | | | |

**ಅಥವಾ**

ಅಣಕು ಮತದಾನಕ್ಕಾಗಿ ನಿಗದಿಪಡಿಸಿದ ಸಮಯದಲ್ಲಿ ಯಾರೇ ಪೋಲಿಂಗ್ ಏಜೆಂಟನು ಹಾಜರಿರಲಿಲ್ಲ/ ಚುನಾವಣೆಯಲ್ಲಿ ಸ್ಪರ್ಧಿಸಿರುವ ಅಭ್ಯರ್ಥಿಯ ಏಕೈಕ ಏಜೆಂಟನು ಹಾಜರಿದ್ದನು. ಇನ್ನೂ ಹೆಚ್ಚಿನ ಹದಿನೈದು ನಿಮಿಷಗಳ ಕಾಲ ಕಾದು ನೋಡಿದ ಬಳಿಕ, ನಾನು ಬೆಳಿಗ್ಗೆ ________ ಗಂಟೆಗೆ ಇತರ ಪೋಲಿಂಗ್ ಸಿಬ್ಬಂದಿಯೊಂದಿಗೆ ಅಣಕು ಮತದಾನವನ್ನು ನಡೆಸಿದ್ದೇನೆ.

ಸೂಕ್ಷ್ಮ ವೀಕ್ಷಕನ ಸಹಿ (ಆ ಮತಗಟ್ಟೆಗೆ ನೇಮಕ ಮಾಡಿದ್ದಲ್ಲಿ)

ದಿನಾಂಕ:
ಸಮಯ:

ಪ್ರಿಸೈಡಿಂಗ್ ಅಧಿಕಾರಿಯ ಸಹಿ ಮತ್ತು ಹೆಸರು
ಮತಗಟ್ಟೆ ಸಂಖ್ಯೆ --------
ಮತಗಟ್ಟೆ ಹೆಸರು---------